ಆನಂದ



ಎಚ್. ಆರ್. ರಾಮಕೃಷ್ಣ ರಾವ್
ಸಂಪಾದಕರು

ಐವತ್ತನೆಯ ಪುಸ್ತಕದ ಪ್ರಕಟಣೆಯ ಸಂದರ್ಭದಲ್ಲಿ

ಕನ್ನಡ ಸಂಘವನ್ನು ಕುರಿತ ಸದಾಶಯ ಸಂಚಿಕೆ

ಆನಂದ

ಎಚ್. ಆರ್. ರಾಮಕೃಷ್ಣರಾವ್

ಸಂಪಾದಕರು

ವಿದ್ಯಾರ್ಥಿ ಸಂಘ

ಕ್ರೈಸ್ಟ್ ಕಾಲೇಜು, ಬೆಂಗಳೂರು

ĀNANDA (Kannada Sangha Felicitation Volume)

Editor : Prof. H. R. Ramakrishna Rao, Dept. of Physics, Christ College, Hosur Road. Bangalore-560 029, Published by Students Union, Christ College, Hosur Road, Bangalore-560029

First Impression : 1991

Pages : 134+iv

ಬೆಲೆ : ಹದಿನೈದು ರೂಪಾಯಿ

ಮುಖಪುಟ ವಿನ್ಯಾಸ : ರವಿಕುಮಾರ್ ಕಾಶಿ

ಹಿನ್ನೆಲೆಯಲ್ಲಿ

ರೆ॥ ಫಾ॥ ಥಾಮಸ್ ಮೂಂಪ್ರ
ರೆ॥ ಫಾ॥ ಮಾಣಿಜ್ಯೆಲ್ಸ್
ರೆ॥ ಫಾ॥ ಅಂತೋಣಿ ಕರಿಯಲ್
ರೆ॥ ಫಾ॥ ಥಾಮಸ್ ಸಿ. ಮ್ಯಾಥ್ಯು
ಪ್ರೊ॥ ಎಚ್. ಡಿ. ಎಸ್. ಕೆ. ಶಾಸ್ತ್ರಿ
ಶ್ರೀ ಬಿ. ಎಸ್. ನಂಜುಂಡಯ್ಯ
ಶ್ರೀ ಎನ್. ಸೂರ್ಯನಾರಾಯಣ
ಶ್ರೀ ಬೇಬಿ ಮ್ಯಾಥ್ಯೂ
ಶ್ರೀ ಡೀನ್ ಐಸಾಕ್ ಜಾರ್ಜ್
ಮತ್ತು
ಕಾಲೇಜು ವಿದ್ಯಾರ್ಥಿ ಸಂಘ

ಮುದ್ರಕರು :

ರಶ್ಮಿ ಮುದ್ರಣ
ಸುಧಾಮನಗರ, ಬೆಂಗಳೂರು-560 027



ನಮ್ಮ ಆನಂದ

ಕ್ರೈಸ್ಟ್ ಕಾಲೇಜಿನ ಇತಿಹಾಸದಲ್ಲಿ ಒಂದು ಸ್ಮರಣೀಯ ಸಂದರ್ಭ, ನಮ್ಮ ಕಾಲೇಜಿನ ಕನ್ನಡ ಸಂಘ ಎಪ್ಪತ್ತು ಪುಸ್ತಕಗಳನ್ನು ಪ್ರಕಟಿಸಿದೆ. ಇದೊಂದು ಅಪೂರ್ವ ಸಾಧನೆ.

ಕನ್ನಡ ನಾಡಿನಲ್ಲಿ ಕ್ರೈಸ್ಟ್ ಕಾಲೇಜು ಹೆಚ್ಚಾಗಿ ಪರಿಚಿತವಾಗಿರುವುದು ಕನ್ನಡ ಸಂಘದ ಮೂಲಕ ಎಂದರೆ ಅತಿಶಯೋಕ್ತಿಯಲ್ಲ. ತಾನು ಮಾಡುವ ಕೆಲಸದಲ್ಲಿ ಅನಾವಶ್ಯಕ ಪ್ರದರ್ಶನವನ್ನು, ಅಬ್ಬರವನ್ನು ಮಾಡದೆ, ಒಳ್ಳೆಯ ಕೆಲಸವನ್ನು ಪ್ರೀತಿಯಿಂದ ಮಾಡುತ್ತಿದೆ. ಅನ್ಯಭಾಷಾ ವಿದ್ಯಾರ್ಥಿಗಳೊಂದಿಗೆ ಮಧುರ ಬಾಂಧವ್ಯವನ್ನು ಸ್ಥಾಪಿಸಿ, ಎಲ್ಲ ವಿದ್ಯಾರ್ಥಿಗಳ ಪ್ರೀತಿಗೆ ಪಾತ್ರವಾಗಿದೆ. ಆಧುನಿಕ ಕನ್ನಡ ಸಾಹಿತ್ಯ ಪರಿಚಾರಿಕೆಯ ನಕ್ಷೆಯಲ್ಲಿ ಸಹಜವಾಗಿ ತನ್ನ ಸ್ಥಾನವನ್ನು ಪಡೆದುಕೊಂಡಿದೆ.

ಕನ್ನಡ ಸಂಘದ ಐವತ್ತನೆಯ ಪುಸ್ತಕ ಪ್ರೊ॥ ಎ. ಎನ್. ಮೂರ್ತಿರಾಯರ 'ಸಮಗ್ರ ಲಲಿತ ಪ್ರಬಂಧಗಳು' ಬಿಡುಗಡೆಯಾದ ಸಂದರ್ಭದಲ್ಲಿ ಬರಬೇಕಾದ ಈ 'ಆನಂದ', ಅನಿವಾರ್ಯ ಕಾರಣಗಳಿಂದ ಎರಡು ವರ್ಷ ತಡವಾಗಿ ಬರುತ್ತಿದೆ. ಈ ಸದಾಶಯ ಸಂಚಿಕೆಯನ್ನು ನಮ್ಮ ವಿದ್ಯಾರ್ಥಿ ಸಂಘಕ್ಕೆ ಸಂತೋಷದಿಂದ ಸಂಪಾದಿಸಿಕೊಟ್ಟ ಪ್ರೊ॥ ಎಚ್. ಆರ್. ರಾಮಕೃಷ್ಣರಾವ್ ಅವರಿಗೆ ವಂದನೆಗಳು. ನಮ್ಮೆಲ್ಲರ ಆನಂದಕ್ಕೆ ಕಾರಣವಾದ ಕನ್ನಡ ಸಂಘ ನಿರಂತರವಾಗಿ ಒಳ್ಳೆಯ ಕೆಲಸಗಳನ್ನು ಮುಂದುವರಿಸಲಿ.

ಡೀನ್ ಐಸಾಕ್ ಜಾರ್ಜ್

1991

ಅಧ್ಯಕ್ಷ
ಕಾಲೇಜ್ ವಿದ್ಯಾರ್ಥಿ ಸಂಘ
ಕ್ರೈಸ್ಟ್ ಕಾಲೇಜು
ಬೆಂಗಳೂರು 560 029

ಪರಿವಿಡಿ



'ಆನಂದ' ಯೋಗ


ಎಚ್. ಆರ್. ರಾಮಕೃಷ್ಣರಾವ್

ಈ 'ಆನಂದ', ಕನ್ನಡ ಸಂಘ ತನ್ನ ಐವತ್ತನೆಯ ಪುಸ್ತಕವನ್ನು ಪ್ರಕಟಿಸಿದಾಗ ಬರಬೇಕಿತ್ತು. ಆದರೆ ಎಪ್ಪತ್ತನೆಯ ಪುಸ್ತಕ ಪ್ರಕಟಗೊಂಡಾಗ ಬರುತ್ತಿದೆ. ನಮ್ಮ ಕಾಲೇಜಿನ ಕನ್ನಡ ಸಂಘ ಮಾಡಿರುವ ಒಳ್ಳೆಯ ಕೆಲಸವನ್ನು ಸಾಹಿತ್ಯ ಪ್ರಿಯರೆಲ್ಲರೂ ಮೆಚ್ಚಿಕೊಂಡಿದ್ದಾರೆ. ಈ ಮೆಚ್ಚುಗೆಯ ಹೂಮಳೆಯನ್ನು ಇಲ್ಲಿ ದಾಖಲಿಸಲಾಗಿದೆ. ಈ ದಾಖಲೆಯೇ ಪರೋಕ್ಷವಾಗಿ ಕನ್ನಡ ಸಂಘದ ಚರಿತ್ರೆಯೂ ಆಗಿದೆ.

ಒಂದು ಕಾಲೇಜಿನ ಕನ್ನಡ ಸಂಘವನ್ನು ಹುಟ್ಟುಹಾಕಲು, ನಡೆಸಲು ಕಾಲೇಜಿನ ಆಡಳಿತ ವರ್ಗದ ಸಹಕಾರ ಅಗತ್ಯ. ನಮ್ಮ ಕಾಲೇಜಿನ ಆಡಳಿತವರ್ಗ ಈ ವಿಷಯ ದಲ್ಲಿ ತುಂಬು ಸಹಕಾರ ನೀಡಿದೆ. ಆಶೀರ್ವಾದ ಮಾಡಿದೆ. ಜೊತೆಗೆ ಕಾಲೇಜಿನ ಸಹೋದ್ಯೋಗಿಗಳು, ವಿದ್ಯಾರ್ಥಿಗಳು ಪ್ರೀತಿಯಿಂದ ನೆರವಾಗಿದ್ದಾರೆ. ಕನ್ನಡ ಸಂಘದ ಅಭಿಮಾನಿಗಳು ಸಂಘ ಕಷ್ಟದಲ್ಲಿದ್ದಾಗ ಸಹಾಯ ಮಾಡಿದ್ದಾರೆ. ಹಿರಿಯ-ಕಿರಿಯ ಲೇಖಕರು ತಮ್ಮ ಕೃತಿಗಳನ್ನು ನಮ್ಮ ಕನ್ನಡ ಸಂಘದ ಮೂಲಕ ಪ್ರಕಟಿಸಲು ಅವಕಾಶ ಕಲ್ಪಿಸಿಕೊಟ್ಟಿದ್ದಾರೆ. ಕನ್ನಡವನ್ನು ಪ್ರೀತಿಸುವವರೆಲ್ಲಾ ಒಟ್ಟಾಗಿ ಕಟ್ಟಿದ ಈ ಸಂಘ, ಕನ್ನಡ ಜನತೆಯ ಪ್ರೀತಿಯ ಸಂಘವಾಗಿದೆ.

ಕನ್ನಡ ಸಂಘ ಪ್ರಾರಂಭವಾದಾಗಿನಿಂದಲೂ (12 ಡಿಸೆಂಬರ್ 1973) ಡಾ|| ಅ.ನ.ಕೃ. ಸ್ಮಾರಕ ಲೇಖನ ಸ್ಪರ್ಧೆಯನ್ನು, ನಾಡಿನ ವಿದ್ಯಾರ್ಥಿಗಳಿಗಾಗಿ ನಡೆಸಿಕೊಂಡು ಬರುತ್ತಿದೆ. ಪ್ರಾರಂಭದ ಒಂದೆರಡು ವರ್ಷಗಳಲ್ಲಿ ಬೆಂಗಳೂರು ವಿಶ್ವವಿದ್ಯಾಲಯಕ್ಕೇ ಸೀಮಿತವಾಗಿದ್ದ ಈ ಸ್ಪರ್ಧೆ, ನಿಧಾನವಾಗಿ ಅಖಿಲ ಕರ್ನಾಟಕದ ಸ್ಪರ್ಧೆಯಾಯಿತು. ಡಾ|| ದ. ರಾ. ಬೇಂದ್ರೆಯವರು ಕೀರ್ತಿಶೇಷರಾದ ವರ್ಷದಿಂದ (1981) ನಮ್ಮ ಕನ್ನಡ ಸಂಘ ಡಾ|| ದ. ರಾ. ಬೇಂದ್ರೆ ಸ್ಮೃತಿ ಕವನ ಸ್ಪರ್ಧೆಯನ್ನು ವಿದ್ಯಾರ್ಥಿ

ಗಳಿಗಾಗಿ ನಡೆಸಿಕೊಂಡು ಬರುತ್ತಿದೆ. ಇದು ಪ್ರಾರಂಭವಾದ ಮೊದಲ ವರ್ಷ ದಿಂದಲೇ ಅಖಿಲ ಕರ್ನಾಟಕದ ಸ್ಪರ್ಧೆಯಾಯಿತು. ಹೊರನಾಡಿನಿಂದಲೂ ಲೇಖನಗಳು, ಕವನಗಳು ಬರುತ್ತಿವೆ. ಈ ಎರಡೂ ಸ್ಪರ್ಧೆಗಳು ಅನೇಕ ಯುವ ಬರಹಗಾರರನ್ನು ಬೆಳಕಿಗೆ ತಂದಿವೆ. ಈ ಎರಡೂ ಸ್ಪರ್ಧೆಯ ಬಹುಮಾನ ವಿತರಣೆ ಯನ್ನು ದ. ರಾ. ಬೇಂದ್ರೆಯವರ ಹುಟ್ಟುಹಬ್ಬವಾದ 31 ಜನವರಿಯಂದು ನಡೆಸಿ ಕೊಂಡು ಬರುತ್ತಿದ್ದೇವೆ. ಈ ಬಹುಮಾನ ವಿತರಣೆ ಕಾರ್ಯಕ್ರಮವನ್ನು ಒಮ್ಮೆ ಕುವೆಂಪು ಅವರ ಮನೆಯಲ್ಲೂ (ಮೈಸೂರು) (1987) ಒಮ್ಮೆ ಬೇಂದ್ರೆಯವರ ಮನೆಯಲ್ಲೂ (ಧಾರವಾಡ) (1989) ನಡೆಸಿದ್ದೇವೆ. ಡಾ॥ ಅ.ನ.ಕೃ. ಮತ್ತು ಡಾ॥ ದ. ರಾ. ಬೇಂದ್ರೆಯವರ ಹೆಸರಿನಲ್ಲಿ ನಡೆಸುವ ಸ್ಪರ್ಧೆಗಳಿಗೆ ಬಂದ ಲೇಖನ ಹಾಗೂ ಕವಿತೆಗಳ ನೋಟ ಹೀಗಿದೆ. (ಅನುಬಂಧದಲ್ಲಿ ಹೆಚ್ಚಿನ ವಿವರಗಳಿವೆ)



ನಮ್ಮ ಕಾಲೇಜಿನ ಕನ್ನಡ ಸಂಘದ ಪದಾಧಿಕಾರಿಗಳನ್ನು ಚುನಾವಣೆಯ ಮೂಲಕ ಆಯ್ಕೆ ಮಾಡುವುದಿಲ್ಲ. ಆಯಾ ತರಗತಿಯಲ್ಲಿ, ಆಯಾ ವರ್ಷ, ಕನ್ನಡದಲ್ಲಿ ಹೆಚ್ಚು ಅಂಕಗಳನ್ನು ಪಡೆದವರು ಕನ್ನಡ ಸಂಘದ ಪ್ರತಿನಿಧಿಗಳಾಗುತ್ತಾರೆ. ಈ ರೀತಿಯ ಆಯ್ಕೆ ಹತ್ತೊಂಭತ್ತು ವರ್ಷಗಳಿಂದ ಸುಗಮವಾಗಿ ನಡೆದುಕೊಂಡು ಬಂದಿದೆ.

ಎರಡನೆಯ ಪದವಿ ಹಾಗೂ ಎರಡನೆಯ ಪಿ.ಯು.ಸಿ. ವಿದ್ಯಾರ್ಥಿಗಳು ವರ್ಷಾಂತ್ಯದಲ್ಲಿ '**ಸರಸ್ವತಿ ಪೂಜೆ**'ಯನ್ನು ವಿಶಿಷ್ಟವಾದ ರೀತಿಯಲ್ಲಿ ಆಚರಿಸುತ್ತಾ ಬಂದಿದ್ದಾರೆ. ಪ್ರತಿಯೊಬ್ಬ ವಿದ್ಯಾರ್ಥಿ, ಯಾರ ಒತ್ತಾಯವೂ ಇಲ್ಲದೆ ತನ್ನ ಕೈಲಾದ ಹಣವನ್ನು ತರಗತಿಯ ಕನ್ನಡ ಪ್ರತಿನಿಧಿಯ ಕಡೆ ಕೊಡುತ್ತಾನೆ. ಅವನು ಕಾಲೇಜಿನ ಗ್ರಂಥ ಭಂಡಾರದಲ್ಲಿ ಇಲ್ಲದ ಹಾಗೂ ಹೊಸದಾಗಿ ಬಂದಿರುವ ಪುಸ್ತಕಗಳನ್ನು, ಅಧ್ಯಾಪಕರ ನೆರವಿನಿಂದ ಪಟ್ಟಿ ಮಾಡಿಕೊಂಡು, ಸಂಗ್ರಹಿಸಿದ ಹಣದಿಂದ ಪುಸ್ತಕವನ್ನು ತಂದು 'ಕಾಲೇಜ್ ವಾರ್ಷಿಕೋತ್ಸವ'ದಂದು ತನ್ನ ತರಗತಿಯ ಪರವಾಗಿ ಪ್ರಿನ್ಸಿಪಾಲರಿಗೆ ಒಪ್ಪಿಸುತ್ತಾನೆ. ಈ ಸಂಪ್ರದಾಯದ 'ಸರಸ್ವತಿ ಪೂಜೆ' ಯನ್ನು ಕನ್ನಡ ಸಂಘ ಪ್ರಾರಂಭದಿಂದಲೂ ನಡೆಸಿಕೊಂಡು ಬಂದಿದೆ. ವಿದ್ಯಾರ್ಥಿಗಳ ಕೊಡುಗೆಯಾಗಿ ಈವರೆಗೆ ಹತ್ತು ಸಾವಿರ ರೂಪಾಯಿಗಳಿಗಿಂತಲೂ ಹೆಚ್ಚಿನ ಪುಸ್ತಕಗಳನ್ನು ಕನ್ನಡ ವಿದ್ಯಾರ್ಥಿಗಳು ಕಾಲೇಜಿನ ಗ್ರಂಥ ಭಂಡಾರಕ್ಕೆ ನೀಡಿದ್ದಾರೆ. 'ಸರಸ್ವತಿ ಪೂಜೆ'ಯ ಹೆಸರಿನಲ್ಲಿ ಇದುವರೆಗೂ ಸಂಘದ ಪ್ರಕಟಣೆಯ ಹಣವನ್ನು ತಿಂಡಿ–ತೀರ್ಥಕ್ಕಾಗಲಿ ಓಡಾಟಕ್ಕಾಗಲಿ ಖರ್ಚು ಮಾಡಿಲ್ಲ.

ಕನ್ನಡ ಸಂಘ, ಪಿ.ಯು.,ಮಂಡಲಿ ಮತ್ತು ವಿಶ್ವವಿದ್ಯಾಲಯದ ಪರೀಕ್ಷೆಗಳಲ್ಲಿ (ಕನ್ನಡದಲ್ಲಿ) ಹೆಚ್ಚಿನ ಅಂಕಗಳನ್ನು ಪಡೆದವರಿಗೆ **ಡಾ|| ಜಿ. ಪಿ. ರಾಜರತ್ನಂ ಬಹುಮಾನ** (ಪಿ.ಯು.ಸಿ.) ; **ಡಾ|| ಶಿವರಾಮ ಕಾರಂತ ಬಹುಮಾನ**)ಬಿ.ಎ./ ಬಿ.ಎಸ್‌ಸಿ.,) ; **ಡಾ|| ಕುವೆಂಪು ಬಹುಮಾನ** (ಬಿ.ಕಾಂ)ಗಳನ್ನು ಉತ್ತಮ ಕನ್ನಡ ಪುಸ್ತಕಗಳ ರೂಪದಲ್ಲಿ, ಪ್ರತಿವರ್ಷ 'ಕಾಲೇಜ್ ವಾರ್ಷಿಕೋತ್ಸವ'ದಂದು ನೀಡುತ್ತಾ ಬಂದಿದೆ.

ನಮ್ಮ ಕಾಲೇಜು ಗ್ರಂಥ ಭಂಡಾರದಲ್ಲಿ ಒಂದು ವಿಷಯಕ್ಕೆ ಸಂಬಂಧಿಸಿದಂತೆ ಅತಿ ಹೆಚ್ಚಿನ ಪುಸ್ತಕಗಳಿರುವುದು ಕನ್ನಡದಲ್ಲಿ. ಶ್ರೀ ಹು. ಕ. ಜಯದೇವ್ (ಕನ್ನಡ ಅಧ್ಯಯನ ಕೇಂದ್ರ, ಬೆಂಗಳೂರು ವಿಶ್ವವಿದ್ಯಾಲಯ) ಅವರು ಮೈಸೂರು ಅರಮನೆಯ ಎಲ್ಲಾ ಪ್ರಕಟಣೆಗಳನ್ನು ಉಚಿತವಾಗಿ ನೀಡಿದರು. ಡಾ|| ಎನ್. ಎಸ್. ಲಕ್ಷ್ಮೀನಾರಾಯಣ ಭಟ್ಟ (ಕನ್ನಡ ಅಧ್ಯಯನ ಕೇಂದ್ರ, ಬೆಂಗಳೂರು ವಿಶ್ವವಿದ್ಯಾಲಯ) ಅವರು ತಮ್ಮ ಖಾಸಗಿ ಸಂಗ್ರಹದಿಂದ ಸುಮಾರು ನೂರು ಪುಸ್ತಕಗಳನ್ನು ನೀಡಿದರು. 'ಪ್ರಜಾವಾಣಿ' ಪತ್ರಿಕೆಯ ಆಡಳಿತವರ್ಗ ಐವತ್ತು ಪುಸ್ತಕಗಳನ್ನು ನೀಡಿತು. ಕರ್ನಾಟಕ ಸಾಹಿತ್ಯ ಅಕಾಡೆಮಿ ಈ ಶೈಕ್ಷಣಿಕ ವರ್ಷ (1990–91)

ಡಾ॥ ಜಿ. ಎಸ್. ಶಿವರುದ್ರಪ್ಪನವರ ಅಧ್ಯಕ್ಷತೆಯಲ್ಲಿ ವಿಶೇಷ ನಿರ್ಣಯವನ್ನು ಮಂಡಿಸಿ, ಐನೂರು ಉತ್ತಮ ಪುಸ್ತಕಗಳನ್ನು ಕಾಲೇಜಿನ ಗ್ರಂಥ ಭಂಡಾರಕ್ಕೆ ಕೊಡುಗೆಯಾಗಿ ನೀಡಿತು. ಕನ್ನಡ ಬಲ್ಲ ಅಧ್ಯಾಪಕರು ನಮ್ಮ ಕಾಲೇಜಿಗೆ ಹೊಸದಾಗಿ ಸೇರಿದಾಗ ಅಥವಾ ಬಿಟ್ಟು ಹೋಗುವಾಗ ಕೆಲವು ಪುಸ್ತಕಗಳನ್ನು ಕೊಟ್ಟಿದ್ದಾರೆ. ಜೊತೆಗೆ ವಿದ್ಯಾರ್ಥಿಗಳು ಈ ಸಂಖ್ಯೆಯನ್ನು ಹೆಚ್ಚಿಸುತ್ತಾ ಬರುತ್ತಿದ್ದಾರೆ.

ಕನ್ನಡ ಬಾರದ ಕಾಲೇಜಿನ ಅಧ್ಯಾಪಕರುಗಳಿಗೆ ಪ್ರೀತಿಯಿಂದ ಕನ್ನಡ ಕಲಿಯುವಂತೆ ವಾತಾವರಣವನ್ನು ನಿರ್ಮಿಸಿ, ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಸರ್ಟಿಫಿಕೇಟ್‌ಗಳನ್ನು ಪಡೆದವರಿಗೆ, ಕನ್ನಡ ಸಂಘದ ಸಮಾರಂಭದಲ್ಲಿ ಸಾಂಕೇತಿಕ ಗೌರವಾರ್ಪಣೆ ಮಾಡುತ್ತಾ ಬಂದಿದೆ. ನಮ್ಮ 'ಕನ್ನಡ ಸಂಘ' ಕಾಲೇಜಿನ ಕನ್ನಡ ವಿದ್ಯಾರ್ಥಿಗಳಿಗೋಸ್ಕರ ಅವರ ಪಠ್ಯಗಳನ್ನು ಕುರಿತು ವಿಶೇಷ ಉಪನ್ಯಾಸಗಳನ್ನು ಆಗಾಗ ಏರ್ಪಡಿಸುತ್ತದೆ. ಕೆಲವು ಸಂದರ್ಭಗಳಲ್ಲಿ ವಿದ್ಯಾರ್ಥಿಗಳನ್ನು ಮತ್ತು ಲೇಖಕರನ್ನು ಮುಖಾಮುಖಿ ಮಾಡುತ್ತದೆ. ಪಠ್ಯಗಳನ್ನು ಕುರಿತು 'ಕ್ವಿಜ್' ಕಾರ್ಯಕ್ರಮಗಳನ್ನು ತರಗತಿಗಳಲ್ಲೇ ನಡೆಸುತ್ತದೆ. ತರಗತಿಯ ಮಧ್ಯಂತರ ಪರೀಕ್ಷೆಗಳಲ್ಲಿ ಕನ್ನಡದಲ್ಲಿ ಹೆಚ್ಚಿನ ಅಂಕಗಳನ್ನು ಪಡೆದವರಿಗೆ ಪುಸ್ತಕಗಳ ರೂಪದಲ್ಲಿ ಪ್ರೋತ್ಸಾಹಕ ಬಹುಮಾನಗಳನ್ನು ನೀಡಲಾಗುವುದು. ಅಗಾಗ ಪಠ್ಯಕ್ಕೆ ಸಂಬಂಧಿಸಿದ ನಾಟಕಗಳನ್ನು ಕಾಲೇಜಿನಲ್ಲಿ ಪ್ರಯೋಗಿಸಿ, ಅವರಿಗೆ ನಾಟಕದ ಬಗ್ಗೆ ಒಂದು ಪೂರ್ಣ ನೋಟ ಬರಲು ಪ್ರಯತ್ನಿಸುತ್ತಿದೆ.

'ಕನ್ನಡ ಸಂಘ'ದ ಪುಸ್ತಕಗಳ ಮೊದಲ ಮಾಲೆಯಾಗಿ 1973ರಲ್ಲಿ **ಶ್ರೀ ಸಿ. ಕೆ. ಲಕ್ಷ್ಮಣಗೌಡ ಸ್ಮಾರಕ ಗ್ರಂಥಮಾಲೆಯನ್ನು** ಪ್ರಾರಂಭಿಸಿದೆವು. ಶ್ರೀ ಸಿ. ಕೆ. ಲಕ್ಷ್ಮಣಗೌಡ ನಮ್ಮ ಕಾಲೇಜಿನ ಒಳ್ಳೆಯ ವಿದ್ಯಾರ್ಥಿ (1972). ಆಕಸ್ಮಿಕ ಸಂದರ್ಭದಲ್ಲಿ ನಿಧನನಾದ. ಅವನ ತಾಯಿ ಶ್ರೀಮತಿ ರುಕ್ಮಣಮ್ಮ ಅವರು ಮಗನ ನೆನಪಿಗಾಗಿ ಐನೂರು ರೂಪಾಯಿಗಳನ್ನು ನೀಡಿದರು. ಅದೇ ಕನ್ನಡ ಸಂಘದ ಪ್ರಕಟಣೆಗೆ ಮೊದಲ ಬಂಡವಾಳ. ಇದರ ಜೊತೆಗೆ ಮುಂಗಡ ಕೂಪನ್ ಮಾರಾಟದಿಂದ ಪ್ರೊ॥ ಕ. ವೆಂ. ರಾಜಗೋಪಾಲ ಅವರ ಕವನ ಸಂಕಲನ 'ನದಿಯ ಮೇಲಿನ ಗಾಳಿ'ಯನ್ನು ಮೊದಲ ಪುಸ್ತಕವಾಗಿ ಪ್ರಕಟಿಸಿ, ಸೆಂಟ್ರಲ್ ಕಾಲೇಜ್ 'ಕರ್ಣಾಟಕ ಸಂಘ'ಕ್ಕೆ ಅರ್ಪಿಸಿದೆವು. ಎರಡನೇ ಪುಸ್ತಕವಾದ 'ಕ್ರಿಸ್ತಾಂಜಲಿ' ಕವನ ಸಂಕಲನದಿಂದ ಆದ ನಷ್ಟವನ್ನು ತುಂಬಿಕೊಳ್ಳಲು ಕಾಲೇಜಿನ ಸ್ಥಾಪಕ ಪ್ರಿನ್ಸಿಪಾಲರಾದ ರೆ॥ ಫಾ॥ ಮಾಣೆಜ್ಯೈಲ್ಸ್ ಐನೂರು ರೂಪಾಯಿಗಳನ್ನು ತಮ್ಮ ಕೈಯಿಂದ ಕೊಟ್ಟು ಪ್ರಕಟಣೆಯ ಕಾರ್ಯ ನಿಲ್ಲದೆ, ಮುಂದುವರಿಸುವಂತೆ ಪ್ರೋತ್ಸಾಹ ನೀಡಿದರು. **ಬೆಂಗಳೂರು ಪೋರಂ ಬುಕ್ ಹೌಸ್ ಗ್ರಂಥಮಾಲೆಯನ್ನು** 1978ರಲ್ಲಿ ಪ್ರಾರಂಭಿಸಿದೆವು. ಡಾ॥ ಜಿ. ಪಿ. ರಾಜರತ್ನಂ ದೆಹಲಿಯಲ್ಲಿ, ಅಖಿಲ ಭಾರತ ಐವತ್ತನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾದಾಗ, ಅವರ 'ರತ್ನನ ಪದಗಳು' ಕವನ ಸಂಗ್ರಹದ

ಪ್ರಾಯೋಗಿಕ ವಿಮರ್ಶೆಯ ಪುಸ್ತಕವನ್ನು ಪ್ರಕಟಿಸಿದವು. ಆ ಪುಸ್ತಕ ಪ್ರಕಟಿಸಲು ಉದಾರವಾಗಿ ಸಹಾಯ ಮಾಡಿದ ಶ್ರೀಮತಿ ಮತ್ತು ಶ್ರೀ ಹನುಮಂತರಾಜು ಅವರ ಸೂಚನೆಯಂತೆ, ಅವರ ಪುಸ್ತಕದ ಅಂಗಡಿಯ ಹೆಸರಿನಲ್ಲೇ ಮಾಲೆಯನ್ನು ಪ್ರಾರಂಭಿಸಿದೆವು. ಈ ಮಾಲೆಯನ್ನು ಈಗ ಸಂಪೂರ್ಣವಾಗಿ ವಿಮರ್ಶಾಬರಹಗಳಿಗೇ ಮೀಸಲಾಗಿರಿಸಿದೆ. 1988ರ 'ಬಹುಮಾನಿತ ಲೇಖನಗಳ'ನ್ನು ಪ್ರಕಟಿಸಲು ಮತ್ತು ಆ ವರ್ಷದ ಬಹುಮಾನಗಳನ್ನು ನೀಡಲು ಶ್ರೀ ಪಿ. ಎನ್. ಎಸ್. ಮೂರ್ತಿಯವರು ತಮ್ಮ ತಾಯಿ-ತಂದೆಗಳಾದ ಶ್ರೀಮತಿ ಲಕ್ಷ್ಮೀದೇವಮ್ಮ ಮತ್ತು ಶ್ರೀ ಪಿ. ನರಸಪ್ಪ ನವರ ಹೆಸರಿನಲ್ಲಿ ಐದು ಸಾವಿರ ರೂಪಾಯಿಗಳನ್ನು ನೀಡಿದರು.

ವಿದ್ಯಾರ್ಥಿಗಳ ಬರವಣಿಗೆಗಾಗಿಯೇ ಎರಡು ಮಾಲೆಗಳನ್ನು ಪ್ರಾರಂಭಿಸಿದ್ದೇವೆ. ಡಾ॥ ಅ.ನ.ಕೃ. ಸ್ಮಾರಕ ಲೇಖನ ಸ್ಪರ್ಧೆಯ ಬರಹಗಳನ್ನು **ಡಾ॥ ಜಿ. ಪಿ. ರಾಜರತ್ನಂ ವಿದ್ಯಾರ್ಥಿ ವಿಕಾಸ ಮಾಲೆ** ಎಂದೂ ; ಡಾ॥ ದ. ರಾ. ಬೇಂದ್ರೆ ಸ್ಮೃತಿ ಕವನ ಸ್ಪರ್ಧೆಯ ಕವನಗಳನ್ನು **'ಗೆಳೆಯರ ಬಳಗ' ವಿದ್ಯಾರ್ಥಿ ವಿಕಾಸ ಮಾಲೆ** ಎಂದೂ ನಡೆಸುತ್ತಿದ್ದೇವೆ. ಡಾ॥ ಜಿ. ಪಿ. ರಾಜರತ್ನಂ ಬೆಂಗಳೂರು ಸೆಂಟ್ರಲ್ ಕಾಲೇಜ್ 'ಕರ್ನಾಟಕ ಸಂಘ'ದ ಮೂಲಕ ಮಾಡಿದ ಸಾಹಿತ್ಯ ಪರಿಚಾರಿಕೆ, ನಮ್ಮ ಕನ್ನಡ ಸಂಘಕ್ಕೂ ಮಾರ್ಗದರ್ಶಕ ವಾಗಿರುವುದರಿಂದ ಅವರ ಹೆಸರನ್ನು ಒಂದು ಮಾಲೆಗೆ ಇಟ್ಟಿದ್ದೇವೆ. ಉತ್ತರ ಕರ್ನಾಟಕದಲ್ಲಿ ನವೋದಯ ಸಾಹಿತ್ಯದ ಉತ್ಕರ್ಷಕ್ಕೆ ಕಾರಣವಾದ 'ಗೆಳೆಯರ ಬಳಗ'ದ ಹೆಸರನ್ನು ಇನ್ನೊಂದು ಮಾಲೆಗೆ ಇಟ್ಟಿದ್ದೇವೆ. ನಮ್ಮ ಕನ್ನಡ ಸಂಘದ ಸಂಪರ್ಕಕ್ಕೆ ಬಂದ ವಿದ್ಯಾರ್ಥಿಗಳೆಲ್ಲಾ ಒಂದು ಬಳಗದಂತೆ ಬಾಳಬೇಕೆಂಬುದೇ ನಮ್ಮ ಆಶಯ. ಪ್ರಸ್ತುತ ವರ್ಷ ಚಿತ್ತೂರಿನ ನ್ಯೂಟ್ರಿನ್ ಕನ್‌ಫೆಕ್ಷನರಿಸ್ ಅವರು ನೀಡಿದ ಹತ್ತು ಸಾವಿರ ರೂಪಾಯಿಗಳ ಕೊಡುಗೆಯಿಂದ **ಜ್ಞಾನಪೀಠ ಪ್ರಶಸ್ತಿ ವಿಜೇತರ ಕೃತಿಮಾಲೆಯನ್ನು** ಪ್ರಾರಂಭಿಸುತ್ತಿದ್ದೇವೆ. ಜೊತೆಗೆ **ಶ್ರೀಮತಿ ಸುಧಾ ಆರ್. ರಾವ್ ಮತ್ತು ಡಾ॥ ಎ. ಎಚ್. ರಾಮರಾವ್ ಗ್ರಂಥಮಾಲೆಯನ್ನು** ಪ್ರಾರಂಭಿಸುತ್ತಿದ್ದೇವೆ. ಈ ಮಾಲೆಯನ್ನು ಜ್ಞಾನ ಸಾಹಿತ್ಯದ ಬರಹಗಳಿಗೆ ಮಾತ್ರ ಮೀಸಲಾಗಿರಿಸಲಾಗುವುದು. **ಸ್ಪಂದನ** ಹೆಸರಿನಲ್ಲಿ ಜನಪ್ರಿಯ ಮಾಲೆಯೊಂದನ್ನು ಶ್ರೀ ಕಿ. ರಂ. ನಾಗರಾಜ ಅವರ ಪುಸ್ತಕ 'ಕನ್ನಡ ಸಾಹಿತ್ಯ ಮತ್ತು ಪ್ರತಿಷ್ಠಿತ ಶಕ್ತಿ'ಯಿಂದ ಆರಂಭಿಸಿದೆವು. ಆದರೆ ಹಣದ ಕೊರತೆಯಿಂದ ಆ ಮಾಲೆಯನ್ನು ಮುಂದುವರಿಸಲು ಸಾಧ್ಯವಾಗಲಿಲ್ಲ. ಹಿರಿಯ ಲೇಖಕರ ಪುಸ್ತಕಗಳಿಂದ ಬಂದ ಹಣವನ್ನು, ವಿದ್ಯಾರ್ಥಿಗಳ ಪುಸ್ತಿಕೆಗಳನ್ನು ಪ್ರಕಟಿಸಲು ಬಳಸಿಕೊಳ್ಳುತ್ತಿದ್ದೇವೆ. ಈ ಹಣವೂ ಸಾಲದಾದಾಗ ಕನ್ನಡ ಸಂಘದ ಅಭಿಮಾನಿಗಳು ನೆರವಿಗೆ ಬಂದಿದ್ದಾರೆ. ಕೆಲವರು ಆಯಾ ವರ್ಷದ ಬಹುಮಾನ ಗಳನ್ನು ಕೊಟ್ಟಿದ್ದಾರೆ. ಇನ್ನು ಕೆಲವರು ವಿದ್ಯಾರ್ಥಿಗಳ ಪ್ರಕಟಣೆಗಳಿಗೆ ಸಾಧ್ಯ ವಾದಷ್ಟು ಆರ್ಥಿಕ ನೆರವನ್ನು ನೀಡಿದ್ದಾರೆ. ಇದನ್ನೆಲ್ಲಾ ಆಯಾ ಪುಸ್ತಿಕೆಗಳಲ್ಲಿ ದಾಖಲಿಸಿದೆ. ಕಾಲೇಜು, ಪ್ರತಿವರ್ಷ ವಿದ್ಯಾರ್ಥಿ ಸಂಘದಿಂದ ನೀಡುವ ಹಣವನ್ನು

ಕಾಲೇಜಿನಲ್ಲಿ ಕಾರ್ಯಕ್ರಮಗಳನ್ನು ನಡೆಸಲು ಮಾತ್ರ ಉಪಯೋಗಿಸಿಕೊಳ್ಳಲಾಗುವುದು.

ಡಾ|| ದ. ರಾ. ಬೇಂದ್ರೆಯವರು ನಿಧನರಾದ ವರ್ಷ (1981) 'ಕನ್ನಡ ಸಂಘ', 'ಸ್ನೇಹ ವಲಯ', 'ರಚನಾ' ಮತ್ತು 'ಅಂಕಣ'ದ ಸಹಕಾರ, ಸಹಾಯಗಳಿಂದ ಬೆಂಗಳೂರಿನ ವಿವಿಧ ಬಡಾವಣೆಗಳಲ್ಲಿ ಹನ್ನೆರಡು ತಿಂಗಳು, ಹನ್ನೆರಡು ಕಾರ್ಯಕ್ರಮಗಳನ್ನು ಜನ ಮೆಚ್ಚುವಂತೆ ನಡೆಸಿತು. ಈ ಸಂದರ್ಭದಲ್ಲಿ ಬೇಂದ್ರೆಯವರ ಸುಂದರ ಭಾವಚಿತ್ರದ ಹತ್ತು ಸಾವಿರ ಪ್ರತಿಗಳನ್ನು ಮುದ್ರಿಸಿ ಎರಡು ರೂಪಾಯಿಸಂತೆ ಮಾರಾಟಮಾಡಿತು. ಅದರಿಂದ ಬಂದ ಹಣದಿಂದ ಬೇಂದ್ರೆಯವರ ಸಾಹಿತ್ಯವನ್ನು ಕುರಿತು ವಿಶೇಷ ಉಪನ್ಯಾಸ ಮಾಲೆಯನ್ನು ನಿರಂತರವಾಗಿ ನಡೆಸಿಕೊಂಡು ಬರುತ್ತಿದೆ. ಈ ಸಾಹಸದ ಕಾರ್ಯವನ್ನು ನಿಯೋಜಿಸಲು ಸಂಘದ ಸಂಚಾಲಕರಾದ ಶ್ರೀ ಜಿ. ಶ್ರೀನಿವಾಸರಾಜು ಪುಣೆ, ಧಾರವಾಡ, ಮೈಸೂರಿಗೆ ಹೋಗಿ ಬರಬೇಕಾಯಿತು. ಆಗ ಈ ಒಳ್ಳೆಯ ಕೆಲಸಕ್ಕೆ ಒತ್ತಾಸೆಯನ್ನು ನೀಡಿದವರೆಂದರೆ ಡಾ|| ಹಾ. ಮಾ. ನಾಯಕ, ಪ್ರೊ|| ವಿ. ಕೃ. ಗೋಕಾಕ್, ಜಿ. ಬಿ. ಜೋಷಿ, ಶ್ರೀ ಸಿ. ಆರ್. ರಾವ್ ಮತ್ತು ಡಾ. ವಿಜಯಾ, ಶ್ರೀ ಕೆ. ಸತ್ಯನಾರಾಯಣ ಆರ್ಥಿಕ ವಿಷಯದಲ್ಲಿ ನೆರವಾಗಿದ್ದಾರೆ. ಇದೇ ಸಂದರ್ಭದಲ್ಲಿ ಒಂದು ವಿಷಯವನ್ನು ಹೇಳಿಬಿಡುವುದು ಒಳ್ಳೆಯದು. ಇದುವರೆಗೂ ಸಂಘದ ಸಂಚಾಲಕರು ಕನ್ನಡ ಸಂಘದಿಂದ ಯಾವುದೇ ರೀತಿಯ ಟಿ.ಎ. ಮತ್ತು ಡಿ.ಎ. ಗಳನ್ನು ಪಡೆದಿಲ್ಲ. ತಿಂಡಿ–ತೀರ್ಥಗಳಿಗಾಗಿ 'ಕನ್ನಡ ಸಂಘ'ದ ಹಣವನ್ನು ಯಾವುದೇ ಸಂದರ್ಭದಲ್ಲಿ ಬಳಸಿಲ್ಲ. ಕಾಲೇಜಿನ ಕನ್ನಡ ವಿಭಾಗದವರು ತಮ್ಮ ಯಾವುದೇ ಕೃತಿಯನ್ನು 'ಕನ್ನಡ ಸಂಘ'ದ ಮೂಲಕ ಪ್ರಕಟಿಸಿಕೊಳ್ಳಬಾರದೆಂಬ ಸ್ವಯಂ ನಿರ್ಬಂಧವನ್ನು ಹಾಕಿಕೊಂಡಿದ್ದಾರೆ. ಸಂಘದ ಕೆಲಸಕ್ಕೆ ಮೈಸೂರಿಗೇ ಹೋಗಲಿ ಮಂಗಳೂರಿಗೇ ಹೋಗಲಿ ಅಥವಾ ಮುದ್ರಣ ಕೆಲಸಕ್ಕೆ ಸುತ್ತಾಡಲಿ, ಕಾರ್ಯಕ್ರಮಗಳ ಸಂಯೋಜನೆಗೆ ಓಡಾಡಲಿ ಹಣವನ್ನು ಕನ್ನಡ ಸಂಘದಿಂದ ಪಡೆಯಬಾರದು ಎಂಬ ನಿಯಮವನ್ನು ಪಾಲಿಸಿಕೊಂಡು ಬಂದಿದ್ದಾರೆ. ಕನ್ನಡ ಅಧ್ಯಾಪಕರಾದವರು ಕನ್ನಡದ ಕೆಲಸಕ್ಕೆ ತಮ್ಮ ಆದಾಯದಲ್ಲಿ ಕೊಂಚ ಹಣವನ್ನು ನಿಯತವಾಗಿ ವಿನಿಯೋಗಿಸಬೇಕೆಂಬುದೇ ಸಂಚಾಲಕರ ನಿಲುವು.

ರೆ|| ಫಾ|| ಥಾಮಸ್ ಮಾರ್ವಪರ ಅವರು ಕಾಲೇಜಿನ ರೆಕ್ಟರ್ ಆಗಿದ್ದಾಗ ಈ 'ಆನಂದ' ಬರಬೇಕಿತ್ತು. ಆದರೆ ಅನಿವಾರ್ಯ ಕಾರಣಗಳಿಂದ ಸಕಾಲದಲ್ಲಿ ಬರಲಿಲ್ಲ. ಈ ಮಧ್ಯೆ ಇದಕ್ಕೆ ಶುಭಾಶಯಗಳನ್ನು ಕಳುಹಿಸಿದ್ದ ಪ್ರೊ. ಎಂ. ವಿ. ಸೀತಾರಾಮಯ್ಯ ಶ್ರೀಮತಿ ಅನುಪಮಾ ನಿರಂಜನ ಮತ್ತು ಶ್ರೀ ಆಲನಹಳ್ಳಿ ಕೃಷ್ಣ ನಮ್ಮ ಮಧ್ಯೆ ಇಲ್ಲ.*

* 'ಬೇಂದ್ರೆನಮನ' ಕಾರ್ಯಕ್ರಮಗಳಲ್ಲಿ ನೆರವಾದ ಶ್ರೀ ಸಿ. ಆರ್. ರಾವ್ ನಮ್ಮನ್ನು ಅಗಲಿದ್ದಾರೆ.

ಕನ್ನಡ ಸಂಘದ ಸ್ಥಾಪನೆಗೆ ಅವಕಾಶ ಮಾಡಿಕೊಟ್ಟು, ಕಾಲೇಜಿನ ಸ್ಥಾಪಕ ಪ್ರಿನ್ಸಿಪಾಲ ರಾದ ರೆ॥ ಫಾ॥ ವರ್ಣಿಜೈಲ್ಸ್ ಅವರು ರೆಕ್ಟರ್ ಪದವಿಯನ್ನು ಸ್ವೀಕರಿಸಿರುವ ಸಂದರ್ಭದಲ್ಲಿ, ಈ ಸಂಚಿಕೆ ಬಿಡುಗಡೆಯಾಗುತ್ತಿರುವುದು ಸಂತೋಷದ ಸಂಗತಿ. ಸರ್ಕಾರ, ಸಾಹಿತ್ಯ ಅಕಾಡೆಮಿ, ಕನ್ನಡ ಸಾಹಿತ್ಯ ಪರಿಷತ್ತು ಮತ್ತು ಆಡಳಿತ ವರ್ಗದಿಂದ ಆರ್ಥಿಕ ನೆರವನ್ನು ಯಾಚಿಸದೆ ಕನ್ನಡ ಸಂಘ ಪ್ರಕಟಣೆಯ ಕೆಲಸವನ್ನು ಮಾಡುತ್ತಿರುವುದೇ ಒಂದು ದೊಡ್ಡ ಸಾಹಸ.

ಕನ್ನಡ ಸಂಘ ಒಳ್ಳೆಯ ಕೆಲಸ ಮಾಡಲು ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಸಹಾಯಮಾಡಿ ಸಹಕರಿಸಿದವರೆಲ್ಲರಿಗೂ ಸಂಘ ಕೃತಜ್ಞವಾಗಿದೆ. ಈ 'ಆನಂದ'ವನ್ನು ಸಿದ್ಧಪಡಿಸಲು ಸಹಕಾರ ನೀಡಿದ ಕಾಲೇಜಿನ ಕನ್ನಡ ವಿಭಾಗಕ್ಕೆ ಮತ್ತು ನನ್ನನ್ನು ಸಂಪಾದಕನನ್ನಾಗಿ ಮಾಡಿದ ಕಾಲೇಜಿನ ವಿದ್ಯಾರ್ಥಿ ಸಂಘಕ್ಕೆ ವಂದನೆಗಳು.

1991

ಎಚ್. ಆರ್. ರಾಮಕೃಷ್ಣರಾವ್
ಸಂಪಾದಕ

ಪ್ರಾಧ್ಯಾಪಕರು
ಭೌತಶಾಸ್ತ್ರ ವಿಭಾಗ
ಕ್ರೈಸ್ಟ್ ಕಾಲೇಜು
ಬೆಂಗಳೂರು-560 029



RECTOR
Dharmaram College
Bangalore 560 029

Rev. Fr. Dr. Thomas Mampra CMI
20-04-1989

MESSAGE

It gives me great pleasure, indeed, to offer my hearty congratulations to the Kannada Sangha, Christ College, and its honourable organiser, for the wonderful achievements the Sangha has made within such a short span of time. The fact that it has already published 50 books on a variety of subjects mainly pertaining to the literary and cultural fields, speaks volumes on the devotion, determination and dedication with which the members of the Sangha have taken the work to their hearts. It is the single - minded pursuit of knowledge and the variety of its expressions such as this, that has always enriched Indian languages and brought them to higher levels of perfection.

While congratulating the sangha for its excellent perfomance during the past years illuminating in the publication of its fiftieth volume, I wish that the activites of the Kannada Sangha flourish during the years ahead, making it one of the best of its kind in India.



FOUNDER PRINCIPAL
HOD of Botony
Christ - College
Bangalore 560 029

Rev. Fr. Prof. Mani Giles CMI

MESSAGE

It is indeed heartening to learn that Kannada Sangha of Christ College is celebrating its 15th birthday in a befitting way. The kannada sangha has made significant strides during the past by making spectacular contributions to the growth of kannada literature and culture. It has been giving consistent encouragement to students and teachers of various colleges to develop their literary and academic talents. The literary competitions held every year under the auspices of Kannada Sangha deserve our special congratulations and support. More than any thing else Kannada sangha has been successful in bringing out many books and presently it is releasing its 50th publication.

I would avail myself of this opportunity to congratulate Mr. C. Srinivasa Raju M.A., organiser of the Kannada Sangha and his colleagues of Christ College for all their achievements. I also long to see that the Kannada Sangha gets more physical and organizational equipment and strength. The teachers and students of Christ College and neighbouring colleges, I hope, will extend their co-operation and support to the Kannada Sangha to realise its objectives.




FOMER PRINCIPAL
Christ College
Bangalore-560 029

Rev. Fr. Augustine Joseph, CMI

MESSAGE

The Kannada Sangha of Chist College has completed Seventeen years of its creative life and has published the book 'NILUVU' by H. S. Raghavendra Rao. This, incidentally, happens to be the 60th bookPublished by the Sangha. There were reports in the leading newspapers highlighting the creative role played by the Kannada Sangha in the State of Karnataka and South India. It is being hailed as the pioneering organisation working in an under graduate college striving to identify and encourage creative abilities in young men and women.

I congrulate all those who are actively involved in this uoble venture and wish the Kannada Sangha a very bright future.




ಪ್ರಿನ್ಸಿಪಾಲರು
ಕ್ರೈಸ್ಟ್ ಕಾಲೇಜು
ಬೆಂಗಳೂರು-560 029

ರೆ॥ ಫಾ॥ ಡಾ. ಅಂತೋಣಿ ಕರಿಯಲ್, ಸಿ.ಎಂ.ಐ.

ಆನಂದದ ಸಮಾಚಾರ

ನಮ್ಮ ಕಾಲೇಜಿನ ಕನ್ನಡ ಸಂಘವು ಅರವತ್ತಕ್ಕೂ ಹೆಚ್ಚು ಪುಸ್ತಕಗಳನ್ನು ಬಿಡುಗಡೆ ಮಾಡಿದೆ. 'ಆನಂದ' - ಹೆಸರಿಗೆ ತಕ್ಕಂತೆ ಇದು ನಮ್ಮೆಲ್ಲರಿಗೂ ಆನಂದದ ಸಮಾಚಾರ. ಈಗಾಗಲೇ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಮೂರು ಬಹುಮಾನಗಳನ್ನು ಮತ್ತು ಪ್ರೊ॥ ವಿ. ಎಂ. ಇನಾಂದಾರ್ ಪ್ರಶಸ್ತಿಯನ್ನು ನಮ್ಮ ಸಂಘದ ಪ್ರಕಟಣೆಗಳು ಪಡೆದಿವೆ. ಈ ಕಾರ್ಯಸಾಧನೆಗಾಗಿ ಶ್ರಮಿಸಿದ ಕನ್ನಡ ಸಂಘದ ಎಲ್ಲ ವಿದ್ಯಾರ್ಥಿಗಳನ್ನು. ಅಭಿಮಾನಿಗಳನ್ನು ನಾನು ಅಭಿನಂದಿಸುತ್ತೇನೆ. ಪ್ರಮುಖವಾಗಿ ಕನ್ನಡದ ಪ್ರಾಧ್ಯಾಪಕರಾದ ಶ್ರೀ ಚಿ. ಶ್ರೀನಿವಾಸರಾಜು ಅವರಿಗೆ ಮತ್ತು ಕನ್ನಡ ವಿಭಾಗದ ಇತರರಿಗೆ ನನ್ನ ಅಭಿನಂದನೆ ಮತ್ತು ಕೃತಜ್ಞತೆಗಳು. ಕನ್ನಡ ಸಂಘದ ಈ ಸಾಧನೆ ಮುಂಬರುವವರಿಗೆ ಮಾದರಿಯಾಗಲಿ ಎಂದು ಹಾರೈಸುತ್ತೇನೆ.



STUDENTS WELFARE OFFICER Sri Baby Mathew, M.Sc.,
Department of Chemistry
Christ College
Bangalore-560 029

CONGRATULATIONS

Christ College Kannada Sangha can pe proud of its services to Kannada Language and Literature. Established in 1973, the Sangha has published sixty books in various fields of Kannada literature. This is a great achievement which no other College Language Association in South India has accomplished.

Many young writers and students find Christ College Kannada Sangha as a forum to express their literary talents, because the main aim of Kannada Sangha is to encourage budding talents.

The Kannada Sangha has been conducting essay and poetry competitions successfully for college students for the past sixteen years. It has instituted three endowment prizes (Kuvempu, Shivarama Karantha, Rajaratnam) to Kannada language in the annual examinations.

'Anya Bhasha Granthamala' is a unique work of Chirst College Kannada Sangha.

I congratulate the Kannada Sangha for all its achievements. I wish the Sangha success in its future activities. I am happy to make a special mention of Mr. C. Srinivasa Raju, Head of the Department of Kannada, Christ College, whose untiring efforts have led Chirst College Kannada Sangha to its present glory.

ಎಚ್. ಡಿ. ಎಸ್. ಕೆ. ಶಾಸ್ತ್ರಿ

ಕನ್ನಡ ಸಂಘದ ಉಪಾಧ್ಯಕ್ಷರು

ಗಣಿತಶಾಸ್ತ್ರ ವಿಭಾಗದ ಮುಖ್ಯಸ್ಥರು

ನಮ್ಮ ಕಾಲೇಜು ಈ ವರ್ಷ ಕನ್ನಡ ಸಂಘದ ಆಶ್ರಯದಲ್ಲಿ ಐವತ್ತನೆಯ ಪುಸ್ತಕ ವನ್ನು ಪ್ರಕಟಿಸುತ್ತಿರುವುದು ಸಂತೋಷದ ಮತ್ತು ಹೆಮ್ಮೆಯ ವಿಷಯ. ಇದೇ ಕನ್ನಡ ಸಂಘವು ಎಪ್ಪತ್ಮೂರನೆ ಇಸವಿಯಲ್ಲಿ 'ನದಿಯ ಮೇಲಿನ ಗಾಳಿ' ಪುಸ್ತಕವನ್ನು ಪ್ರಕಟಿಸಿ, ಇಂದು ಅದು ಐವತ್ತನೇ ಪುಸ್ತಕವಾಗಿ ಪ್ರೊ॥ ಎ. ಎನ್. ಮೂರ್ತಿರಾವ್ ಬರೆದಿರುವ "ಸಮಗ್ರ ಲಲಿತ ಪ್ರಬಂಧಗಳು" ಪ್ರಕಟಿಸುತ್ತಿರುವುದು ನಿಜಕ್ಕೂ ಶ್ಲಾಘನೀಯವಾದ ವಿಷಯ. ಇದು ಸಾಮಾನ್ಯ ಕೆಲಸವಲ್ಲ. ಈ ಸಂಘದಲ್ಲಿ ಮೊದಲಿನಿಂದಲೂ ನಾನೂ ಒಬ್ಬ ಪದಾಧಿಕಾರಿಯಾಗಿ ಎಷ್ಟು ಎಡರು ತೊಡರುಗಳನ್ನು ಎದುರಿಸಿ ಈ ಒಂದು ಮಟ್ಟಕ್ಕೆ ಏರಿದ್ದೇವೆ ಎಂಬುದು ಕೆಲವರಿಗೇ ತಿಳಿದ ವಿಷಯ ವಾಗಿದೆ. ಇನ್ನೊಮ್ಮೆ ಚಿ. ಶ್ರೀನಿವಾಸರಾಜು ಅವರನ್ನು ತುಂಬು ಹೃದಯದಿಂದ ಅಭಿನಂದಿಸುತ್ತಾ ಕನ್ನಡ ಸಂಘವು ಬೇಗ ನೂರು ಪುಸ್ತಕಗಳನ್ನು ಪ್ರಕಟಿಸುವಂತಾಗಲಿ ಎಂದು ಹಾರೈಸುತ್ತೇನೆ.

ಬಿ. ಎಸ್. ನಂಜುಂಡಯ್ಯ

ಕನ್ನಡ ಸಂಘದ ಉಪಾಧ್ಯಕ್ಷರು

ಇತಿಹಾಸ ವಿಭಾಗದ ಮುಖ್ಯಸ್ಥರು

ನಮ್ಮ 'ಕನ್ನಡ ಸಂಘ' ತನ್ನ ಎಪ್ಪತ್ತನೆಯ ಪುಸ್ತಕ ಪ್ರಕಟವಾಗುತ್ತಿರುವ ಸಂದರ್ಭದಲ್ಲಿ, ನೆನಪಿನ ಸಂಚಿಕೆ 'ಆನಂದ' ಬಿಡುಗಡೆಯಾಗುತ್ತಿರುವುದು ಒಳ್ಳೆಯದು. 'ಕನ್ನಡ ಸಂಘ' ನಮ್ಮ ಕಾಲೇಜಿನಲ್ಲಿ ಕನ್ನಡ ವಾತಾವರಣವನ್ನು ಉಳಿಸಲು, ಬೆಳಸಲು ನಿರಂತರವಾಗಿ ಶ್ರಮಿಸುತ್ತಿರುವುದು ಎಲ್ಲರಿಗೂ ತಿಳಿದ ವಿಷಯವೇ ಆಗಿದೆ. ಕನ್ನಡ ವನ್ನು ಐಚ್ಛಿಕ ವಿಷಯವನ್ನಾಗಿ ಬೋಧಿಸುವ ಅವಕಾಶ ಒದಗಿಬಂದರೆ ಕಾಲೇಜಿನ ಕನ್ನಡ ವಾತಾವರಣ ಇನ್ನೂ ಉತ್ತಮಗೊಳ್ಳುವುದೆಂದು ನಮ್ಮ ಹಂಬಲ. ಕರ್ನಾಟಕದ ರಾಜಧಾನಿಯಾದ ಬೆಂಗಳೂರಿನಲ್ಲಿ ಇದರ ಅವಶ್ಯಕತೆಯೂ ಇದೆ. ಕನ್ನಡದ ಹೆಸರಿನಲ್ಲಿ ಗಲಾಟೆ, ಗದ್ದಲವನ್ನು ಮಾಡುವ ಶಕ್ತಿಗಳು ಒಂದು ಕಡೆಯಾದರೆ, ನಿಶ್ಶಬ್ಧವಾಗಿ ಕನ್ನಡದ ಕಂಪನ್ನು ಹರಡುತ್ತಿರುವ ಈ ಸಂಘ ಎಲ್ಲರ ಪ್ರೀತಿಯನ್ನು ಗಳಿಸಿದೆ. ವಿದ್ಯಾರ್ಥಿಗಳಿಗೆ ಯುವ ಬರಹಗಾರರಿಗೆ ಹೆಚ್ಚಿನ ಪ್ರೋತ್ಸಾಹ ನೀಡುತ್ತಿರುವ ಕನ್ನಡ ಸಂಘದ ಕೆಲಸ ನಿರಂತರವಾಗಿ ಮುಂದುವರಿಯಲಿ

ಈ ಹಿನ್ನೆಲೆಯಲ್ಲಿ ಕಾಲೇಜಿನ ಅಧಿಕಾರ ವರ್ಗದವರು ಆರ್ಥಿಕ ಸಹಾಯ ನೀಡಿ ಹೊಸ ಯೋಜನೆಗಳಿಗೆ ಅವಕಾಶ ಮಾಡಿಕೊಟ್ಟು ಇನ್ನೂ ಹೆಚ್ಚಿನ ಕನ್ನಡ ಪರ ಕೆಲಸ ಮಾಡಲು ಉತ್ತೇಜನ ನೀಡುತ್ತಾರೆಂದು ನಂಬಿದ್ದೇನೆ.

ಎನ್. ಸೂರ್ಯನಾರಾಯಣ

ಕನ್ನಡ ಸಂಘದ ಉಪಾಧ್ಯಕ್ಷರು

ವಾಣಿಜ್ಯ ವಿಭಾಗ

'ಆನಂದ' ಕನ್ನಡ ಸಂಘದ ಸಂಸ್ಮರಣ ಸಂಚಿಕೆ. ನಮ್ಮ ಸಂಘ ಎಪ್ಪತ್ತು ಪುಸ್ತಕಗಳನ್ನು ಪ್ರಕಟಿಸಿ ಕನ್ನಡ ನಾಡಿನಲ್ಲೆಲ್ಲಾ ಹೆಸರು ಮಾಡಿದೆ. ಈ ಸಂಘ ಕೇವಲ ಕನ್ನಡ ವಿಭಾಗದ್ದೇ ಆಗಿರದೆ ಕಾಲೇಜಿನ ಎಲ್ಲರದೂ ಆಗಿರುವುದರಲ್ಲೇ ಇದರ ವಿಶಿಷ್ಟತೆ ಅಡಗಿದೆ. ವಿದ್ಯಾರ್ಥಿಗಳಲ್ಲಿ ಭಾಷೆಯ ಬಗ್ಗೆ ಸಂಕುಚಿತ ಭಾವನೆಗಳನ್ನು ಬಿತ್ತದೆ, ಎಲ್ಲರಿಗೂ ಕನ್ನಡದ ಬಗ್ಗೆ ಪ್ರೀತಿ, ಗೌರವಗಳು ಉಂಟಾಗುವಂತೆ ಕೆಲಸ ಮಾಡುತ್ತಿದೆ. ಕನ್ನಡ ಸಂಘ ಕಟ್ಟಿ ಬೆಳಸಿದ ರೀತಿಯೇ ಒಂದು ಕಥೆ. ಕನ್ನಡ ಅಭಿಮಾನಿಗಳ ಪ್ರೀತಿಯ ನೆರವನ್ನು ಪಡೆಯುತ್ತಾ ಯಾರ ಹಂಗಿಗೂ ಒಳಗಾಗದೆ, ನಿಜವಾದ ಬರಹಗಾರರನ್ನು ಗುರುತಿಸಿ ಬೆಳಕಿಗೆ ತರುತ್ತಿರುವ ಕೆಲಸ ಎಲ್ಲರೂ ಮೆಚ್ಚುವ ಸಂಗತಿ. ಕನ್ನಡ ಸಂಘ ಆದಷ್ಟು ಬೇಗ ನೂರನೆಯ ಪುಸ್ತಕವನ್ನು ಪ್ರಕಟಿಸಲಿ ಎಂಬುದೇ ನಮ್ಮ ಆಶಯ.

ಸದಾಶಯ

ಶಿವರಾಮ ಕಾರಂತ

ಮೂರ್ತಿರಾಯರು ನನ್ನ ದೀರ್ಘಕಾಲದ ಗೆಳೆಯರು. ನನಗಿಂತ ಹಿರಿಯರು. ಅವರ ಬರಹಗಳು ನನಗೆ ಮೆಚ್ಚಿಗೆಯೇ.

ಐವತ್ತನೆಯ ಪುಸ್ತಕದ ಪ್ರಕಟಣೆ ಎಂದರೆ ಯಾವ ಸಂಸ್ಥೆಯಾದರೂ ಹೆಮ್ಮೆ ಪಡಬಹುದಾದ ಸಂಗತಿ. ಪ್ರಾರಂಭದಿಂದ ನಿಮ್ಮ ಕಾಲೇಜು ಈ ಕಾರ್ಯವನ್ನು ನಡೆಸಿಕೊಂಡು ಬಂದಿದೆ ಎಂದು ಕೇಳಿ ಸಂತೋಷವಾಯಿತು.

ಕನ್ನಡಕ್ಕಾಗಿ ನೀವೆಲ್ಲ ಶ್ರಮಿಸುತ್ತಿರುವುದರಿಂದ ಇಂದಿನ ಪೀಳಿಕೆಯ ವಿದ್ಯಾರ್ಥಿಗಳಿಗೆ ನಾಡಿನ ಈ ಭಾಷೆಯನ್ನು ಕುರಿತು ಮಮತೆ ಬೆಳೆಯಲು ಕಾರಣವಾಗಿದೆ.

ನಿಮ್ಮ ಸಂಘಕ್ಕೆ ಈ ಮೂಲಕ ಹಾರೈಸುತ್ತೇನೆ.

ಪು.ತಿ.ನ.

ಕ್ರೈಸ್ಟ್ ಕಾಲೇಜಿನ ಕನ್ನಡ ಸಂಘವು ಚಿ. ಶ್ರೀನಿವಾಸರಾಜು ಅವರ ಮೂಲಕ ನಾಡಿನ ಪ್ರಾಯಶಃ ಎಲ್ಲ ಪ್ರಮುಖ ಸಾಹಿತಿಗಳ ಸಂಪರ್ಕ ಹೊಂದಿದೆ. ಚಿ. ಶ್ರೀನಿವಾಸ ರಾಜು ಅವರು ಸದಭಿರುಚಿಯುಳ್ಳ ಸಹೃದಯ ರಸಿಕರು. ಸೂಕ್ಷ್ಮ ಸಂವೇದನಾ ಶೀಲರು- ಗುಣಪಕ್ಷಪಾತಿಗಳು, ಅವರಿಗೆ ಈ ಕಾಲೇಜಿನ ಆಡಳಿತವರ್ಗ ಸಂಪೂರ್ಣ ಸಹಕಾರ ನೀಡಿ, ಈ ಕನ್ನಡ ಸಂಘವನ್ನು ಅದು ನಗರದ ಪ್ರಮುಖ ಸಾಂಸ್ಕೃತಿಕ ಸಂಸ್ಥೆಗಳ ಜತೆಗೆ ಸೇರಿಕೊಳ್ಳುವಷ್ಟು, ಬಲಪಡಿಸಿದೆ. ಈ ಸಂಘ ನನ್ನನ್ನು ಒಂದು ಸಲ ಬರಮಾಡಿಕೊಂಡು ಸತ್ಕರಿಸಿತು. ಆಶ್ಚರ್ಯವೇನೆಂದರೆ, ನನ್ನ ಅಭಿಮಾನಿ ಸ್ನೇಹಿತರೊಬ್ಬರು ಕೊಟ್ಟ ನನ್ನ ಪ್ರತಿಕೃತಿ, ಅಲ್ಲಿನ ವೇದಿಕೆಯ ಮೇಲೆ ಅನಾವೃತ ವಾಯಿತು. ಮುಖ್ಯಸ್ಥರು ನನ್ನನ್ನು ಬಹುವಾಗಿ ಆದರಿಸಿದರು. ಇದೆಂದು ಮರೆಯ ಲಾಗದ ವಿಶ್ವಾಸದ ನೆನಪು. ಇಲ್ಲಿ ಕನ್ನಡವನ್ನು ಪ್ರೋತ್ಸಾಹಿಸಲು ಅನೇಕ ಏರ್ಪಾಡು ಗಳಾಗಿವೆ. ವಿದ್ಯಾರ್ಥಿಗಳಿಂದ ಲೇಖನಗಳನ್ನು ಬರೆಯಿಸಿ ಪುಸ್ತಕ ರೂಪದಲ್ಲಿ ಪ್ರಕಟಿ ಸುವುದು, ವಿವಿಧ ಸ್ಪರ್ಧೆಗಳನ್ನು ಏರ್ಪಡಿಸಿ ಬಹುಮಾನಗಳನ್ನೂ ಹಂಚುವುದು, ಪ್ರಸಿದ್ಧ ಸಾಹಿತಿಗಳನ್ನು ಕರೆಸಿ ಅವರಿಂದ ಸ್ಫೂರ್ತಿಯುತವಾದ ಭಾಷಣಗಳನ್ನು ಮಾಡಿಸುವುದು ಮುಂತಾದ ಕಾರ್ಯಗಳು ಶ್ರದ್ಧೆಯಿಂದ ಅವಿರತವಾಗಿ ಇಲ್ಲಿ ನಡೆಯು ತ್ತಿವೆ. ಹಿಂದೆ ಮೈಸೂರು ಮಹಾರಾಜಾ ಕಾಲೇಜಿನಲ್ಲಿ ಪ್ರೊಫೆಸರ್ ಆಗಿದ್ದ ಶ್ರೀ W. G. Eagleton (ಈಗಲ್‌ಟನ್) ಅವರು ಆಚಾರ್ಯ ಬಿ. ಎಂ. ಶ್ರೀ ಅವರನ್ನು ಕುರಿತ ತಮ್ಮ ಲೇಖನವೊಂದರಲ್ಲಿ ಹೇಳಿರುವ ಮಾತು ಸ್ಮರಣೆಗೆ ಬರುತ್ತದೆ. ಅವರೆನ್ನುತ್ತಾರೆ, "During my years in Mysore I came to believe—

and it is one of the many lessons I learnt there—that no one can really assminilate a foreign culture unless his own Cultural roots are deep and strong". ಬಹಳ ಒಳ್ಳೆಯ ಮಾತು. ನಮ್ಮ ವಿದ್ಯಾರ್ಥಿಗಳೂ, ಅಧ್ಯಾಪಕರೂ, ಈಗಿನ ವಿದ್ಯಾಭ್ಯಾಸದ ಸೂತ್ರಗಳನ್ನು ತಮ್ಮ ಕೈಯಲ್ಲಿ ಹಿಡಿದಾಡಿಸುತ್ತಿರುವವರು ಅತ್ಯವಶ್ಯವಾಗಿ ಆಲೋಚಿಸತಕ್ಕ ವಿಷಯವಿದು. ಕ್ರೈಸ್ಟ್ ಕಾಲೇಜಿನಲ್ಲಿ ಪ್ರಾಯಶಃ ಹೊರನಾಡ ಸಂಸ್ಕೃತಿ ವಾತಾವರಣ ಗಾಢವಾಗಿರುವುದು ಸಹಜ. ಇಲ್ಲಿ ನಮ್ಮ ನಾಡಿನ ಸಂಸ್ಕೃತಿಯನ್ನು ಕನ್ನಡದ ಮೂಲಕ ಹರಡುವುದಕ್ಕಿಂತ ಒಳ್ಳೆಯ ಕೆಲಸ ಮತ್ತೇನಿದೆ ? ಕನ್ನಡ ಸಂಘ ಅಭಿನಂದನೀಯ ಕೆಲಸ ಮಾಡುತ್ತಿದೆ. ಇವರ ಮೂಲ ಪ್ರೇರಕರಾದವರೆಲ್ಲರಿಗೂ ನನ್ನ ಹಾರ್ದಿಕ ಅಭಿನಂದನೆಗಳು. ಆಧುನಿಕ ಸಾಹಿತ್ಯವನ್ನೇ ಅಲ್ಲದೆ ನಮ್ಮ ಪ್ರಾಚೀನ ಸಾಹಿತ್ಯದ ಅರಿವನ್ನು ಈ ಕಾಲೇಜಿನ ವಿದ್ಯಾರ್ಥಿಗಳಿಗೆ ನಮ್ಮ ಅಧ್ಯಾಪಕರು ತಂದು, ನಮ್ಮ ಸಂಸ್ಕೃತಿಯಲ್ಲಿ ರೂಢ ಮೂಲರಾಗಿಸಿ ಮತ್ತೊಂದು ಸಂಸ್ಕೃತಿಯ ಸೌಂದರ್ಯವನ್ನು ಶ್ರೇಯಃಕಾರಕವಾದ ಗುಣವನ್ನೂ ಸ್ವೀಕರಿಸಿ ಉನ್ನತ ಮನಸ್ಕರಾಗುವಂತೆ ಮಾಡಲಿ ಎಂದು ಹಾರೈಸಿ, ಈ ಕನ್ನಡ ಸಂಘದ ಚಟುವಟಿಕೆಗಳಿಗೆ ಗೆಲವು ಕೋರುತ್ತೇನೆ.

ಜಿ. ಬಿ. ಜೋಶಿ

ಬೆಂಗಳೂರು ಕ್ರೈಸ್ಟ್ ಕಾಲೇಜಿನ ಕನ್ನಡ ಸಂಘವು ಅವಿರತವಾಗಿ ಕನ್ನಡ ಪ್ರಕಾಶನ ಕಾರ್ಯದಲ್ಲಿ ಹೊಸ ಹೊಸ ಲೇಖಕರನ್ನು ನಿರ್ಮಿಸುವುದರಲ್ಲಿ ಭಾಗಿಯಾಗಿದೆ. ಈಗ, 50ನೆಯ ಪುಸ್ತಕವನ್ನು ಹೊರತರುತ್ತಿರುವ ಈ ಸಂದರ್ಭದಲ್ಲಿ ಸಂಘಕ್ಕೆ ಶುಭ ಕೋರುತ್ತೇನೆ. ಗ್ರಂಥ ಪ್ರಕಾಶನ ಕೇವಲ ವ್ಯವಹಾರವಾಗದೇ ಮೌಲಿಕ ಸಾಹಿತ್ಯದ ಬೆಳವಣಿಗೆಗೆ ಪೂರಕವಾಗಬೇಕು. ಆ ದಿಶೆಯಲ್ಲಿ ಕನ್ನಡ ಸಂಘದ ಪ್ರಕಟನೆಗಳು ಹೆಜ್ಜೆಯನ್ನಿಡುತ್ತಿವೆ ಎಂಬುದನ್ನು ಇಲ್ಲಿ ನೆನೆಯಬಯಸುತ್ತೇನೆ.

ಶುಭಮಸ್ತು.

ರಂ. ಶ್ರೀ. ಮುಗಳಿ

ನಿಮ್ಮ ಪತ್ರ ತಲುಪಿತು. ನಿಮ್ಮ ಕಾಲೇಜಿನ ಕನ್ನಡ ಸಂಘವು ತನ್ನ ಪ್ರಕಟಣೆಗಳ ಚಿನ್ನದ ಹಬ್ಬವನ್ನು ಆಚರಿಸುತ್ತಿರುವುದು ತಿಳಿದು ಸಂತೋಷವಾಯಿತು. ಈ ಸಾಹಿತ್ಯಿಕ ಕಾರ್ಯಸಿದ್ಧಿಗೆ ನಿಮ್ಮಲ್ಲಿ ಕನ್ನಡ ವಿಭಾಗದ ಮುಖ್ಯಸ್ಥರಾದ ಶ್ರೀ

ಶ್ರೀನಿವಾಸರಾಜು, ನಿಮ್ಮ ಕಾಲೇಜಿನ ಪ್ರಾಚಾರ್ಯರು ಮತ್ತು ಸಂಘದ ಸದಸ್ಯರು ನೀವೆಲ್ಲಾ ಕಾರಣರಾಗಿದ್ದೀರಿ. ಒಂದೆರಡು ನಿಮ್ಮ ಕಾರ್ಯಕ್ರಮಗಳಲ್ಲಿ ನಾನು ಭಾಗವಹಿಸಿ ಸಂತೋಷಪಟ್ಟಿದ್ದೇನೆ. ಬೇಂದ್ರೆ ಕಾವ್ಯವನ್ನು ಕುರಿತು ನನ್ನ ಪುಸ್ತಕವನ್ನು ನಿಮ್ಮ ಸಂಘ ಪ್ರಕಟಿಸಿದೆ. 'ಬೇಂದ್ರೆನಮನ' ಎಂಬ ಯೋಜನೆಯನ್ನು ರೂಢಿಸಿಕೊಂಡು ನೀವು ಬೇಂದ್ರೆಯವರನ್ನು ಕುರಿತ ಭಾಷಣಗಳನ್ನು ಮಾಡಿಸುತ್ತಿದ್ದೀರಿ. ಈ ನಿಮ್ಮ ಸಂಘವು ಕನ್ನಡ ಸಾಹಿತ್ಯ ಪ್ರೇಮಿಗಳೆಲ್ಲ ಹೆಮ್ಮೆಪಡುವಂಥ ಸಂಸ್ಥೆ. ಇದು ಇನ್ನೂ ಬೆಳೆಯುತ್ತಾ ಹೋಗಿ ನಿಮ್ಮ ಸಂಘವು ಶತಮಾನೋತ್ಸವವನ್ನು ಜರುಗಿಸುವಂತಾಗಲಿ ಎಂದು ಹಾರೈಸುತ್ತೇನೆ.

ವಿ. ಕೃ. ಗೋಕಾಕ್

ನಿಮ್ಮ ಸಂಘದ 50ನೇ ಪ್ರಕಟನೆಯನ್ನು ಎದುರುನೋಡುತ್ತಿದೆ ಎಂಬುದು ಸಂತೋಷದ ವಿಷಯ. ಅಲ್ಲದೆ ಪ್ರಾಧ್ಯಾಪಕ ಎ. ಎನ್. ಮೂರ್ತಿರಾಯರ ಸಮಗ್ರ ಲಲಿತ ಪ್ರಬಂಧಗಳು ಸೇರಿ ಈ 50ನೆಯ ಪ್ರಕಟನೆ ಬರುವುದೆಂದು ತಿಳಿದು ಇನ್ನೂ ಸಂತೋಷವಾಗಿದೆ.

ನೀವು ಒಂದು ನೆನಪಿನ ಸಂಚಿಕೆಯನ್ನು ಹೊರತರಲಿರುವುದು ಸಂತೋಷದ ಸಂಗತಿ. ನಾನು ನಿಮ್ಮ ಹಾಗೂ ನಿಮ್ಮ ಸಂಘದ ಸದಸ್ಯರ ಹಾಗೂ ಮೇಲಿನ ಅಧಿಕಾರಿಗಳೊಡನೆ ಕಳೆದ ಒಂದು ದಿನ ಇಳಿ ಹೊತ್ತಿನ ನೆನಪು ಇನ್ನೂ ಹಸಿರಾಗಿದೆ. ನಿಮ್ಮ ಎಲ್ಲ ಗೊತ್ತುಗುರಿಗಳನ್ನು ಅಲ್ಲಿಯ ವರಿಷ್ಠರು ಸಹಾನುಭೂತಿಯಿಂದ ನೋಡು ತ್ತಿದ್ದಾರೆ. ಅಲ್ಲಿಯ ವಿದ್ಯಾರ್ಥಿಗಳು ನಿಮ್ಮ ಎಲ್ಲ ಕಾರ್ಯಕ್ರಮಗಳಿಂದ ಒಂದು ಹೊಸ ಚೇತನವನ್ನು ಪಡೆಯುತ್ತಿದ್ದಾರೆ. ಕಂಕಣ ಕಟ್ಟಿದ ಕೈಗಳನ್ನು ನೀವು ಕಟ್ಟಿ ನಿಂತುಕೊಂಡು ಈ ಎಲ್ಲ ಮೇಲಿನ ಕೆಲಸಗಳನ್ನು ಸಾಂಗಗೊಳಿಸಲು ಸಿದ್ಧರಾಗಿದ್ದೀರಿ. ಅಂತೆಯೇ ನಿಮ್ಮ ಕನ್ನಡ ಸಂಘ ಭವ್ಯವಾಗಿ ನಾಡಿಗೆಲ್ಲಾ ಗೊತ್ತಾಗುವಂತೆ ಸೇವೆಯನ್ನು ಸಲ್ಲಿಸಿ ಕೃತಕೃತ್ಯವಾಗಿದೆ. ಇದು ಮಾಡುವವರಿಗೂ ನೋಡುವವರಿಗೂ ತುಂಬ ಆಹ್ಲಾದಕರವಾದ ವಿಷಯವಾಗಿದೆ. ನಿಮ್ಮ ಕಾರ್ಯ ಹೀಗೆ ಅವ್ಯಾಹತವಾಗಿ ನಡೆದು ನಿಮಗೆ ಸಂತೃಪ್ತಿಯನ್ನು ತರಲಿ, ನಿಮ್ಮ ಕಾಲೇಜಿಗೆ ಕೀರ್ತಿಯನ್ನು ತರಲಿ. ನಿಮ್ಮ ಎಲ್ಲ ವಿದ್ಯಾರ್ಥಿಗಳಿಗೆ ಸ್ಫೂರ್ತಿಯನ್ನು ಕೊಡುತ್ತಿರಲಿ.

ಎಂ. ಗೋಪಾಲಕೃಷ್ಣ ಅಡಿಗ

ಕ್ರೈಸ್ಟ್ ಕಾಲೇಜಿನ ಕನ್ನಡಸಂಘ, ವಿದ್ಯಾರ್ಥಿಗಳಲ್ಲಿ ಕನ್ನಡದ ಬಗ್ಗೆ ಆಸಕ್ತಿ ಯನ್ನು ಹುಟ್ಟಿಸುವ ಕೆಲಸಗಳನ್ನು ನಿರಂತರವಾಗಿ ನಡೆಸುತ್ತಾ ಬಂದು ಈಗ ತನ್ನ

ಐವತ್ತನೆಯ ಪುಸ್ತಕವನ್ನು ಪ್ರಕಟಿಸುತ್ತಿರುವುದು ಅತ್ಯಂತ ಸಂತೋಷದ, ಸುತ್ತ್ಯಾರ್ಹ ಸಂಗತಿ. ಕನ್ನಡದ ಬಗ್ಗೆ ಕಾಳಜಿ, ಕನ್ನಡ ಸಾಹಿತ್ಯದಲ್ಲಿ ಆಸಕ್ತಿ, ಸಾಹಿತ್ಯ ರಚನೆಯ ಶಕ್ತಿಯುಳ್ಳ ವಿದ್ಯಾರ್ಥಿಗಳಿಂದ ಕವನ–ಲೇಖನಗಳನ್ನು ಬರೆಯಿಸುವ ಈ ಕೆಲಸ ಇನ್ನು ಇನ್ನೂ ಚನ್ನಾಗಿ ನಡೆಯಲಿ ಎಂದು ಹಾರೈಸುತ್ತೇನೆ. ಈ ಎಲ್ಲ ಕೆಲಸಗಳಿಗೂ ಮೂಲ ಸ್ಫೂರ್ತಿಯೂ ಅವ್ಯಾಹಕ ಕಾರ್ಯನಿರತರೂ ಆದ ಶ್ರೀ ಜಿ. ಶ್ರೀನಿವಾಸರಾಜು ಅವರ ಈ ಸಾಧನೆ–ಸಿದ್ಧಿಗಳಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ.

ಜಿ. ವೆಂಕಟಸುಬ್ಬಯ್ಯ

ನಾನು ಕ್ರೈಸ್ಟ್ ಕಾಲೇಜಿನ ಕನ್ನಡ ಸಂಘವು ಜನ್ಮತಳೆದಂದಿನಿಂದ ಅದರ ಕಾರ್ಯವಿಧಾನವನ್ನು ವೀಕ್ಷಿಸುತ್ತಾ ಇದ್ದೇನೆ, ಅದರ ಯುವಕ ಪದಾಧಿಕಾರಿಗಳು ಕಾಲೇಜಿನ ಆಡಳಿತವರ್ಗದ ಪ್ರೋತ್ಸಾಹದ ಪರಿಣಾಮವಾಗಿ ಕೈಗೊಂಡಿರುವ ಅನೇಕ ಸಾಹಿತ್ಯ ಕಾರ್ಯಕ್ರಮಗಳೂ ಗ್ರಂಥಪ್ರಕಟನೆಯೂ ಶಿಕ್ಷಣ ಕ್ಷೇತ್ರದ ಅಪವಾದ [Exception]ವಾಗಿ ಕಾಣುತ್ತಿದೆ. ಶಿಕ್ಷಣ ಕ್ಷೇತ್ರವೇ ಭಾರಿ ಪ್ರದಾರಿಗಳ ಪುಂಡಾಟದ ಗುಂಪುಗಳ ಕೈಗೊಂಬೆಯಂತೆ ಮಾರ್ಪಡುತ್ತಿರುವ ಈ ಕಾಲದಲ್ಲಿ ಸಾಹಿತ್ಯ, ಸಂಸ್ಕೃತಿ, ಕಲೆ, ಸಮಾಜಸೇವೆ. ನೀತಿಜೀವನ ಮುಂತಾದವುಗಳ ಬಗ್ಗೆ ಮೌಲಿಕವಾದ ಕಾರ್ಯ ಮಾಡುವುದು ಅತ್ಯಂತ ಸ್ತುತ್ಯವಾದುದಲ್ಲದೆ ಫಲಕಾರಿ. ಈ ಕಾರ್ಯದಲ್ಲಿ ನಿರತ ರಾಗುವ ಯುವಕರಿಗೆ ಭವಿಷ್ಯದಲ್ಲಿ ತುಂಬಾ ಪ್ರಯೋಜನಕಾರಿ.

ಈ ಸಂಘದ ಗ್ರಂಥರಾಶಿಯೇ ಒಂದು ದಾಖಲೆ. 50ನೆಯ ಗ್ರಂಥ ಪ್ರಕಟ ವಾಗುವ ಈ ಸಮಯದಲ್ಲಿ ನಾನು ನನ್ನ ಶುಭಾಶಯಗಳನ್ನೇ ಕಳಿಸುತ್ತೇನೆ. ನನ್ನ ಮೆಚ್ಚುಗೆಯನ್ನು ದಾಖಲಿಸುತ್ತೇನೆ. ಶ್ರೀ ಜಿ. ಶ್ರೀನಿವಾಸರಾಜು ಅವರನ್ನು ವಿಶೇಷವಾಗಿ ಅಭಿನಂದಿಸುತ್ತೇನೆ. ಈ ದೀಕ್ಷೆ ನಿರಂತರವಾಗಿ ಕಾರ್ಯಶೀಲವಾಗಿರಲಿ,

ಎಂ. ವಿ. ಸೀತಾರಾಮಯ್ಯ

ಸಾರ್ವಜನಿಕರು ನಡೆಸುವ ಕನ್ನಡ ಸಂಘಕ್ಕೂ ಒಂದು ಕಾಲೇಜು ನಡೆಸುವ ಕನ್ನಡ ಸಂಘಕ್ಕೂ ಅವು ಇಟ್ಟುಕೊಂಡಿರುವ ಧ್ಯೇಯೋದ್ದೇಶಗಳಲ್ಲಿಯೂ ಕಾರ್ಯವಿಧಾನ ಗಳಲ್ಲಿಯೂ ಹೊಂದಿರುವ ಸಾಧನ ಸಂಪತ್ತಿನಲ್ಲಿಯೂ ವ್ಯತ್ಯಾಸಗಳಿವೆ. ಸಾರ್ವಜನಿಕ ಸಂಘಗಳು ಹುಟ್ಟಿದ ಮೇಲೆ ಕೆಲವು ವರ್ಷ ಕೆಲಸ ಮಾಡಿ, ತಟಸ್ಥವಾಗಿ ಉಳಿಯುತ್ತವೆ ಇಲ್ಲವೆ ತಮ್ಮ ಅಸ್ತಿತ್ವವನ್ನು ಮರೆಯದಿರುವುದಕ್ಕಾಗಿಯೋ ಎಂಬಂತೆ ಆಗೊಮ್ಮೆ

ಈಗೊಮ್ಮೆ ಕೆಲಸ ಮಾಡಿಕೊಂಡು ಬರುತ್ತವೆ ; ಒಳ್ಳೆಯ ಕೆಲಸವನ್ನು ಮಾಡಿದರೂ ಕಾರ್ಯಕರ್ತರ ಅಭಾವದಿಂದ ನಿಂತುಹೋಗುತ್ತವೆ. ನಾನು ಬಲ್ಲಮಟ್ಟಿಗೆ, ಈಗ ಅಸ್ತಮಾನವಾಗಿದ್ದರೂ ಇತರ ಅನೇಕ ಸಂಘಗಳ ಜನ್ಮಕ್ಕೂ ಕಾರ್ಯಕ್ಷಮತೆಗೂ ಸ್ಫೂರ್ತಿ–ಕೇಂದ್ರವಾಗಿ, ಮಾರ್ಗದರ್ಶಕವಾಗಿ ಕೆಲಸಮಾಡಿದ ಸಂಘ ಎಂದರೆ ಬೆಂಗಳೂರು ಸೆಂಟ್ರಲ್ ಕಾಲೇಜಿನ ಕರ್ಣಾಟಕ ಸಂಘ. ಈ ಸಂಘದಿಂದ ಸ್ಫೂರ್ತಿ ಪಡೆದು ಕೆಲವು ಕಾಲ ಒಳ್ಳೆಯ ಕೆಲಸ ಮಾಡಿದ ಸಂಘಗಳೆಂದರೆ ಶಿವಮೊಗ್ಗ ಕರ್ಣಾಟಕ ಸಂಘ, ಚಿಕ್ಕಮಗಳೂರು ಕರ್ಣಾಟಕ ಸಂಘ, ಮತ್ತು ಮೈಸೂರು ಮಹಾರಾಜರವರ ಕಾಲೇಜಿನ ಕರ್ಣಾಟಕ ಸಂಘ. ಉತ್ತರ ಕರ್ನಾಟಕದಲ್ಲಿ ಬಹುಶಃ ನವೋದಯ ಯುಗದ ಸಾರ್ವತ್ರಿಕ ಪ್ರಭಾವದಿಂದ ಹುಟ್ಟಿದ ಹೈದರಾಬಾದು ಸಾಹಿತ್ಯ ಸಂಘ, ರಾಯಚೂರು ಕರ್ನಾಟಕ ಸಂಘ, ಧಾರವಾಡದ ಗೆಳೆಯರ ಗುಂಪು—ಇವು ಒಳ್ಳೆಯ ಕೆಲಸ ಮಾಡಿವೆ. ರಾಯಚೂರು ಸಂಘ ಬೆಳ್ಳಿಯ ಹಬ್ಬವನ್ನು ಕೂಡ ಆಚರಿಸಿದೆ. ಸೆಂಟ್ರಲ್ ಮತ್ತು ಮಹಾರಾಜ ಕಾಲೇಜುಗಳ ಕರ್ನಾಟಕ ಸಂಘಗಳಂತೆಯೇ ಗೆಳೆಯರ ಗುಂಪು ಕೂಡ ಬರಹಗಾರರನ್ನೂ ವಿಮರ್ಶಕರನ್ನೂ ಸಂಶೋಧಕರನ್ನೂ ಮುಂದಕ್ಕೆ ತಂದಿದೆ ; ಅಂಥವರಲ್ಲಿ ಹಲವರು ಖ್ಯಾತನಾಮರಾದದ್ದು ಪ್ರಸಿದ್ಧವಾದ ಸಂಗತಿ.

ಈಚಿನ ದಿನಗಳಲ್ಲಿ ಕಾಲೇಜು ಸಂಘಗಳೇನೋ ಹೆಚ್ಚಿನ ಸಂಖ್ಯೆಯಲ್ಲಿ ಹುಟ್ಟಿ ಕೊಂಡಿವೆ. ಸಾಮಾನ್ಯವಾಗಿ, ಉದ್ಘಾಟನಾ ಸಮಾರಂಭ, ಸಮಾರೋಪ ಸಮಾರಂಭ, ಇಷ್ಟರಿಂದ ಅವು ಕೃತಾರ್ಥಗಳಾಗಿವೆ. ವಿಶೇಷವೆಂದರೆ, ರಾಜ್ಯೋತ್ಸವದ ಆಚರಣೆ !

ಈ ಹಿನ್ನೆಲೆಯಲ್ಲಿ ಪರಿಶೀಲಿಸಬೇಕು, ಕ್ರೈಸ್ಟ್ ಕಾಲೇಜಿನ ಕನ್ನಡ ಸಂಘದ ಅಮೋಘ ಸಾಧನೆಯನ್ನು.

ಒಂದು ಕಾಲೇಜಿನ ಕರ್ನಾಟಕ ಸಂಘ ನಿರಂತರವಾಗಿ, ಗಣ್ಯವಾದ ರೀತಿಯಲ್ಲಿ ಕೆಲಸ ಮಾಡಬೇಕಾದರೆ—ಮೂರು ಅಂಶಗಳು ಮುಖ್ಯ, ಅಗತ್ಯ : ಒಂದನೆಯದಾಗಿ, ಕಾಲೇಜಿನ ಪ್ರಿನ್ಸಿಪಾಲರು ಕನ್ನಡ ಸಂಘಕ್ಕೆ ಕಾರ್ಯಸ್ವಾತಂತ್ರ್ಯವನ್ನೂ ಪ್ರೋತ್ಸಾಹ ವನ್ನೂ ನೀಡುತ್ತಿರಬೇಕು ; ಎರಡನೆಯದಾಗಿ ಸಂಘದ ಅಧ್ಯಕ್ಷರು (ಅಧ್ಯಕ್ಷ ಎಂದು ಕರೆದುಕೊಳ್ಳದಿದ್ದರೂ ಅದರ ಕ್ರಿಯಾಶಕ್ತಿಯಾಗಿ ಕೆಲಸ ಮಾಡುವವರು) ತಾವೂ ದುಡಿದು, ವಿದ್ಯಾರ್ಥಿಗಳಲ್ಲಿ ಕನ್ನಡದ ಅಭಿಮಾನವನ್ನು ಬಿತ್ತಿ ಸಂಘದ ಕೆಲಸದಲ್ಲಿ ಆಸಕ್ತಿ ಹುಟ್ಟಿಸಿ ಅವರನ್ನು ಸಂಘ ಕಾರ್ಯದಲ್ಲಿ ತೊಡಗಿಸಬಲ್ಲಂಥ ವ್ಯಕ್ತಿತ್ವವನ್ನು ಬೆಳೆಸಿ ಕೊಂಡಿರಬೇಕು ; ಮೂರನೆಯದಾಗಿ, ವಿದ್ಯಾರ್ಥಿಗಳು ಸಂಘದ ಕಾರ್ಯಕಲಾಪಗಳಲ್ಲಿ ವಿಭಾಗದ ಹಾಗೂ ಸಂಘದ ಮುಖ್ಯಸ್ಥರ ಮಾರ್ಗದರ್ಶನದಲ್ಲಿ ಸಂತೋಷದಿಂದ ಭಾಗ ವಹಿಸಬೇಕು. ಈ ಶಕ್ತಿತ್ರಯಗಳು ಸಂಗಮಿಸಿದಾಗ ಉತ್ತಮ ಕೆಲಸ ಸಾಧ್ಯ. ಕ್ರೈಸ್ಟ್ ಕಾಲೇಜು ಕನ್ನಡ ಸಂಘ ಈ ಮೂರೂ ಶಕ್ತಿಗಳ ವರದಾನವನ್ನು ಪಡೆದುಕೊಂಡು ಕೃತಕೃತ್ಯವಾಗಿದೆ. ನಾನು ಬಲ್ಲಂತೆ, ಕಾಲೇಜಿನ ಪ್ರಿನ್ಸಿಪಾಲರು ಸಂಘದ ಚೈತನ್ಯ ಶಕ್ತಿಯಾದ ಚಿ. ಶ್ರೀನಿವಾಸರಾಜು ಅವರಿಗೆ ಎಲ್ಲ ಬಗೆಯ ಸಹಕಾರವನ್ನೂ ಬೆಂಬಲ

ವನ್ನೂ ಸಂಘ ಸ್ಥಾಪಿತವಾದಂದಿನಿಂದ ನೀಡುತ್ತ ಬಂದಿದ್ದಾರೆ. ಶ್ರೀನಿವಾಸರಾಜು ಅವರು ಸರಕಾರಿ ಕಾಲೇಜಿನ ವಿದ್ಯಾರ್ಥಿಯಾಗಿದ್ದಾಗಲೇ ಅಲ್ಲಿನ ಕರ್ನಾಟಕ ಸಂಘದಲ್ಲಿ (ಈ ಸಂಘವೂ ಜಿ. ಪಿ. ರಾಜರತ್ನಂ ಅವರೇ ಸ್ಥಾಪನೆಮಾಡಿದ್ದು) ಕಾರ್ಯಸ್ಫೂರ್ತಿಯನ್ನು ಪಡೆದುಕೊಂಡು, ಸೆಂಟ್ರಲ್ ಕಾಲೇಜಿನಲ್ಲಿ ಎಂ.ಎ. ವಿದ್ಯಾರ್ಥಿಯಾಗಿದ್ದಾಗ ರಾಜರತ್ನಂ ಅವರ 'ಸಾಹಿತ್ಯ ಪರಿಚಾರಿಕೆ'ಯ ಪ್ರತ್ಯಕ್ಷಾನುಭವವನ್ನು ಪಡೆದುಕೊಂಡು, ಕ್ರೈಸ್ಟ್ ಕಾಲೇಜಿನಲ್ಲಿ ಕನ್ನಡ ಸಂಘವನ್ನು ಹುಟ್ಟುಹಾಕಿ, ಕನ್ನಡದ ಕೆಲಸಕ್ಕೆ ವಿದ್ಯಾರ್ಥಿಗಳನ್ನು ಆಕರ್ಷಿಸಿ, ಯೋಜನಾಬದ್ಧವಾಗಿ ಒಂದೇ ಸಮನೆ ಎಡೆಬಿಡದೆ ಉಪನ್ಯಾಸ ಮತ್ತು ಪ್ರಕಟನ ಕಾರ್ಯಗಳನ್ನು ನಡೆಸಿಕೊಂಡು ಬಂದಿದ್ದಾರೆ. ಗ್ರಂಥಪ್ರಕಟನ ಕಾರ್ಯದಲ್ಲಿ ಸಂಘವು ನಿರಂತರವಾಗಿ ವಿದ್ಯಾರ್ಥಿಗಳ ಬರವಣಿಗೆಗೂ ಯುವ ಬರಹಗಾರರಿಗೂ ಆದ್ಯಗಮನ ಕೊಡುತ್ತಿರುವುದು ತುಂಬ ಪ್ರಶಂಸನೀಯ; ಇದರಿಂದ ಸೆಂಟ್ರಲ್ ಕಾಲೇಜು ಕರ್ನಾಟಕ ಸಂಘ (ಅದು ಈಗ ಇಲ್ಲವಲ್ಲಾ!) ಪ್ರಾರಂಭಿಸಿದ ವಿದ್ಯಾರ್ಥಿಪ್ರತಿಭಾವಿಕಾಸ ಕಾರ್ಯಕ್ರಮದ ಪರಂಪರೆಯನ್ನು ಯಶಸ್ವಿಯಾಗಿ ಮುಂದುವರಿಸಿಕೊಂಡು ಬಂದಂತಾಗಿದೆ. 'ವಿದ್ಯಾರ್ಥಿವಿಕಾಸ ಮಾಲೆ'ಯ ಪ್ರಕಟನೆಗಳು ಈ ಯೋಜನೆಯ ಸತ್ಫಲ.

ಈ ಮಾಲೆಯ ಜೊತೆಜೊತೆಯಲ್ಲಿ ಪ್ರಕಟವಾಗುತ್ತಿರುವ ದ್ವಿತೀಯ ಬರಹಗಾರರ ಕೃತಿಗಳು ಇಂದಿನ ಮುಂದಿನ ಎಲ್ಲ ವಿದ್ಯಾರ್ಥಿಗಳಿಗೆ ಸಾಹಿತ್ಯ ಪ್ರಕಾರಗಳ ಉತ್ತಮ ಮಾದರಿಗಳಾಗಿ ನಿಲ್ಲುತ್ತವೆ. ಬೇಂದ್ರೆ ಸ್ಮೃತಿ ಉಪನ್ಯಾಸ ಮಾಲೆಯ ಫಲವಾಗಿ ಮೂಡಿಬಂದ ಬೇಂದ್ರೆ ಕುರಿತ ಕೃತಿಗಳು ವಿಶಿಷ್ಟವಾದವು. ಸದ್ಯದಲ್ಲಿಯೇ ಹೊರಬರಲಿರುವ, ಪ್ರೊ॥ ಎ. ಎನ್; ಮೂರ್ತಿರಾಯರ ಎಲ್ಲ ಪ್ರಬಂಧಗಳ ಸಮಗ್ರ ಸಂಪುಟ ಸಂಘದ ಈವರೆಗಿನ ಸಾಹಿತ್ಯ ಸೇವಾವಲ್ಲರಿಯ ಸುವರ್ಣಪುಷ್ಪವಾಗಿ ಅರಳಲಿದೆ. ಈ ಎಲ್ಲ ಕಾರ್ಯಗಳ ಹಿಂದೆ ಶ್ರೀನಿವಾಸರಾಜು ಅವರ ಉತ್ತಮ ಸಾಹಿತ್ಯಾಭಿರುಚಿ ಪ್ರವೃತ್ತವಾಗಿದೆ.

ಕನ್ನಡ ಸಂಘಗಳ ಇತಿಹಾಸದಲ್ಲಿ ಕ್ರೈಸ್ಟ್ ಕಾಲೇಜಿನ ಕನ್ನಡ ಸೇವೆ ಒಂದು ಉಚ್ಚ ದಾಖಲೆಯಾಗಿ ನಿಲ್ಲುವುದರಲ್ಲಿ ಸಂದೇಹವಿಲ್ಲ.

ಸಂಘ ಚಿರಾಯುವಾಗಲಿ.

ವ್ಯಾಸರಾಯ ಬಲ್ಲಾಳ

ಶೈಕ್ಷಣಿಕ ಸಂಸ್ಥೆಗಳು ಪಠ್ಯೇತರ ಚಟುವಟಿಕೆಗಳನ್ನು ನಡೆಸುವುದು ವಿಶೇಷವೇನಲ್ಲವಾದರೂ ವಿದ್ಯಾರ್ಥಿಗಳ ಸಾಹಿತ್ಯಾಭಿರುಚಿಯನ್ನು ಪೋಷಿಸುವ, ಸೃಜನಶೀಲತೆಯನ್ನು ಗುರುತಿಸುವ ಚಟುವಟಿಕೆಗಳಲ್ಲಿ ತೊಡಗುವುದು ತೀರ ವಿರಳ. ಕ್ರೈಸ್ಟ್

ಕಾಲೇಜ್ ಕನ್ನಡ ಸಂಘವು ತನ್ನ ಸಾಹಿತ್ಯಕ ಚಟುವಟಿಕೆಗಳಿಂದ, ಗ್ರಂಥ ಪ್ರಕಟಣೆಯ ಕಾರ್ಯಕ್ರಮಗಳಿಂದ ಕಾಲೇಜಿನ ಆವರಣದಲ್ಲಿ ನಿರ್ಮಿಸಿಕೊಂಡಿರುವ ಸಾಂಸ್ಕೃತಿಕ ವಾತಾವರಣವು, ಇಂದಿನ ಸಾಮಾಜಿಕ ಸಂದರ್ಭದಲ್ಲಂತೂ ತುಂಬ ಆರೋಗ್ಯಕರ ವೆನಿಸುವ ಬೆಳವಣಿಗೆಯೆಂದು ನಾನು ತಿಳಿದಿದ್ದೇನೆ. ತಿಳಿವಳಿಕೆ, ಸೃಜನಶೀಲತೆಗಳು ನಶಿಸಲು ಸಹಾಯ ಮಾಡುವಂಥ ಶಕ್ತಿಗಳು ಇಂದು ನಮ್ಮ ಸಾಮಾಜಿಕ ಪರಿಸರದಲ್ಲಿ ಸಾಕಷ್ಟು ಅನಾಹುತ ಮಾಡುತ್ತಿರುವಾಗ, ಕ್ರೈಸ್ಟ ಕಾಲೇಜ್ ಕನ್ನಡ ಸಂಘವು ಕಾಲೇಜಿನ ವಿದ್ಯಾರ್ಥಿಗಳಲ್ಲಿ ಸೃಜನಶೀಲ ಆಸಕ್ತಿಗಳನ್ನು ಬೆಳೆಸಲು, ಸಾಹಿತ್ಯದ ಮೂಲಕ ತಿಳಿವಳಿಕೆಯನ್ನು ಹರಡಲು ಮಾಡುತ್ತಿರುವ ಕೆಲಸ ಅತ್ಯಂತ ಪ್ರಶಂಸನೀಯ ವೆಂದು ಬೇರೆ ಹೇಳಬೇಕಾಗಿಲ್ಲ. ಸೆಂಟ್ರಲ್ ಕಾಲೇಜು ಕನ್ನಡ ಸಂಘದ ಪ್ರಕಟಣೆ ಗಳನ್ನು ನೆನಪಿಗೆ ತರುವ, ಕ್ರೈಸ್ಟ್ ಕಾಲೇಜ್ ಕನ್ನಡ ಸಂಘವು ಪ್ರಕಟಿಸಿದ ಗ್ರಂಥ ಗಳೆಲ್ಲ ತಮ್ಮ ಗುಣಮಟ್ಟದಿಂದ ಗಮನಾರ್ಹ ಗ್ರಂಥಗಳೆನಿಸಿವೆ; ಕೆಲವು ಆಕರ ಗ್ರಂಥ ಗಳೆನಿಸುವಷ್ಟು ಯೋಗ್ಯತೆಯನ್ನು ಗಳಿಸಿವೆ. ಹಿರಿಯ ಸಾಹಿತಿ ಪ್ರೊ. ಎ. ಎನ್. ಮೂರ್ತಿರಾಯರ 'ಸಮಗ್ರ ಲಲಿತ ಪ್ರಬಂಧಗಳು' ಸಂಘದ 50ನೆಯ ಗ್ರಂಥವಾಗಿ ಪ್ರಕಟವಾಗುತ್ತಿರುವುದು ತುಂಬ ಸಂತೋಷದ ವಿಚಾರ. ಸಂಘವು ಸಾಹಿತ್ಯ ಕ್ಷೇತ್ರದಲ್ಲಿ ಮಾಡುತ್ತಿರುವ ಈ ಸಾಹಸ ಚಿರಕಾಲ ಮುಂದುವರಿಯುವಂತಾಗಲಿ, ಸಂಘ ಪ್ರಕಟನೆ ಗಳೆಲ್ಲ ಕನ್ನಡ ಸಾಹಿತ್ಯದ ಶ್ರೀಮಂತಿಕೆಯನ್ನು ನೆನೆಸಿಕೊಳ್ಳುವಂಥ ಗ್ರಂಥಗಳೆನಿಸಲಿ ಎಂದು ಹಾರೈಸುತ್ತೇನೆ.

ಜಿ. ಎಸ್. ಶಿವರುದ್ರಪ್ಪ

ಬೆಂಗಳೂರಿನ ಕ್ರೈಸ್ತ್ ಕಾಲೇಜಿನ ಕನ್ನಡ ಸಂಘವು, ತನ್ನ ಐವತ್ತನೆಯ ಪ್ರಕಟನೆಯ ಸಂದರ್ಭದಲ್ಲಿ ಒಂದು ನೆನಪಿನ ಸಂಚಿಕೆಯನ್ನು ತರುತ್ತಿರುವುದು ತುಂಬ ಅರ್ಥಪೂರ್ಣವಾದ ಸಂಗತಿಯಾಗಿದೆ. ಈ ಸಂಘವು ಕಳೆದ ಹಲವಾರು ವರ್ಷಗಳಿಂದ, ಕ್ರೈಸ್ತ್ ಕಾಲೇಜಿನ ವಿದ್ಯಾರ್ಥಿ ಪ್ರತಿಭೆಯ ಪ್ರತ್ಯಭಿಜ್ಞೆಗೆ ಮತ್ತು ಪ್ರಕಾಶನಕ್ಕೆ ನಿರ್ಮಿಸಿರುವ ಹಾಗೂ ಕಾಯ್ದುಕೊಂಡು ಬಂದಿರುವ ವಾತಾವರಣ, ಅತ್ಯಂತ ವಿಶಿಷ್ಟ ವಾದದ್ದು. ಈ ಸಂಘ ತನ್ನ ಕಾರ್ಯ ಚಟುವಟಿಕೆಗಳಿಗೆ ಕ್ರೈಸ್ತ್ ಕಾಲೇಜನ್ನು ಒಂದು ನಿಲುನೆಲೆಯನ್ನಾಗಿ ಮಾಡಿಕೊಂಡಿದ್ದರೂ, ಅದು ತನ್ನ ತೆಕ್ಕೆಯೊಳಕ್ಕೆ ಇಡೀ ಕರ್ನಾಟಕದ ಯುವ ಪ್ರತಿಭೆಯನ್ನು ತೆಗೆದುಕೊಂಡ ರೀತಿಯನ್ನು, ಅದು ಇದುವರೆಗೂ ನಡೆಯಿಸಿದ ವಿವಿಧ ಸಾಹಿತ್ಯ ಚಟುವಟಿಕೆ ಮತ್ತು ಪ್ರಕಟನೆಗಳು ಸಾಬೀತು ಪಡಿಸುತ್ತವೆ. ಮೌಲಿಕ ವಾದ ಈ ಎಲ್ಲ ಕೆಲಸದ ಹಿಂದೆ ಇರುವ ನಿಶ್ಯಬ್ದ – ಕ್ರಿಯಾಶೀಲ ಕೇಂದ್ರ ವ್ಯಕ್ತಿಯಾದ ಶ್ರೀ ಜಿ. ಶ್ರೀನಿವಾಸರಾಜು ಅವರಿಗೂ, ಅವರಿಗೆ ಬೆಂಬಲವಾಗಿ ನಿಂತ ಕ್ರೈಸ್ತ್ ಕಾಲೇಜಿನ ಪ್ರಿನ್ಸಿಪಾಲರು ಹಾಗೂ ಅಧ್ಯಾಪಕ ವೃಂದದವರಿಗೂ ಅಭಿನಂದನೆಗಳು.

ಚೆನ್ನವೀರ ಕಣವಿ

ಇಂದು ಎಷ್ಟೋ ಹೊಸ ಬರೆಹಗಾರರು ತಮ್ಮ ಅಭಿವ್ಯಕ್ತಿ ಮಾಧ್ಯಮವನ್ನು ಸರಿಯಾಗಿ ಕಂಡುಕೊಳ್ಳದೆ, ತಕ್ಕ ಮಾರ್ಗದರ್ಶನವೂ ಇಲ್ಲದೆ ತೊಳಲಾಡುತ್ತಿರುವು ದನ್ನು ನಾನು ಅನೇಕ ಸಲ ಕಂಡಿದ್ದೇನೆ. ಅಂಥ ಸಂದರ್ಭದಲ್ಲೆಲ್ಲ ಬೆಂಗಳೂರಿನ ಕ್ರೈಸ್ಟ್ ಕಾಲೇಜ್ ಕನ್ನಡ ಸಂಘ ನನ್ನ ಕಣ್ಣೆದುರು ನಿಲ್ಲುತ್ತದೆ. ಕಳೆದ ಕೆಲವರ್ಷ ಗಳಿಂದ ಅದು ನಡೆಸುತ್ತಿರುವ ಕನ್ನಡದ ಕೆಲಸ ಅನನ್ಯವಾದದ್ದು, ಅನುಕರಣೀಯ ವಾದದ್ದು.

ವಿದ್ಯಾರ್ಥಿಗಳಲ್ಲಿ ಅಂತರ ಕಾಲೇಜು ಲೇಖನ–ಕವನ ಸ್ಪರ್ಧೆಗಳನ್ನೇರ್ಪಡಿಸಿ ಸಾಹಿತ್ಯಾಭಿರುಚಿಯನ್ನು ಬೆಳೆಸುತ್ತ, ಅವುಗಳನ್ನಾಯ್ದು ಪ್ರಕಟಿಸಿ ಬರವಣಿಗೆಗೆ ಪ್ರೋತ್ಸಾಹ ನೀಡುತ್ತಿರುವುದು ಈ ದಿಸೆಯಲ್ಲಿ ಒಂದು ಮಹತ್ವದ ಹೆಜ್ಜೆಯಾಗಿದೆ. ಹಿಂದೆ ಜಿ. ಪಿ. ರಾಜರತ್ನಂ ಅವರಂಥ ಸಾಹಿತಿ ಪರಿವ್ರಾಜಕರು ಹಾಕಿಕೊಟ್ಟ ಆದರ್ಶ ವನ್ನನುಸರಿಸಿ ಅದನ್ನು ಇನ್ನೂ ವ್ಯಾಪಕವಾಗಿ ವಿಸ್ತಾರವಾಗಿ, ವೈವಿಧ್ಯಪೂರ್ಣವಾಗಿ ಮುನ್ನಡೆಸುತ್ತಿರುವ ಭಾಗ್ಯ ಈ ಕಾಲೇಜಿನ ಕನ್ನಡ ಸಂಘದ್ದಾಗಿದೆ.

ಸಂಘದ ಪ್ರಕಟನೆಗಳಲ್ಲಿ ಯುವಕರನ್ನು ಒಳಗೊಂಡ ಇನ್ನಿತರ ಗಣ್ಯ ಲೇಖಕರ ಸೃಜನಾತ್ಮಕ ಕೃತಿಗಳಿವೆ. ಕವಿವರ್ಯ ಬೇಂದ್ರೆಯವರ ಜನ್ಮದಿನದ ಸಮಾರಂಭ ದೊಂದಿಗೆ ವಿಶೇಷೋಪನ್ಯಾಸದ ಮೂಲಕ ಅವರ ಕಾವ್ಯದ ವಿಮರ್ಶೆ ಹಾಗೂ ಪ್ರಕಟನೆ ಹೊಸಬಗೆಯಲ್ಲಿ ಸಾಗಿರುವುದು ಗಮನಾರ್ಹವಾದದ್ದು. ಅನ್ಯಭಾಷಾ ಕೃತಿಗಳ ಪ್ರಕಟನೆ ಯೊಂದಿಗೆ ಸಂಘದ ಕಾರ್ಯವ್ಯಾಪ್ತಿ ವಿಸ್ತಾರಗೊಂಡಿದೆ. ಇದೀಗ ತನ್ನ ೫೦ನೆಯ ಪುಸ್ತಕವಾಗಿ ಪ್ರೊ. ಎ. ಎನ್. ಮೂರ್ತಿರಾಯರ 'ಸಮಗ್ರ ಲಲಿತ ಪ್ರಬಂಧಗಳು' ಪ್ರಕಟವಾಗಲಿರುವುದು ಯಾರೂ ಕಂಡರಿಯದ ಸಾಹಸವೆಂದೇ ಹೇಳಬಹುದು. ಈ ಎಲ್ಲ ಕೆಲಸಗಳ ಯೋಜನೆ, ನಿರ್ವಹಣೆಯ ಹಿಂದೆ ಎಡೆಬಿಡದೆ, ಸದ್ದಿಲ್ಲದೆ ದುಡಿಯು ತ್ತಿರುವ, ಸ್ವತಃ ಪ್ರಯೋಗಶೀಲ ಕವಿ ಹಾಗೂ ನಾಟಕಕಾರರಾದ ಶ್ರೀ ಚಿ. ಶ್ರೀನಿವಾಸ ರಾಜು ಅವರನ್ನು ಎಷ್ಟು ಅಭಿನಂದಿಸಿದರೂ ಸಾಲದು. ಅಂಥವರ ಸಂಖ್ಯೆ ಹೆಚ್ಚಿ ದಷ್ಟೂ ನಮ್ಮ ವಿದ್ಯಾ ಸಂಸ್ಥೆಗಳ ಶೈಕ್ಷಣಿಕ ಕಾರ್ಯಕ್ಕೆ ಸಾಹಿತ್ಯಿಕ ಸಂಸ್ಕಾರ ಒದಗಿ ಒಂದು ಹೊಸ ಜನಾಂಗ ನಿರ್ಮಾಣವಾಗುವ ಕನಸನ್ನು ಕಂಡರೆ ತಪ್ಪೇನು ?

ಶ್ರೀ ಚಿ. ಶ್ರೀನಿವಾಸರಾಜು ಅವರಿಗೆ ಬೆಂಬಲವಾಗಿರುವ ಕ್ರೈಸ್ಟ್ ಕಾಲೇಜಿನ ಪ್ರಿನ್ಸಿಪಾಲರಿಗೂ, ಈ ಕಾರ್ಯದಲ್ಲಿ ಅವರಿಗೆ ನೆರವಾಗುತ್ತಿರುವ ಇನ್ನುಳಿದ ಎಲ್ಲ ಮಿತ್ರರಿಗೂ ನನ್ನ ಹೃತ್ಪೂರ್ವಕ ಅಭಿನಂದನೆಗಳು.

ನಿರಂಜನ

ಬೆಂಗಳೂರಿನ ಕ್ರೈಸ್ಟ್ ಕಾಲೇಜ್ ಸುಪ್ರಸಿದ್ಧ ವಿದ್ಯಾಸಂಸ್ಥೆ. ಅದರ ಪ್ರಸಿದ್ಧಿಗೆ ಅಲ್ಲಿನ ಪಠ್ಯೇತರ ಚಟುವಟಿಕೆಗಳೂ ಕಾರಣ ಎನ್ನಬಹುದು. ಅಂತಹ ಪಠ್ಯೇತರ ವಲಯಕ್ಕೆ ಸೇರಿದ್ದು ಕಾಲೇಜಿನ ಕನ್ನಡ ಸಂಘ.

ಸಂಘದ ಪ್ರಕಟಣೆಗಳು ನಾಡಿನ ಸಾಹಿತ್ಯಾಸಕ್ತರ ಗಮನ ಸೆಳೆದಿವೆ. ಅವರ ಆದರಕ್ಕೆ ಪಾತ್ರರಾಗಿದ್ದಾರೆ. ಸಂಘದ ಚಾಲಕಶಕ್ತಿಯಾದ ಪ್ರೊ. ಚಿ. ಶ್ರೀನಿವಾಸ ರಾಜು ಈ ವರ್ಷ ಕ್ರೈಸ್ಟ್ ಕಾಲೇಜ್ ಕನ್ನಡ ಸಂಘ ಅರ್ಧ ಶತಕ ಬಾರಿಸಲು ತಾಲೀಮು ನಡೆಸಿದೆ. ಅದು ದಾಖಲೆಯಾಗುತ್ತದೆ.

ಮುಂದೆ ಶತಕ! ಆ ವಿಕ್ರಮವೂ ಸಾಧ್ಯವಾಗಲೆಂದು ಹಾರಯಿಸುವೆ.

ಅನುಪಮಾ ನಿರಂಜನ

'ಕ್ರೈಸ್ಟ್ ಕಾಲೇಜ್ ಕನ್ನಡ ಸಂಘ'ದ ಪರಿಚಯ ನನಗಾದದ್ದೇ ಪುಸ್ತಕಗಳ ಮೂಲಕ. ಅವರು ಪ್ರಕಟಿಸಿದ ಹೊತ್ತಗೆಗಳ ವೈವಿಧ್ಯ ಬೆರಗುಗೊಳಿಸುವಂಥದು. ಸಾಹಿತ್ಯದ ಎಲ್ಲ ಪ್ರಕಾರಗಳೂ ಇಲ್ಲಿ ಸಮಾನ ಸ್ಥಾನ ಪಡೆದಿದೆ. ಕೃತಿಯ ಗುಣ ಮಟ್ಟಕ್ಕೆ ಇಲ್ಲಿ ಪ್ರಾಧಾನ್ಯ ಎಂಬುದನ್ನು ಗುರುತಿಸಿದ್ದೇನೆ. ಬೇಂದ್ರೆಯವರ ಕೃತಿಗಳ ಬಗ್ಗೆ ಪ್ರಕಟಿಸಿದ ವಿಮರ್ಶಾತ್ಮಕ ಲೇಖನಗಳಂತೂ ವಿಚಾರವಂತರಿಗೆ ದೊಡ್ಡ ಆಕರ ಸಾಮಗ್ರಿ. ಈ ಎಲ್ಲ ಚಟುವಟಿಕೆಗಳಿಗೂ ಪ್ರೇರಕ ಶಕ್ತಿಯಾಗಿರುವವರು ಪ್ರಾಧ್ಯಾಪಕ ಶ್ರೀ ಚಿ. ಶ್ರೀನಿವಾಸರಾಜು.

ಕ್ರೈಸ್ಟ್ ಕಾಲೇಜು ಕನ್ನಡ ಸಂಘ ಐವತ್ತು ಪುಸ್ತಕಗಳ ಪ್ರಕಟಣೆಯ ಸಾಹಸ ಈಗಾಗಲೇ ಮುಗಿಸಿವೆ. ನೂರರ ಸಂಭ್ರಮವೂ ಬೇಗ ಬರಲಿ ಎಂದು ಹಾರೈಸುತ್ತೇನೆ.

ಸುಬ್ಬಣ್ಣ ರಂಗನಾಥ ಎಕ್ಕುಂಡಿ

ಒಂದೆರಡು ವರ್ಷಗಳ ಹಿಂದೆ ನನಗೊಂದು ಸಂತೋಷದ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವ ಅವಕಾಶವೊದಗಿತು. ಆ ಭಾಗ್ಯವನ್ನು ನನಗೆ ನೀಡಿದವರು, ಕ್ರೈಸ್ಟ್ ಕಾಲೇಜಿನ ಕನ್ನಡ ಸಂಘದವರು; ಆ ಸಂಘದ ಚೈತನ್ಯಮೂರ್ತಿ ಶ್ರೀ ಚಿ. ಶ್ರೀನಿವಾಸ ರಾಜು ಅವರು; ತಮ್ಮ ಕನ್ನಡ ಸಂಘದಿಂದ ಒಂದು ಕವಿತಾ ಸಂಗ್ರಹವನ್ನು ಪ್ರಕಟಿಸುತ್ತೇವೆಂದೂ, ಅದರ ಪ್ರಕಾಶನ ಸಮಾರಂಭಕ್ಕೆ ಬರಬೇಕೆಂದೂ ನನ್ನನ್ನು ಆಮಂತ್ರಿಸಿದ್ದರು. ಸಂಗ್ರಹದ ಹೆಸರು, 'ಶಬ್ದದೊಳಗಣ ನಿಶ್ಶಬ್ದ!'

ಅದನ್ನು ಬರೆದ ಕವಿ ಶ್ರೀ ಡಿ. ವಿ. ರಾಜಶೇಖರ್, ಅವರು 'ಪ್ರಜಾವಾಣಿ'ಯ ಪರಿವಾರದಲ್ಲಿ ಸೇರಿದ ಪ್ರಖ್ಯಾತ ಪತ್ರಕರ್ತರು. ಶಬ್ದ, ನಿಶ್ಶಬ್ದ, ಎರಡನ್ನು ಚೆನ್ನಾಗಿ ಬಲ್ಲ ಅವರ ಕವಿ ಚೇತನಕ್ಕೆ, ಕ್ರೈಸ್ಟ್ ಕಾಲೇಜಿನ ಕನ್ನಡ ಸಂಘವು, ಕಿವಿಯನ್ನೊಡ್ಡಿತು, ಕೊರಳನ್ನು ನೀಡಿತ್ತು. ತನ್ನ ಆತ್ಮೀಯ ಅಂತರಂಗದಲ್ಲಿ ಚಿಂತನೆಯ ಗುಡಿಯನ್ನ ಒಪಗಿಸಿತ್ತು. ಈ ಮೊದಲು, ಈ ಕಾಲೇಜಿನ ಕನ್ನಡ ಸಂಘದ ಸಂಪರ್ಕದ ಸೌಭಾಗ್ಯವು, ನನಗೆ ಹಲವು ವರ್ಷಗಳ ಹಿಂದೆಯೇ ಒದಗಿತ್ತು. ಆಗ ನಾನಿನ್ನೂ ಬಂಕಿಕೊಡ್ಲದಲ್ಲೇ ಇದ್ದೆನು. ಕಾಲೇಜಿನ ಕನ್ನಡ ಸಂಘವು 'ಕ್ರಿಸ್ತಾಂಜಲಿ' ಎಂಬ ಕವನ ಸಂಗ್ರಹ ಪ್ರಕಟಿಸಿ ಯೇಸುಕ್ರಿಸ್ತನಿಗೆ ತನ್ನ 'ಕಾವ್ಯಾಂಜಲಿ' ಸಮರ್ಪಿಸುವ ಭವ್ಯಯೋಜನೆ ಹಮ್ಮಿಕೊಂಡಿತ್ತು. ಪ್ರೊ. ಜಿ. ಶ್ರೀನಿವಾಸರಾಜು ಆಗಿನ್ನು ನನಗೆ ಅವರು ಮುಖತಃ ಪರಿಚಯವಿಲ್ಲದಿದ್ದರೂ--ಸಾಹಿತ್ಯ ಕ್ಷೇತ್ರದಲ್ಲಿಯ ಅವರ ಕೃಷಿಯಿಂದಾಗಿ, ಪರಿಚಿತರೇ ಆಗಿದ್ದರು. ನನಗೊಂದು ವಿಶ್ವಾಸಪೂರ್ಣ ಕಾಗದ ಬರೆದು, ಯೇಸುವನ್ನು ಕುರಿತು, ಒಂದು ಪದ್ಯ ಕಳಿಸಲು ಕೇಳಿದ್ದರು. ಯೇಸುವಿನ ಜೀವನವೇ ಒಂದು ಸುಂದರವಾದ ಪದ್ಯ. ಶಾಂತಿ, ಪ್ರೀತಿ, ಹಾಗೂ ಕರುಣೆಗಳ ಪದ್ಯ. ಅಂಥ ಮಹಾತ್ಮರನ್ನು ಸ್ಮರಿಸಿ, ಸ್ತುತಿಸಿ ಬರೆಯುವ ಭಾಗ್ಯ ಒದಗಿದಾಗ, ನನಗೆ ತೋಚಿದ್ದು ಹೀಗೆ; ಇದರಿಂದ 'ಕರ್ನಾಟಕ ಸಂಸ್ಕೃತಿ'ಯ ಭವ್ಯ ಪರಂಪರೆಗೆ, ಮತ್ತೊಂದು ಸ್ಮೃತಿ ಶಿಲೆ ನೆಟ್ಟಂತಾಯಿತು. ಏಕೆಂದರೆ, ನಮ್ಮ ನಾಡಿನ ಹೃದಯ ದೇಗುಲದಲ್ಲಿ, ಎಲ್ಲ ಮತ ಧರ್ಮಗಳ ದೇವತೆಗಳೂ ಸಂತರೂ ನೆಲೆಸಿದ್ದಾರೆ. ನಮ್ಮ ಕನ್ನಡ ನುಡಿಗೆ ; ಒಬ್ಬ ಕರುಣಾಮಯ, ಪ್ರಶಾಂತ ಹಾಗೂ ವಿಶ್ವಪ್ರೇಮಿ, ಮಹಾತ್ಮನನ್ನು ಸ್ತುತಿಸಿ ಸಾರ್ಥಕವಾಗುವ ಸಂದರ್ಭ ಒದಗಿತ್ತು. ಕ್ರಿಸ್ತಾಂಜಲಿಯಲ್ಲಿಯ ನನ್ನ ಕವಿತೆ ಯೇಸುವಿಗೆ, ನಾನು ಹಚ್ಚಿಟ್ಟ ಮೊಂಬತ್ತಿಯಾಗಿದ್ದರೂ, ಇಂದಿಗೂ, ಆ ಮಹಾತ್ಮನ ಕರುಣೆ, ಪ್ರೀತಿ ; ಶಾಂತಿಗಳ ಹಂಬಲಗಳನ್ನು ನನ್ನ ಕವಿತೆಗಳಲ್ಲಿ ಬೆಳಗಿಸುವ ಹವ್ಯಾಸವನ್ನೂ ನಾನು ಬಿಟ್ಟಿಲ್ಲ. ನನಗೆ ತಿಳಿದಂತೆ, ಕ್ರೈಸ್ಟ್ ಕಾಲೇಜಿನ ಕನ್ನಡ ಸಂಘವು ; 'ಕ್ರಿಸ್ತಾಂಜಲಿ' ಹಾಗೂ 'ಕ್ರಿಸ್ತನ ಅನುಕರಣೆ' ಪ್ರಕಟಿಸಿ, ಕನ್ನಡ ನುಡಿಗೂ ಸಂಸ್ಕೃತಿಗೂ ಒಂದು ದೊಡ್ಡ ಸೇವೆ ಸಲ್ಲಿಸಿದ್ದಾರೆ. ಅವನ್ನು ಪ್ರಕಟಿಸಿ, ಕಾಲೇಜಿನವರೂ ಸಂಘದವರೂ ಧನ್ಯರಾದರು. ಅವನ್ನು ಕೊಂಡು ಓದಿದವರೂ ಧನ್ಯರಾದರು.

ವಿದ್ಯಾರ್ಥಿಗಳಲ್ಲಿ ಸಾಹಿತ್ಯ ಪ್ರೀತಿಯನ್ನೂ ಬೆಳಸಿ, ಅವರಲ್ಲಿ ಸಂಸ್ಕೃತಿ, ಮಾನವೀಯತೆ ; ಹಾಗೂ ಒಳ್ಳೆಯ ಅಭಿರುಚಿಗಳನ್ನು ಪ್ರೋತ್ಸಾಹಿಸುತ್ತಿರುವ ಅಪರೂಪದ ಸಂಸ್ಥೆಗಳಲ್ಲಿ, ಕ್ರೈಸ್ಟ್ ಕಾಲೇಜು ತುಂಬಾ ಪ್ರಸಿದ್ಧವಾಗಿದೆ. ಈವರೆಗೆ 49 ಪುಸ್ತಕಗಳನ್ನು ಪ್ರಕಟಿಸಿ, ಕಾವ್ಯ, ಕಥೆ, ನಾಟಕ, ವಿಮರ್ಶೆ ಹಾಗೂ ವಿಜ್ಞಾನ ಕ್ಷೇತ್ರಗಳಲ್ಲಿ ಅಮೋಘ ಸೇವೆ ಸಲ್ಲಿಸಿದೆ. 50ನೆಯ ಕೃತಿಯಾಗಿ, ಪ್ರೊ. ಎ. ಎನ್. ಮೂರ್ತಿರಾಯರ 'ಲಲಿತ ಪ್ರಬಂಧ' ಪ್ರಕಟಿಸಿ, ಇನ್ನೂ ಮಧುರವಾದ ಸೇವೆಸಲ್ಲಿಸುತ್ತಿದೆ. ಅಂಬಿಕಾತನಯದತ್ತರ 'ಸಾಹಿತ್ಯ'ವನ್ನೂ ಹಾಗೂ ತನ್ಮೂಲಕ ; ಕಾವ್ಯ

ಶಾಸ್ತ್ರವನ್ನೂ ಕುರಿತ ಸ್ಮಾರಕೋಪನ್ಯಾಸ ಏರ್ಪಡಿಸಿ, ಕ್ರೈಸ್ಟ್ ಕಾಲೇಜು ಹಾಗೂ ಕನ್ನಡ ಸಂಘವು, ಹಿಂದೆ, ರೆ. ಕಿಟೆಲ್, ಜೀಗ್ಲರ, ರಾಯಿಸ್ ಹಾಗೂ ಉತ್ತಂಗಿ ಚೆನ್ನಪ್ಪ ಅಂಥವರು ಕೈಕೊಂಡ ಕೈಂಕರ್ಯವನ್ನು ಮುಂದುವರೆಸುತ್ತಿದೆ, ವಿದ್ಯಾರ್ಥಿಗಳಿಗಂತೂ ಇಂಥ ಕಾಲೇಜಿನಲ್ಲಿ ಅಧ್ಯಯನ ಮಾಡುತ್ತಿರುವುದೇ ಒಂದು ಮಹಾಭಾಗ್ಯ. ಪ್ರೊ. ಚಿ. ಶ್ರೀನಿವಾಸರಾಜು ಅಂಥ ಕವಿ, ವಿಮರ್ಶಕ, ನಾಟಕಕಾರ, ಅವರಿಗೆ ಮಾರ್ಗ ದರ್ಶಕರಾಗಿದ್ದಾರೆ. ಇಂಥ ಅಧ್ಯಾಪಕರು ಹಾಗೂ ಕ್ರಿಯಾಶೀಲ ವಿದ್ಯಾರ್ಥಿಗಳಿಗೆ ಪ್ರೋತ್ಸಾಹವಿತ್ತು ಬೆಂಬಲಿಸುವ ಪ್ರಿನ್ಸಿಪಾಲರಿದ್ದಾರೆ. ಸಹಜವಾಗಿಯೇ ಇಂಥ ಸಂಸ್ಥೆಗಳು ಚರಿತ್ರೆಯನ್ನು ನಿರ್ಮಿಸಬಲ್ಲವು. ಹಾಗೂ ಪರ್ವಕಾಲಗಳನ್ನು ತರಬಲ್ಲವು ಎಂದರೆ ಅತಿಶಯೋಕ್ತಿಯಾಗದು.

ತುಂಬ ಸಂತೋಷದ ಸಂಗತಿಯೆಂದರೆ, ಇಂದಿನ ಕನ್ನಡ ಕಾವ್ಯ, ಸಾಹಿತ್ಯ ಹಾಗೂ ವಿಮರ್ಶೆಯ ಪ್ರಪಂಚದಲ್ಲಿ ಒಳ್ಳೆಯ ಹೆಸರುಗಳಿಸಿದ ಬರಹಗಾರರೆಲ್ಲ, ಈ ಸಂಘದ ದೀಪೋತ್ಸವದಲ್ಲಿ ತಮ್ಮ ಒಂದೊಂದು ದೀಪವನ್ನು ಬೆಳಗಿಸಿದ್ದಾರೆ. ಅನೇಕ ಮಹಿಳೆಯರೂ ಇದರಲ್ಲಿ ಸೇರಿರುವುದು ಒಂದು ವಿಶೇಷವಾಗಿದೆ. ಈ ಕಾಲೇಜಿನ, ಕನ್ನಡ ಸಂಘದ ಅತಿಶ್ರೇಷ್ಠವಾದ ಕೊಡುಗೆಯೆಂದರೆ, 'ವಿದ್ಯಾರ್ಥಿವಿಕಾಸಮಾಲೆ'ಯ ಕೃತಿಗಳು, ಇಂಥ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಿ, ಅವರ ಕೃತಿಗಳನ್ನು ಪ್ರಕಟಿಸಿ, ಈ ಕಾಲೇಜು, ಕರ್ನಾಟಕದಲ್ಲೇ ಒಂದು ಮಾದರಿಯನ್ನು ಹಾಕಿಕೊಟ್ಟಿದೆ. ಇಂಥ ಕಾಲೇಜು, ಹಾಗೂ ಸಂಘಗಳ ಮೇಲ್ಪಂಕ್ತಿಯನ್ನು ಎಲ್ಲರೂ ಅನುಸರಿಸುತ್ತಿದ್ದರೆ, ಇಂದಿನ ವಿದ್ಯಾರ್ಥಿ ಸಮಸ್ಯೆಯೆಂಬುದೆ ಇರುವದು ಸಾಧ್ಯವಿದ್ದಿಲ್ಲವೇನೂ! ಏಕೆಂದರೆ ಕ್ರೈಸ್ಟ ಕಾಲೇಜಿನ ಕನ್ನಡ ಸಂಘವು; ಒಳ್ಳೆಯದನ್ನೇ ಬಿತ್ತಿದೆ. ಒಳ್ಳೆಯದನ್ನೇ ಬೆಳದಿದೆ. ಅವರು ಪ್ರಕಟಿಸಿದ ಕೃತಿಗಳು ಯೇಸುಸ್ವಾಮಿ ಹೇಳಿದ ·Lilies of the field' ನಂತಿವೆ. ವಿದ್ಯಾರ್ಥಿಗಳ ಒಂದೊಂದು ಬರಹವೂ, ಅಷ್ಟೇ ಬೆಡಗಿನವಾಗಿವೆ. ಬೆರಗಿನವಾಗಿವೆ !

ಕ್ರೈಸ್ಟ್‌ಕಾಲೇಜಿನ ಕನ್ನಡ ಸಂಘ ಪ್ರಕಟಿಸಿದ, ಗ್ರಂಥಗಳ ಪಟ್ಟಿ ನೋಡುತ್ತಿದ್ದ ಹಾಗೆಯೇ ನನಗೆ, ಚರ್ಚಿನಲ್ಲಿ ನುಡಿಸುತ್ತಿದ್ದ, ಭವ್ಯ ಆರ್ಗನ್ನುಗಳ ನೆನಪಾಯಿತು. Choir ಗಳ ಮಧುರ ಗಂಭೀರ ಹಾಡು ನೆನಪಾದವು. ಕ್ರಿಸ್‌ಮಸ್‌ನಲ್ಲಿ ಕೆರಾಬಿಗಳ ಹಾಡುತ್ತಾ ಸಾಗುವ ಗುಂಪುಗಳ ನೆನಪಾಯಿತು. ಇದನ್ನೆಲ್ಲ ನೆನೆದುಕೊಳ್ಳುವ ಈ ಉತ್ಸವದಲ್ಲಿ, ಕಾಲೇಜಿಗೂ. ಕನ್ನಡ ಸಂಘಕ್ಕೂ ಶುಭ ಕೋರುತ್ತ ನಾನು ಹೇಳ ಬಹುದಾದದ್ದಿಷ್ಟೆ !

'Amen ! ಆಮೆನ್'

ರಾಮಚಂದ್ರ ಶರ್ಮ

ಯಾವ ಭಾಷೆಯ ಸಾಹಿತ್ಯವೇ ಆಗಲಿ ಅದು ಬಹುಕಾಲ ಉಳಿಯುವುದು ಅದಕ್ಕೆ ನಿರಂತರವಾಗಿ ಸಿಕ್ಕುವ ಜನರ ಪ್ರೀತಿ ಪ್ರೋತ್ಸಾಹಗಳಿಂದ, ತಲೆಮಾರಿನಿಂದ ತಲೆಮಾರಿಗೆ ಅದಕ್ಕೆ ಪ್ರಾಪ್ತವಾಗುವ ಹೊಸ ರಕ್ತದಾನದಿಂದ. ಇಂಥ ದಾನಕ್ಕೆ ನಮ್ಮಲ್ಲಿಯ ಯುವ ಜನರನ್ನು ಸಿದ್ಧಮಾಡುವ ಕೆಲಸವನ್ನು ಕೊಂಚಮಟ್ಟಿಗೆ ತಂದೆ ತಾಯಿಗಳು ಮಾಡಬಹುದಾದರೂ ಮುಖ್ಯ ಪಾತ್ರ ವಿದ್ಯಾಸಂಸ್ಥೆಗಳದ್ದು ಅನ್ನುವ ನನ್ನ ನಂಬಿಕೆ ಸಾಧುವೆಂದುಕೊಂಡಿದ್ದೇನೆ. ಸಾಹಿತ್ಯದಿಂದ ಜನತೆಯ ಹೃದಯ ಸಂಸ್ಕಾರ ಸಾಧ್ಯವೆನ್ನುವುದು ವಾಸ್ತವವಾದರೆ ಅದರ ಬಗ್ಗೆ ಪ್ರೀತಿ ಉತ್ಸಾಹಗಳನ್ನು ಬೆಳೆಸುವ ಕೆಲಸ ವಿದ್ಯಾ ಸಂಸ್ಥೆಗಳು ಅಗತ್ಯವಾಗಿ ಮಾಡಬೇಕಾದ್ದು.

ಅಂತಹ ಕೆಲಸವನ್ನು ಹಲವಾರು ವರ್ಷಗಳಿಂದ ಮಾಡುತ್ತ ಬಂದಿರುವ ಕೆಲವೇ ಸಂಸ್ಥೆಗಳಲ್ಲಿ ಕ್ರೈಸ್ಟ್ ಕಾಲೇಜ್ ಒಂದು. ಇವೊತ್ತು ಪ್ರಸಿದ್ಧರಾಗಿರುವ ಹಲವು ಸಾಹಿತಿಗಳ ಮೊದಲ ತೊದಲು ಪ್ರಯತ್ನಗಳಿಗೆ ಪ್ರಕಟಣೆಯ ಅವಕಾಶವನ್ನು ಕಲ್ಪಿಸಿ ಕೊಟ್ಟಿದ್ದು ಅಲ್ಲಿಯ ಕನ್ನಡ ಸಂಘ. ಕಾಲೇಜಿನ ಹೊರಗಿರುವ ತರುಣ ಸಾಹಿತಿಗಳಿಗೆ ಮಾತ್ರವಲ್ಲದೇ ವರ್ಷ ವರ್ಷಕ್ಕೂ ನಡೆಯುವ ಸ್ಪರ್ಧೆಗಳ ಮೂಲಕ ರಾಜ್ಯದ ವಿದ್ಯಾರ್ಥಿಗಳಲ್ಲಿರುವ ಸುಪ್ತ ಪ್ರತಿಭೆಯನ್ನು ಬೆಳಕಿಗೊಡ್ಡುವ ಕೆಲಸವನ್ನು ಮಾಡುತ್ತ ಬಂದಿದೆ.

ಇಂತಹ ಒಂದು ಸಂಸ್ಥೆ ಈಗ ಮೂರ್ತಿರಾಯರ ಅಪ್ಪೂ ಪ್ರಬಂಧಗಳನ್ನು ತನ್ನ ಐವತ್ತನೆಯ ಪ್ರಕಟಣೆಯಾಗಿ ಹೊರತರುತ್ತಿರುವುದು ಸಂತೋಷದ ವಿಷಯ. ನನ್ನ ಅಭಿನಂದನೆಗಳ ಮಾತಿಂದ ಸಂಸ್ಥೆ ಮಾಡುತ್ತ ಬಂದಿರುವ ಶ್ರೇಷ್ಠ ಕೆಲಸಕ್ಕೆ ಹೊಸತೊಂದು ಗರಿ ಮೂಡಬಹುದೆನ್ನುವ ಭ್ರಮೆಯಿಲ್ಲವಾದರೂ ಸಾಹಿತಿಯಾಗಿ ಅದಕ್ಕೆ ನಮಸ್ಕಾರ ಹೇಳುವುದು ನನ್ನ ಕರ್ತವ್ಯವೆಂದು ಕೊಂಡಿದ್ದೇನೆ.

ಈ ಸಂಸ್ಥೆಯ ಕಾರ್ಯ ನಿರಂತರವಾಗಿ ಅಡೆತಡೆಗಳಿಲ್ಲದೇ ನಡೆಯಲಿ. ಆ ಮೂಲಕ ನಮ್ಮ ಕನ್ನಡ ಸಾಹಿತ್ಯವೂ ನಿರಂತರವಾಗಲಿ.

ಜಿ. ಎಸ್. ಅಮೂರ್

ಕ್ರೈಸ್ಟ್ ಕಾಲೇಜಿನ 'ಕನ್ನಡ ಸಂಘ' ತನ್ನ 50ನೆಯ ಪ್ರಕಟನೆಯನ್ನು ಹೊರ ತರುತ್ತಿರುವ ಸಂದರ್ಭದಲ್ಲಿ ನನ್ನ ಶುಭಾಶಯಗಳನ್ನೂ ಕಳಿಸಲು ತುಂಬಾ ಸಂತೋಷ ವೆನಿಸುತ್ತದೆ. ನಾಡಿನ ಅತ್ಯಂತ ಗೌರವಾನ್ವಿತ ಸಾಹಿತಿಗಳಲ್ಲೊಬ್ಬರಾದ ಪ್ರೊಫೆಸರ್ ಎ. ಎನ್. ಮೂರ್ತಿರಾಯರ 'ಸಮಗ್ರ ಲಲಿತ ಪ್ರಬಂಧಗಳು' ಸಂಘದ ಐವತ್ತನೆಯ ಪ್ರಕಟನೆಯಾಗಿರುವುದು ಇನ್ನೂ ಹೆಚ್ಚಿನ ಸಂತೋಷದ ವಿಷಯ.

ಕನ್ನಡದಲ್ಲಿ ಪುಸ್ತಕ ಪ್ರಕಟಣೆ ಇನ್ನೂ ಬಿಕ್ಕಟ್ಟಿನ ಸ್ಥಿತಿಯಲ್ಲಿಯೇ ಇದೆ. ಪುಸ್ತಕಗಳನ್ನು ಕೊಂಡು ಓದುವವರ ಸಂಖ್ಯೆ, ಕೇರಳ, ಮಹಾರಾಷ್ಟ್ರಗಳಂಥ ನೆರೆಯ ರಾಜ್ಯಗಳಿಗೆ ಹೋಲಿಸಿದಾಗ ಬಹಳ ಕಡಿಮೆ. ಇಂಥ ಪರಿಸ್ಥಿತಿಯಲ್ಲಿಯೂ 'ಕನ್ನಡ ಸಂಘ' ಪ್ರಸಿದ್ಧ ಸಾಹಿತಿಗಳ ಕೃತಿಗಳನ್ನಷ್ಟೇ ಅಲ್ಲದೆ ಹೊಸ ಲೇಖಕರಿಗೂ ಅವಕಾಶ ಕೊಡುತ್ತಿರುವುದು ಅತ್ಯಂತ ಸಮಾಧಾನದ ಸಂಗತಿ. ಅದರಲ್ಲಿಯೂ ತರುಣ ವಯಸ್ಸಿನ ವಿದ್ಯಾರ್ಥಿಗಳ ಪ್ರತಿಭೆಯನ್ನೂ ಗುರುತಿಸಿ ಸ್ಪರ್ಧೆಗಳ ಮೂಲಕ ಈ ಪ್ರತಿಭೆ ಹೊರಬರುವುದಕ್ಕೆ ಸಂಘ ನಡೆಯಿಸಿರುವ ಪ್ರಯತ್ನಗಳನ್ನೂ ಮೆಚ್ಚಲೇಬೇಕು.

'ಕನ್ನಡ ಸಂಘ'ದ ಸಾಹಿತ್ಯಿಕ ಚಟುವಟಿಕೆಗಳನ್ನು ಬಹು ದಿನಗಳಿಂದ ನೋಡುತ್ತಲೇ ಬಂದಿದ್ದೇನಾದರೂ ಸಂಘದೊಡನೆ ನಿಕಟವಾದ ಸಂಪರ್ಕ ಬಂದುದು ಶ್ರೀರಂಗರ 'ಅಗ್ನಿಸಾಕ್ಷಿ'ಯ ಪ್ರಕಟಣೆಯ ವೇಳೆಗೆ. ಚಿ. ಶ್ರೀನಿವಾಸರಾಜುರವರ ಸ್ನೇಹದ ಮೂಲಕ ಈ ಸಂಬಂಧ ಇನ್ನಷ್ಟು ಗಾಢವಾಗಿದೆ. ಸಾಹಿತ್ಯದ ಕ್ಷೇತ್ರದಲ್ಲಿ ದಿಟ್ಟ ಹೆಜ್ಜೆಯಿಟ್ಟ ಮೌಲಿಕ ಕೆಲಸ ಮಾಡುತ್ತಿರುವ 'ಕನ್ನಡ ಸಂಘ'ಕ್ಕೂ, ಸಂಘಕ್ಕೆ ಎಲ್ಲ ರೀತಿಯಿಂದಲೂ ಪ್ರೋತ್ಸಾಹ ನೀಡುತ್ತಿರುವ ಕ್ರೈಸ್ಟ್ ಕಾಲೇಜಿನ ಪದಾಧಿಕಾರಿಗಳಿಗೂ ನನ್ನ ಹಾರ್ದಿಕ ಅಭಿನಂದನೆಗಳು.

ಯು. ಆರ್. ಅನಂತಮೂರ್ತಿ

'ಕನ್ನಡ ಸಂಘ', ಕ್ರೈಸ್ಟ್ ಕಾಲೇಜ್ ಈಗಾಗಲೇ 50 ಪುಸ್ತಕಗಳನ್ನು ಪ್ರಕಟಿಸಿದೆ ಎಂಬುದು ಸಾಂಸ್ಕೃತಿಕವಾಗಿ ಮಹತ್ವದ ವಿಷಯ. ನಾನು ಕಂಡಂತೆ ಕರ್ನಾಟಕದಲ್ಲಿ ಹಿರಿಯರಾದ ರಾಜರತ್ನಂರ ನಂತರ ಇನ್ನು ಯಾರೂ ಇಷ್ಟು ದೊಡ್ಡ ಸಾಹಿತ್ಯದ ಕೆಲಸವನ್ನು ಒಂದು ಸಂಘದ ಮೂಲಕ ಮಾಡಿಲ್ಲ. 'ಕನ್ನಡ ಸಂಘ'ದ ಹಿಂದೆ ನಿಂತು ತನ್ನನ್ನು ವೈಯಕ್ತಿಕವಾಗಿ ಮುಂದೆ ಮಾಡಿಕೊಳ್ಳದೆ ಕೆಲಸ ಮಾಡುವ ನಮ್ಮೆಲ್ಲರ ಪ್ರಿಯ ಗೆಳೆಯರಾದ ಶ್ರೀನಿವಾಸರಾಜುವನ್ನು ನಾನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ.

ಎಲ್. ಎಸ್. ಶೇಷಗಿರಿರಾವ್

ಪ್ರೊ. ಟಿ. ಎಸ್. ವೆಂಕಣ್ಣಯ್ಯ, ಡಾ. ಎ. ಆರ್. ಕೃಷ್ಣಶಾಸ್ತ್ರಿ, ಡಾ. ಜಿ. ಪಿ. ರಾಜರತ್ನಂ ಇವರಂತಹ ಗುರುಗಳು ರೂಪಿಸಿದ ಪರಂಪರೆ ಕ್ರೈಸ್ಟ್ ಕಾಲೇಜಿನ ಕನ್ನಡ ಸಂಘದಲ್ಲಿ ಫಲಪ್ರದವಾಗಿ ಜೀವಂತವಾಗಿರುವುದು ಸಂತೋಷವನ್ನು ತರುವ ಸಂಗತಿ.

ಸೃಜನ ಸಾಹಿತ್ಯ, ವಿಜ್ಞಾನ ಸಾಹಿತ್ಯ, ಅನುವಾದ ಎಲ್ಲಕ್ಕೂ ಸಂಘದ ನೆರವು ದೊರೆತಿದೆ. ಎಂದೋ ಕನ್ನಡಕ್ಕೆ ಬರಬೇಕಾಗಿದ್ದ ಥಾಮಸ್ ಎ. ಕೆಂಪಿಸನ 'ದಿ ಇಮಿಟೇಷನ್ ಆಫ್ ಕ್ರೈಸ್ಟ್' ಅನ್ನು ತಂದುಕೊಟ್ಟ ಸಾಧನೆ ಈ ಸಂಘದ್ದು. ಜನಕ್ಕೆ ಪರಿಚಿತರಾದ ಲೇಖಕರು, ಹೊಸ ಲೇಖಕರು ಎಲ್ಲರ ಕೃತಿಗಳನ್ನು ಪ್ರಕಟಿಸುವುದಲ್ಲದೆ ವಿದ್ಯಾರ್ಥಿ ವಿದ್ಯಾರ್ಥಿನಿಯರ ಸೃಜನಪ್ರತಿಭೆ. ವಿಮರ್ಶಾಸಾಮರ್ಥ್ಯ ಎರಡನ್ನೂ ಪೋಷಿಸುವ ಸಂಘ ಅವರಿಗೆ ಮಾತ್ರವಲ್ಲ, ಕನ್ನಡ ನುಡಿಗೇ ಉಪಕಾರ ಮಾಡುತ್ತಿದೆ. ಶಿಕ್ಷಣ ಕ್ಷೇತ್ರದ ವಾತಾವರಣ ಕೆಡುತ್ತಿದೆ ಎನ್ನುವ ಮಾತೇ ಕೇಳುತ್ತಿರುವಾಗ, ಅದರ ಸತ್ಯವು ಮತ್ತೆ ಮತ್ತೆ ನಮಗೆ ಕಾಣುತ್ತಿರುವಾಗ, ಶಿಕ್ಷಕರು–ವಿದ್ಯಾರ್ಥಿಗಳ ಸಂಬಂಧ ಇಲ್ಲಿ ರೂಪುಗೊಂಡಿರುವ ರೀತಿ ಸಾಹಿತ್ಯ ಕ್ಷೇತ್ರದಾಚೆಗೂ ಧೈರ್ಯ ತರುವ ಬೆಳಕನ್ನು ಹಬ್ಬಿಸುತ್ತದೆ. ಕ್ರೈಸ್ಟ್ ಕಾಲೇಜಿನ ವಿದ್ಯಾರ್ಥಿಗಳಿಗೆ ಮಾತ್ರವಲ್ಲದೆ ಇತರ ಕಾಲೇಜುಗಳ ವಿದ್ಯಾರ್ಥಿವಿದ್ಯಾರ್ಥಿನಿಯರಿಗೂ ಇದರ ಪ್ರೋತ್ಸಾಹ ಲಭ್ಯವಾಗುವುದು ತುಂಡಾಗುತ್ತಿರುವ ಬೆಂಗಳೂರು ನಗರದಲ್ಲಿ ಸಮಾಧಾನ ತರುವ ಅಂಶ.

ತನ್ನ ಐವತ್ತನೆಯ ಪುಸ್ತಕವನ್ನು ಪ್ರಕಟಿಸಲಿರುವ ಕ್ರೈಸ್ಟ್ ಕಾಲೇಜಿನ ಕನ್ನಡ ಸಂಘಕ್ಕೆ, ಅದನ್ನು ಪೋಷಿಸುವ ಪ್ರಾಚಾರ್ಯರು ಮತ್ತು ಆಡಳಿತ ವರ್ಗಕ್ಕೆ, ಅದಕ್ಕಾಗಿ ಸಮಯವನ್ನು ವಿನಿಯೋಗಿಸುವ 'ಮಿಷನರಿ'ಗಳಾದ ಕ್ರಿಯಾಶೀಲರಾದ ಅಧ್ಯಾಪಕ ವರ್ಗಕ್ಕೆ, ಸದಸ್ಯರಿಗೆ ಅಭಿನಂದನೆಗಳು.

ಎಂ. ಚಿದಾನಂದಮೂರ್ತಿ

ಕ್ರೈಸ್ಟ್ ಕಾಲೇಜು ಕನ್ನಡ ಸಂಘವನ್ನು ಕರ್ನಾಟಕದ ಜನ ಹಲವು ಬಗೆಗಳಲ್ಲಿ ಸ್ಮರಿಸುತ್ತದೆ. ಅದು ವಿದ್ಯಾರ್ಥಿಗಳನ್ನು ಸಾಹಿತ್ಯಿಕ ಚಟುವಟಿಕೆಗಳಲ್ಲಿ ತೊಡಗಿಸಲು ಯತ್ನಿಸುತ್ತಿದೆ. ಅವರ ಬರಹಗಳನ್ನು ಪ್ರಕಟಿಸುತ್ತಿದೆ. ಯುವ ಲೇಖಕರ ಪದ್ಯ, ಕತೆ, ವೈಚಾರಿಕ ಬರಹಗಳನ್ನು ಪ್ರಕಟಿಸುತ್ತಿದೆ. ಹಲವು ಬಗೆಯ ಸ್ಪರ್ಧೆಗಳನ್ನು ಏರ್ಪಡಿಸುತ್ತಿದೆ. ಕ್ರೈಸ್ಟ್ ಕಾಲೇಜು ನೇರವಾಗಿ 'ಅಂಕಣ' ಪತ್ರಿಕೆಯನ್ನು ಹೊರತರದಿದ್ದರೂ ಅದರ ಬೆನ್ನೆಲುಬಾದ ಚಿ. ಶ್ರೀನಿವಾಸರಾಜು ಅಲ್ಲಿದ್ದಾರೆ. ಕನ್ನಡದಲ್ಲಿ ಮಾತ್ರವಲ್ಲ, ಅನ್ಯ ಭಾಷೆಗಳಲ್ಲೂ ಪುಸ್ತಕಗಳನ್ನು ಹೊರತಂದಿದೆ. ಬೆಂಗಳೂರಿನಲ್ಲಿ ಯಾವುದೇ ದೊಡ್ಡ ಸಾಹಿತ್ಯಕ ಸಭೆಯಾದರೂ ಅದರ ಬಾಗಿಲಲ್ಲಿ ಕನ್ನಡ ಸಂಘದ ಪ್ರಕಟಣೆಗಳನ್ನು ಪ್ರದರ್ಶಿಸಿ ಮಾರಾಟಕ್ಕೆ ಇಟ್ಟಿರುತ್ತಾರೆ. ಇಲ್ಲೆಲ್ಲ ಶ್ರದ್ಧೆ, ನಿಷ್ಠೆ, ಅಚ್ಚುಕಟ್ಟುತನಗಳು ಎದ್ದು ಕಾಣುತ್ತವೆ. ಈಗ ಕನ್ನಡ ಸಂಘದ ಐವತ್ತನೆಯ ಕೃತಿ ಪ್ರಕಟವಾಗುತ್ತಿದೆ. ಸಂಘವು ಶತಕವನ್ನು ಸಂಪಾದಿಸಲಿ ಎಂದು ಎಲ್ಲರಂತೆ ನಾನೂ ಹಾರೈಸಿ ಆ ಸಂಘಕ್ಕೆ ಶುಭವನ್ನು ಕೋರುತ್ತೇನೆ.

ಶ್ರೀನಿವಾಸ ಹಾವನೂರ

ಪದವಿ ಮಟ್ಟದ ಅಭ್ಯಾಸ ನಡೆಸುವ ಕಾಲೇಜೊಂದು ಕನ್ನಡ ಸಂಘವನ್ನು ಕಟ್ಟುವುದು, ಅದರ ಆಶ್ರಯದಲ್ಲಿ ಕಾರ್ಯಕ್ರಮಗಳನ್ನು ನಡೆಸುವುದು ದೊಡ್ಡ ಮಾತಲ್ಲ. ಆದರೆ ಕೃತಿಗಳ ಪ್ರಕಟಣೆ ಹಾಗೂ ಆ ಮೂಲಕ ಅನೇಕ ಹೊಸಬರ ಬರವಣಿಗೆಗಳಿಗೆ ಅವಕಾಶ ಕಲ್ಪಿಸಿಕೊಡುತ್ತ ತಡೆಯಿಲ್ಲದ ಬೆಳವಣಿಗೆ ಸಾಧಿಸುವುದು ನಿಜಕ್ಕೂ ಕಷ್ಟದ ದಾರಿ, ಕ್ರೈಸ್ಟ್ ಕಾಲೇಜು ಕನ್ನಡ ಸಂಘವು ಅಂಥ ದಾರಿಯುದ್ದಕ್ಕೆ ನಡೆದಿದೆ. ಮುಖ್ಯವಾಗಿ ಅದರ ಪ್ರಾಂಶುಪಾಲರು ಅದಕ್ಕೆ ಅನೂನವಾದ ಪ್ರೋತ್ಸಾಹ ವನ್ನೀಯುತ್ತಿದ್ದಾರೆ.

ಈ ಕನ್ನಡ ಸಂಘದ ಕಾರ್ಯವೈಖರಿಯನ್ನು ಗಮನಿಸಿದಾಗ, ಹಿಂದಿನ ಸೆಂಟ್ರಲ್ ಕಾಲೇಜಿನ ಕರ್ನಾಟಕ ಸಂಘ, ಇಂದಿನ ಪುತ್ತೂರಿನ ಫಿಲೋಮಿನಾ ಕಾಲೇಜು ಮತ್ತು ವಿವೇಕಾನಂದ ಕಾಲೇಜುಗಳ ಕನ್ನಡ ಸಂಘಗಳ ನೆನಪು ಸ್ವಾಭಾವಿಕವಾಗಿಯೇ ಆಗುತ್ತದೆ.

ಕ್ರೈಸ್ಟ್ ಕಾಲೇಜು ಕನ್ನಡ ಸಂಘವು ಸಾಹಿತ್ಯ ಪರಿಚಾರಿಕೆಯ ಕೆಲಸವನ್ನೂ ಯಶಸ್ವಿಯಾಗಿ ಮಾಡಿದೆ ಹಿರಿಯ ಸಾಹಿತಿಗಳಾದ ಬೇಂದ್ರೆ, ಶ್ರೀರಂಗ ಇಂಥವರ ಕೃತಿ ಸಮೀಕ್ಷೆಗಳನ್ನು ಕಾಲಕಾಲಕ್ಕೆ ನಡೆಸಿದೆ.

ನನಗೆ ತುಂಬಾ ಪ್ರಿಯವಾದ ಇನ್ನೊಂದು ವಿಚಾರವೆಂದರೆ, ಈ ಸಂಘವು ನಡೆಸುತ್ತ ಬಂದಿರುವ ಸಾಹಿತ್ಯ ಸ್ಪರ್ಧೆಗಳು ; ಯುವ ಪ್ರತಿಭೆಯ ವಿಕಾಸಕ್ಕೆ ಈ ಬಗೆಯ ಸ್ಪರ್ಧೆಗಳು ಎಷ್ಟು ಅವಶ್ಯವೆಂಬುದನ್ನು ಮತ್ತೆ ಹೇಳಬೇಕಾಗಿಲ್ಲ. ಇದರ ಸಂಚಾಲಕರಾದ ಶ್ರೀ ಚಿ. ಶ್ರೀನಿವಾಸರಾಜು ಅವರ ಬಗ್ಗೆ ನನ್ನದೊಂದು ತಕರಾರಿದೆ. ಅದೆಂದರೆ ಯಾವುದಾದರೊಂದು ಒಳ್ಳೆಯ ಕಾರ್ಯದ ಯೋಜನೆಯನ್ನು ಅವರು ಹಾಕಿಕೊಂಡರೆಂದರೆ, ಅದು ಮುಗಿಯುವ ವರೆಗೆ ಬಿಡುವುದೇ ಇಲ್ಲ. ಅದರಿಂದ ನನ್ನಂತಹವರಿಗೆ ತೊಂದರೆ. ಕಂಪ್ಯೂಟರ್ ಮೂಲಕ ಕಂಪ್ಯೂಟರ್ ಅಧ್ಯಯನವನ್ನು ಕುರಿತು ನಾನು ಕೆಲಸ ಮಾಡಬೇಕೆಂದೂ ಆಮೇಲೆ ಭಾಷಣ ಮಾಡಬೇಕೆಂದೂ ಕಳೆದು ಒಂದು ವರ್ಷದಿಂದ ನನಗೆ ಗಂಟುಬಿದ್ದಿದ್ದಾರೆ.

ಈ ಕೆಲಸ ಮುಗಿಯುವ ವರೆಗೂ ಅವರು ನನ್ನನ್ನು ಕಾಡುವರೆಂಬುದೇ ನನ್ನ ತಕರಾರು.

ಕ. ನೆಂ. ರಾಜಗೋಪಾಲ

ಬೆಂಗಳೂರು ಕ್ರೈಸ್ಟ್ ಕಾಲೇಜು, ಕನ್ನಡ ಸಾಹಿತ್ಯದ ಬಗ್ಗೆ ಇರಿಸಿಕೊಂಡಿರುವ ಧೋರಣೆಯನ್ನು ಗಮನಿಸಿದಲ್ಲಿ ಇತರ ವಿದ್ಯಾಸಂಸ್ಥೆಗಳಿಗೂ ಅವಶ್ಯವಾದ ಒಂದು ಆದರ್ಶಕ್ರಮ ಸ್ಪಷ್ಟವಾಗುತ್ತದೆ.

ಇಲ್ಲಿಯ ಕನ್ನಡ ವಿಭಾಗದ ಮುಖ್ಯಸ್ಥರಾದ ಶ್ರೀ ಚಿ. ಶ್ರೀನಿವಾಸರಾಜು ತರುಣ ಪೀಳಿಗೆಗಳಿಗೆ ಸಾಹಿತ್ಯ ಮತ್ತು ವಿಚಾರವಂತಿಕೆಗೆ ಬೇಕಾದ ತಳಹದಿಯನ್ನು ವಿಚಿತ ಪಡಿಸುತ್ತಿದ್ದಾರೆ. ಕಾಲೇಜಿನ 'ಕನ್ನಡ ಸಂಘ'ದ ವತಿಯಿಂದ ಪ್ರಕಟಿಸುತ್ತಿರುವ ಕವಿತೆ, ವಿಮರ್ಶೆ-ವಿಚಾರಗಳನ್ನು ಕುರಿತ ಕೃತಿಗಳಿಂದ ಇದನ್ನು ಗುರುತಿಸಬಹು ದಾಗಿದೆ.

ನನ್ನ ಒಂದು ಕವನ ಸಂಗ್ರಹವನ್ನು (ನದಿಯ ಮೇಲಿನ ಗಾಳಿ) ಪ್ರಕಟಿಸಿದ್ದಾ ರೆಂಬ ಕಾರಣದಿಂದ ಹೊರತುಪಡಿಸಿ ನನ್ನ ಮೆಚ್ಚಿಗೆಯನ್ನು ಒಪ್ಪಿಸುತ್ತಿದ್ದೇನೆ. ಈಗಾಗಲೇ ಕ್ರೈಸ್ಟ್ ಕಾಲೇಜಿನ ಮೂಲಕ ಬೆಳಕಿಗೆ ಬಂದವರು ಒಳ್ಳೆಯ ಬರಹಗಾರ ರಾಗುವ ಲಕ್ಷಣಗಳನ್ನು ತೋರಿಸಿರುವರಲ್ಲದೆ ಒಳ್ಳೆಯ ಸಾಧಕರೂ ಆಗಿರುತ್ತಾರೆ. ಆದುರಿಂದ ಕ್ರೈಸ್ಟ್ ಕಾಲೇಜಿನ ಕನ್ನಡ ವಿಭಾಗಕ್ಕೂ ಕಾಲೇಜಿನ ಅಧಿಕಾರ ವರ್ಗಕ್ಕೂ ನನ್ನ ಹೃತ್ಪೂರ್ವಕ ಅಭಿನಂದನೆಗಳು ಸಲ್ಲುತ್ತವೆ.

ಜಿ. ಎಸ್. ಸಿದ್ಧಲಿಂಗಯ್ಯ

ಬೆಂಗಳೂರಿನ ಕ್ರೈಸ್ಟ್ ಕಾಲೇಜಿನ ಕನ್ನಡ ಸಂಘದ ಬಗ್ಗೆ ಬರೆಯಲು ಹೆಮ್ಮೆ ಯಾಗುತ್ತದೆ. ಅದೊಂದು ಕ್ರಿಶ್ಚಿಯನ್ ಕಾಲೇಜು. ಕನ್ನಡ ಐಚ್ಛಿಕ ಬೋಧನೆಯಿಲ್ಲ. ಅಲ್ಲಿ ಕಲಿಸುವ ಏಳೆಂಟು ಭಾಷೆಗಳಲ್ಲಿ ಕನ್ನಡ ಕೂಡ ಒಂದು. ಇದರ ವೈಶಿಷ್ಟ್ಯ ಎಂದರೆ, ಇಲ್ಲೇ ಒಂದು ಕನ್ನಡ ಸಂಘ ಇರುವುದು ಮತ್ತು ಅದರಲ್ಲಿ ಅನ್ಯಭಾಷಾ ಅಧ್ಯಾಪಕರು ಅದನ್ನು ತಮ್ಮದೆಂದೇ ಭಾಗವಹಿಸುವುದು. ಇದು ಕನ್ನಡ ವಿಭಾಗ ದವರ ಸಜ್ಜನಿಕೆಯಿಂದ ಸಾಧ್ಯ ಎಂದು ಮುಗಿಸಿಬಿಡಬಹುದು. ಆದರೆ ಅದಕ್ಕೂ ಹೆಚ್ಚಿನ ಗಂಭೀರವಾದ ಕಾರ್ಯ ಇಲ್ಲಿನ ಕನ್ನಡ ವಿಭಾಗದವರಿಂದ ಆಗುತ್ತಿದೆ.

ಈ ವಿಭಾಗ 'ಕನ್ನಡ ಸಂಘ'ವನ್ನು ಸಂಘಟಿಸಿದೆ. ಕನ್ನಡ ವಿದ್ಯಾರ್ಥಿಗಳನ್ನು ತನ್ನ ವಿಶ್ವಾಸಕ್ಕೆ ತೆಗೆದುಕೊಂಡಿದೆ. ಎಲ್ಲಕ್ಕಿಂತ ಮಿಗಿಲಾಗಿ ಈ ಕನ್ನಡ ಸಂಘದಿಂದಲೇ ಪ್ರಕಟಣೆಗಳು ಹೊರಬರುತ್ತಿವೆ. ಈ ಪ್ರಕಟಣೆಗಳು ಮುಖ್ಯವಾಗಿ ಎರಡು ರೀತಿಯು ದಾಗಿವೆ. ಒಂದು, ವಿದ್ಯಾರ್ಥಿಗಳು ಬರೆದ ಉತ್ತಮ ಕವಿತೆ, ಲೇಖನಗಳನ್ನು ಪ್ರಕ

ಟಿಸಿ ಪ್ರತಿಭಾ ವಿಕಾಸಕ್ಕೆ ಅವಕಾಶ ಮಾಡಿಕೊಡುವುದು (ಈ ರೀತಿಯ ಕಾರ್ಯ ಕರ್ನಾಟಕ ಸಂಘಗಳಲ್ಲಿ ಹಿಂದೆ ನಡೆಯುತ್ತಿದ್ದದ್ದೆ ;) ಇನ್ನೊಂದು ಅಂಬಿಕಾತನಯದತ್ತ ರಂಥ ಕವಿಗಳನ್ನು ಕುರಿತು ವಿಚಾರ ಸಂಕಿರಣಗಳನ್ನು ಏರ್ಪಡಿಸಿ, ಅಲ್ಲಿ ಮಥಿತವಾದ ವಿಚಾರಗಳನ್ನು ಹರಳುಗಟ್ಟಿಸಿ ಗ್ರಂಥ ರೂಪದಲ್ಲಿ ಪ್ರಕಟಿಸುವುದು (ಇವುಗಳಲ್ಲಿ ಕೆಲವಂತೂ ಉತ್ತಮ ಗ್ರಂಥಗಳು) ಈವರೆಗಿನ ಎಲ್ಲಾ ಪ್ರಕಟನೆಗಳಿಗಾಗಿ ಕನ್ನಡದ ವಿದ್ಯಾರ್ಥಿಗಳನ್ನು ಹಾಗೂ ಕನ್ನಡಾಭಿಮಾನಿಗಳನ್ನು ಬಳಸಿಕೊಂಡು ಸಹಕಾರಿ ಪ್ರಕಾಶನದ ಒಂದು ಸಾಧನೆಯಾಗಿ ಮಾಡಿರುವುದು ಇಲ್ಲಿನ ವೈಶಿಷ್ಟ್ಯ. ಇದರ ಹಿಂದೆ ಸದ್ದಿಲ್ಲದೆ ದುಡಿಯುತ್ತಿರುವ ವ್ಯಕ್ತಿ ಶ್ರೀ ಚಿ. ಶ್ರೀನಿವಾಸರಾಜು. ಇದಕ್ಕೆ ಎಲ್ಲ ರೀತಿಯ ಸಹಕಾರದ ರಕ್ಷೆಯಾಗಿರುವವರು ಕಾಲೇಜಿನ ಪ್ರಾಚಾರ್ಯರು. ಅಧ್ಯಾಪಕರಂತೂ ರಾಜುರವರ ಜೊತೆಗೇ ಇದ್ದಾರೆ.

ಉತ್ತಮ ಸಾಹಿತ್ಯಿಕ ಚಳುವಳಿಯ ಭಾಗವಾಗಿ ಕ್ರೈಸ್ಟ್ ಕಾಲೇಜಿನ ಸಂಘ ಕಾರ್ಯನಿರ್ವಹಿಸುತ್ತಿರುವುದು ಅಭಿನಂದನಾರ್ಹ.

ಕೆ. ವಿ. ತಿರುಮಲೇಶ್

ಬಹಳ ವರ್ಷಗಳ ಹಿಂದೆ ನಾನು "ಕ್ರೈಸ್ತನ ನಿಷ್ಕ್ರಮಣ" ಎಂಬೊಂದು ಕವಿತೆಯನ್ನು ಬರೆದೆ. ಡೋಸ್ಟೋವ್‌ಸ್ಕಿಯ 'ಕರಮಝೋವ್ ಸಹೋದರರು' ಕಾದಂಬರಿಯಲ್ಲಿ ಬರುವ ಪ್ರಸಂಗವೊಂದರ ಸ್ಫೂರ್ತಿಯಿಂದ ಬರೆದ ಕವಿತೆ ಅದು. 'ಮುಖವಾಡಗಳು' ಎಂಬ ನನ್ನ ಮೊದಲ ಕವನ ಸಂಕಲನದಲ್ಲಿ ಈ ಕವಿತೆ ಸೇರಿದೆ. ಆಮೇಲೆ ಬೆಂಗಳೂರಿನ ಕ್ರೈಸ್ಟ್ ಕಾಲೇಜಿನ ಕನ್ನಡ ಸುಘದಿಂದ ನನಗೊಂದು ಪತ್ರಬಂತು. ಕ್ರಿಸ್ತುವಿನ ಬಗ್ಗೆ ಬಂದ ಕವಿತೆಗಳನ್ನು ಸಂಗ್ರಹಿಸಿ ಪ್ರಕಟಿಸುವ ಯೋಜನೆಯಲ್ಲಿ ನನ್ನ ಕವಿತೆಯನ್ನು ಸೇರಿಸಿಕೊಳ್ಳಲು ಅವರು ಬಯಸಿದ್ದರು. ಆಗಲೇ ನನಗೆ ಈ ಸಂಸ್ಥೆಯ ಪರಿಚಯವಾದದ್ದು. ನಂತರ ಈಗೆರಡು ವರ್ಷಗಳ ಹಿಂದೆ "ಬೇಂದ್ರೆಯವರ ಕಾವ್ಯ ಶೈಲಿ" ಎಂಬ ವಿಷಯದ ಮೇಲೆ ನಾನು ಈ ಸಂಸ್ಥೆಯಲ್ಲಿ ಒಂದು ಉಪನ್ಯಾಸವನ್ನು ಕೊಡುವ ಅವಕಾಶವಾಯಿತು. ಕ್ರೈಸ್ಟ್ ಕಾಲೇಜಿನ ಕನ್ನಡ ಸಂಘದವರು ಆಗಿಂದಾಗ್ಗೆ ಒಳ್ಳೆ ಪುಸ್ತಕಗಳನ್ನ ಪ್ರಕಟಿಸುತ್ತ ಬಂದಿದ್ದಾರೆ; ವಿದ್ಯಾರ್ಥಿಗಳಲ್ಲಿ ಆಸಕ್ತಿ ಕುದುರುವಂತೆ ಸ್ಪರ್ಧೆ ಇತ್ಯಾದಿ ಕಾರ್ಯಕ್ರಮಗಳನ್ನ ನಡೆಸುತ್ತಲೂ ಇದ್ದಾರೆ. ಸಾಹಿತ್ಯದ ಕೆಲಸವನ್ನು ಕೇವಲ ವಿಶ್ವವಿದ್ಯಾಲಯ, ಪರಿಷತ್ತು ಮತ್ತು ಅಕಾಡೆಮಿಗಳಿಗೆ ಸೀಮಿತಗೊಳಿಸದೆ, ಅದರ ವಿಕೇಂದ್ರೀಕರಣ ಆಗಬೇಕಾದರೆ ಇಂಥ ಸಂಸ್ಥೆಗಳು ಅಲ್ಲಲ್ಲಿ ಬೆಳೆಯಬೇಕು.

ಅ. ರಾ. ಮಿತ್ರ

'ಕ್ರೈಸ್ಟ್ ಕಾಲೇಜ್ ಕನ್ನಡ ಸಂಘ' ಸದ್ದು ಗದ್ದಲವಿಲ್ಲದೆ ಕನ್ನಡಕ್ಕಾಗಿ ದುಡಿಯುತ್ತಿರುವುದು, ಸಾಹಿತ್ಯ ಪ್ರಸಾರದಲ್ಲಿ ಆಸಕ್ತಿ ವಹಿಸುತ್ತಿರುವುದು, ಸಾಹಿತ್ಯದ ಎಲ್ಲ ಪ್ರಕಾರಗಳನ್ನು ಪ್ರತಿನಿಧಿಸುವ ಪುಸ್ತಕಗಳನ್ನು ಹೊರತರುತ್ತಿರುವುದು, ಯುವ ಜನಾಂಗಕ್ಕೆ ಕನ್ನಡದ ಹುಚ್ಚು ಹಿಡಿಸುವ ಕ್ರಿಯಾತ್ಮಕ ಚಟುವಟಿಕೆಗಳಲ್ಲಿ ತೊಡಗಿರುವುದು, ಮತ್ತು ಸಾಹಿತ್ಯ ಪ್ರಕಾಶನದಲ್ಲಿ ಉತ್ತಮ ಅಭಿರುಚಿ ಹೊಂದಿರುವುದು– ಇವಿಷ್ಟೂ ನನ್ನ ಗಮನಕ್ಕೆ ಬಂದಿದೆ. ನಾನು ನಿಮ್ಮ ಸಂಘದ ಆರಂಭ ಕಾಲದಿಂದ ಇಂದಿನವರೆಗೆ ನಿಮ್ಮ ಗತಿ–ಗುರಿಗಳನ್ನು ಗಮನಿಸುತ್ತಲೇ ಬಂದಿದ್ದೇನೆ. ಬಹುಶಃ 'ಸೆಂಟ್ರಲ್ ಕಾಲೇಜ್'ನ ಕರ್ನಾಟಕ ಸಂಘವನ್ನು ಬಿಟ್ಟರೆ ಈ ಪ್ರಮಾಣದ ಕಾರ್ಯವನ್ನು ಮತ್ತಾವ ಕನ್ನಡ ಸಂಘವೂ ಮಾಡಿಲ್ಲ. ನಿಮ್ಮ ಪ್ರಕಟನೆಗಳೆಲ್ಲ ಇಂದಿನ ತಲೆಮಾರಿನವರಿಗೂ ಸಂಗತವಾಗುವ ಸೃಜನಾತ್ಮಕ–ಚಿಂತನಶೀಲ ಬರವಣಿಗೆಗೆ ಒತ್ತುಕೊಡುತ್ತ ಸಾಗಿರುವುದೇ ನಿಮ್ಮ ಆರೋಗ್ಯಕರ ಬೆಳವಣಿಗೆಗೆ ಕಾರಣವಾಗಿದೆಯೆಂದು ನಾನು ನಂಬಿದ್ದೇನೆ. ಅದಷ್ಟು, ಚೇತನೋತ್ಸಾಹ, ಹೊಸ ಹೊಸ ಶೋಧಗಳ ಅನ್ವೇಷಣೆ, ಬರಿಯ 'ವ್ಯಾಪಾರೀ ದೃಷ್ಟಿ' ಯಿಂದ ಹೊರತಾದ 'ಪ್ರಕಾಶನ ಶೀಲತೆ' ಇವೇ ನಿಮ್ಮ ಪ್ರಧಾನ ಬಂಡವಾಳವಾಗಿವೆ.

ನಿಮ್ಮ ಸಂಘ ಚಿರಾಯುವಾಗಲಿ.

ವಾಮನ ಬೇಂದ್ರೆ

ನಾನು ಈವರೆಗೆ ಪ್ರತ್ಯಕ್ಷ ಕಂಡಿಲ್ಲ. ಆದರೆ ಪ್ರಿಯ ಸಹೋದರ ಚಿ. ಶ್ರೀನಿವಾಸರಾಜು ಸಾಧಿಸಿದ ಯಶಸ್ಸು ನನಗೆ ಆಶ್ಚರ್ಯ ಸಾಗರದಲ್ಲಿ ಮುಳುಗಿಸಿದೆ. ಅವರು ಪ್ರಕಟಿಸಿದ 50 ಪುಸ್ತಕಗಳಲ್ಲಿ ಸಾಕಷ್ಟು ವೈವಿಧ್ಯವಿದೆ, ತರುಣರಿಗೆ ಬೆಂಬಲವಿದೆ. ಪ್ರಗತಿ ಅತ್ಯಂತ ಆಶಾದಾಯಕವಾಗಿದೆ. ಆದುದರಿಂದ ಪ್ರಾಚಾರ್ಯರೆ॥ಫಾ॥ ಕೆ. ಅಗಸ್ಟಿನ್ ಜೋಸೆಫ್ ಮತ್ತು ಶ್ರೀನಿವಾಸರಾಜು ಅವರ ಅಪಾರ ಸ್ನೇಹಿತ ಬಳಗಕ್ಕೆ ವೇದಿಕೆಯ ಪರವಾಗಿ ಶುಭಾಶಯಗಳು ಮತ್ತು ಧನ್ಯವಾದಗಳು.

ಪುಣೆಯಲ್ಲಿ-ನವೆಂಬರ್ 1981. ಬೇಂದ್ರೆ ವ್ಯಕ್ತಿತ್ವ ಪ್ರಭಾವದಿಂದ ವಿರಹಿಯಾದ ಶ್ರೀನಿವಾಸರಾಜು ಡಾ॥ ದ. ರಾ. ಬೇಂದ್ರೆ ಸ್ಮೃತಿ ಉಪನ್ಯಾಸ. ಮಾಲೆ ಮತ್ತು ಸ್ಮಾರಕ ಕವನಗಳ ಸ್ಪರ್ಧೆಗೆ ಅನುಮತಿ ಪಡೆದರು. ಮಾತು ಕೊಟ್ಟಂತೆ ಪಾಲಿಸಿ ತೋರಿಸಿದ ಮಹನೀಯರು.

13, 'ಶ್ರೀಮಾತಾ' ಇದನ್ನು ಬೇಂದ್ರೆ ರಾಷ್ಟ್ರೀಯ ಸ್ಮಾರಕ ಮಾಡುವ ಗುರಿ ನಮ್ಮ ವೇದಿಕೆಯದು. ಇದನ್ನು ಸಾಧಿಸುವಲ್ಲಿ ಕ್ರೈಸ್ಟ್ ಕಾಲೇಜ್ ಕನ್ನಡ ಸಂಘ

ಹಾಗೂ ಶ್ರೀನಿವಾಸರಾಜು ಸ್ನೇಹಿತರ ಬಳಗ ಪ್ರತಿಜ್ಞೆಯೊಂದಿಗೆ ಸಹಾಯ ಮಾಡುತ್ತದೆ ಎಂದು ನಂಬಿರುವೆ. ಇದು ಆಗದಿದ್ದರೆ ವಾಮನ ಬೇಂದ್ರೆ ಮತ್ತು ಶ್ರೀನಿವಾಸರಾಜು ಅವರ ಜೀವನ ವ್ಯರ್ಥ. ಹೀಗಾಗದಂತೆ ಕರ್ನಾಟಕ ಸರಕಾರ ಮತ್ತು ಕರ್ನಾಟಕದ ಜನತೆ ಆಸ್ಥೆವಹಿಸುತ್ತದೆ ಎಂಬ ವಿಶ್ವಾಸ ನಮಗಿದೆ.

ಕರ್ನಾಟಕದ ಜನತೆ ಬೇಂದ್ರೆಯವರ ಮೇಲೆ ಸುರಿಸಿದ ಗೌರವದ ಮಳೆ-ಬೇಂದ್ರೆ ರಾಷ್ಟ್ರೀಯ ಸ್ಮಾರಕದಲ್ಲಿ ಪ್ರತಿಬಿಂಬಿತವಾಗಬೇಕು. ಅಪೇಕ್ಷೆ ನಮ್ಮದು ; ಯಶಸ್ಸು ಈಶನದು.

"ಈಶಾವಾಸ್ಯಂ ಇದಂ ಸರ್ವಂ"

ಕ್ರೈಸ್ಟ್ ಕಾಲೇಜ್ ಕನ್ನಡ ಸಂಘದ ಅಂತಃಕರಣಕ್ಕೆ, ಅಭಿಮಾನಕ್ಕೆ ಅನಂತ ನಮನಗಳು.

ಗಿರಡ್ಡಿ ಗೋವಿಂದರಾಜ

ಬೆಂಗಳೂರಿನ ಕ್ರೈಸ್ಟ್ ಕಾಲೇಜಿನ ಕನ್ನಡ ಸಂಘ ತನ್ನ ೫೦ನೆಯ ಪ್ರಕಟಣೆಯಾಗಿ ಶ್ರೀ ಎ. ಎನ್. ಮೂರ್ತಿರಾಯರ ಸಮಗ್ರ ಲಲಿತ ಪ್ರಬಂಧಗಳನ್ನು ಹೊರ ತರುತ್ತಿರುವದು ಸಂತೋಷದ ಸಂಗತಿ. ವಿದ್ಯಾರ್ಥಿಗಳ ಬರವಣಿಗೆಯನ್ನು ಪ್ರೋತ್ಸಾಹಿಸಿ, ಉತ್ತಮವಾದ ಬರೆಹಗಳನ್ನು ಆಯ್ದು ಪ್ರಕಟಿಸುವಲ್ಲಿ ಕನ್ನಡ ಸಂಘ ತೋರಿಸಿರುವ ಆಸಕ್ತಿ ಅತ್ಯಂತ ಸ್ತುತ್ಯರ್ಹವಾದದ್ದು. ಕೇವಲ ಒಂದು ಕಾಲೇಜಿಗೆ ತನ್ನನ್ನು ಸೀಮಿತಗೊಳಿಸಿಕೊಳ್ಳದೆ ನಾಡಿನ ಎಲ್ಲ ವಿದ್ಯಾರ್ಥಿಗಳನ್ನೂ ಒಳಗೊಂಡಂತೆ ನಡೆದಿರುವ ಈ ಕೆಲಸ ನಾಡಿಗೇ ಮಾದರಿಯಾಗುವಂಥದು. ಇದರ ಜೊತೆಗೆ ಅನೇಕ ಉದಯೋನ್ಮುಖ ಲೇಖಕರ ಮೊದಲ ಕೃತಿಗಳನ್ನು ಪ್ರಕಟಿಸಿರುವ ಹೆಮ್ಮೆಯೂ ಸಂಘಕ್ಕೆ ಸಲ್ಲಬೇಕು. ಇದರಾಚೆಗೂ ಸಂಘ ತನ್ನ ಕಾರ್ಯಕ್ಷೇತ್ರವನ್ನು ವಿಸ್ತರಿಸಿಕೊಂಡು, ವ್ಯಾವಹಾರಿಕ ಪ್ರಕಾಶಕರು ಪ್ರಕಟಿಸಲು ಹಿಂದೆ–ಮುಂದೆ ನೋಡುವಂಥ, ಆದರೆ ನಾಡಿನ ಸಾಂಸ್ಕೃತಿಕ ಬೆಳವಣಿಗೆಗೆ ಅಗತ್ಯವಾದಂಥ ಕೃತಿಗಳನ್ನೂ ಸಂಘ ಪ್ರಕಟಿಸಿದೆ. ಇದರ ಹಿಂದೆ ತಮ್ಮ ವ್ಯಕ್ತಿತ್ವವನ್ನೆಲ್ಲ ತೊಡಗಿಸಿಕೊಂಡು ದುಡಿಯುತ್ತಿರುವ ಚಿ. ಶ್ರೀನಿವಾಸರಾಜು ಅವರ ಕಾರ್ಯಸಾಮರ್ಥ್ಯ ಅಚ್ಚರಿಗೊಳಿಸುವಂಥದು, ಸ್ವತಃ ಉತ್ತಮ ಮಟ್ಟದ ಸೃಜನಶೀಲ ಲೇಖಕರಾಗಿರುವ ಅವರು ತಮ್ಮ ಅಮೂಲ್ಯ ಶಕ್ತಿ, ವೇಳೆಗಳನ್ನು ಈ ಕೆಲಸಕ್ಕಾಗಿ ವ್ಯಯ ಮಾಡುತ್ತಿರುವದನ್ನು ನಮ್ಮ ಜನ ಕೃತಜ್ಞತೆಯಿಂದ ನೆನೆಯಬೇಕು. ಸಾಂಸ್ಕೃತಿಕವಾಗಿ ಇದು ಅತ್ಯಂತ ಮಹತ್ವದ ಕೆಲಸ. ಕನ್ನಡ ಸಂಘಕ್ಕೆ ಈ ಸಂದರ್ಭದಲ್ಲಿ ನನ್ನ ಹಾರ್ದಿಕ ಶುಭಾಶಯಗಳು.

ಕೆ. ಮರಳಿಸಿದ್ದಪ್ಪ

ಕಳೆದ ಒಂದೂವರೆ ದಶಕಗಳ ಕನ್ನಡ ಪುಸ್ತಕ ಪ್ರಕಾಶನದ ಇತಿಹಾಸದಲ್ಲಿ 'ಕ್ರೈಸ್ಟ್ ಕಾಲೇಜ್ ಕನ್ನಡ ಸಂಘ'ದ ಸಾಧನೆ ಗಣನೀಯವಾಗಿದೆ. ಕೇವಲ ಮನರಂಜನಾ ಪ್ರಧಾನವಾದ ಲಘು ಕಾರ್ಯಕ್ರಮಗಳ ಚಟುವಟಿಕೆಗಳಲ್ಲಿ ನಿರತವಾಗಿರುವ ಇತರ ವಿದ್ಯಾರ್ಥಿ ಸಂಘಗಳಿಗೆ 'ಕ್ರೈಸ್ಟ್ ಕಾಲೇಜ್ ಕನ್ನಡ ಸಂಘ' ಒಂದು ಮಾದರಿಯಾಗಿ ಪರಿಣಮಿಸಿದೆ. ಕಾವ್ಯ, ಕಥೆ, ನಾಟಕ, ಕಾದಂಬರಿ, ವಿಮರ್ಶೆ, ವಿಜ್ಞಾನ, ಲಲಿತಪ್ರಬಂಧ, ಅನುವಾದಗಳು—ಹೀಗೆ ವೈವಿಧ್ಯಮಯವಾದ ವಿಷಯಗಳನ್ನೊಳಗೊಂಡಂತೆ ಐವತ್ತು ಪುಸ್ತಕಗಳನ್ನು ಅವರು ಪ್ರಕಟಿಸಿದ್ದಾರೆ. ಶ್ರೀರಂಗ. ಎ. ಎನ್. ಮೂರ್ತಿರಾವ್, ರಂ. ಶ್ರೀ, ಮುಗಳಿ ಅವರಂತಹ ಹಿರಿಯ ಲೇಖಕರನ್ನೂ ಒಳಗೊಂಡಂತೆ ಕನ್ನಡ ನಾಡಿನ ಎಲ್ಲಾ ತಲೆಮಾರಿನ ಅನೇಕ ಪ್ರತಿಭಾವಂತ ಬರಹಗಾರರ ಕೃತಿಗಳನ್ನು ಅವರು ಪ್ರಕಟಿಸಿದ್ದಾರೆ. ಪುಸ್ತಕ ಪ್ರಕಟಣೆಯೊಂದಿಗೆ ದತ್ತಿ ಉಪನ್ಯಾಸಗಳನ್ನೂ ಏರ್ಪಡಿಸುತ್ತಿರುವ 'ಕ್ರೈಸ್ಟ್ ಕಾಲೇಜ್ ಕನ್ನಡ ಸಂಘ'ವು ವಿಶ್ವವಿದ್ಯಾಲಯವೊಂದರ ಪ್ರಸಾರಾಂಗವು ಮಾಡಬಹುದಾದ ಎಲ್ಲ ಕೆಲಸಗಳನ್ನೂ ಚಿಕ್ಕ ಪ್ರಮಾಣದಲ್ಲಿ, ಆದರೆ ಇನ್ನೂ ಹೆಚ್ಚು ಶ್ರದ್ಧೆಯಿಂದ ಮಾಡುತ್ತಾ ಬಂದಿರುವುದು ನಿಜಕ್ಕೂ ಶ್ಲಾಘನೀಯವಾಗಿದೆ. ಈ ಎಲ್ಲ ದುಡಿಮೆಯ ಮೂಲ ಶಕ್ತಿಯಾಗಿ ಕಾರ್ಯತತ್ಪರವಾಗಿರುವ ಗೆಳೆಯ ಶ್ರೀ ಚಿ. ಶ್ರೀನಿವಾಸರಾಜುರವರನ್ನು ಈ ಸಂದರ್ಭದಲ್ಲಿ ನಾನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ.

ಶೇಷನಾರಾಯಣ

ಕನ್ನಡ ಸಂಘಗಳಲ್ಲಿ ನಾನಾ ಬಗೆಯವು ಇವೆ. ಉತ್ಸಾಹೀ ಜನ ಸೇರಿ ಸಂಘ ಕಟ್ಟುವುದು, ಕನ್ನಡದ ಕೆಲಸ ಕಾರ್ಯಗಳನ್ನು ಮಾಡುವುದು ಒಂದು ಬಗೆ. ಇದಕ್ಕೆ ಉದಾಹರಣೆ ಕಾರ್ಖಾನೆಗಳು ಮತ್ತು ಸರಕಾರದ ಬೇರೆ ಬೇರೆ ಇಲಾಖೆಗಳಲ್ಲಿ ನಾಡಿನ ಉದ್ದಗಲಕ್ಕೂ ಇರುವ ಸಂಘ ಸಂಸ್ಥೆಗಳು. ಇವರಿಗೆ ಉತ್ಸಾಹವೇ ಬಂಡವಾಳ. ಕನ್ನಡ ರಾಜ್ಯೋತ್ಸವ, ಸಂಗೀತ ಕಾರ್ಯಕ್ರಮಗಳು, ಭಾಷಣ—ಮುಂತಾದವನ್ನು ಅದ್ಧೂರಿಯಾಗಿ ಇವರು ಮಾಡಿಕೊಂಡಿರುತ್ತಾರೆ.

ಇನ್ನು ಹೊರ ನಾಡಿನಲ್ಲಿರುವ ನಮ್ಮ ಕನ್ನಡ ಸಂಘಗಳ ವಿಚಾರ. ಭಾಷೆಯ ಅಭಿಮಾನದಿಂದ ಇವರು ಕನ್ನಡದ ಕೆಲಸಗಳನ್ನು ಮಾಡುತ್ತ ಇರುತ್ತಾರೆ. ತಮ್ಮ ಮಕ್ಕಳು ತಾಯಿ ನುಡಿಯನ್ನು ಮರೆತಾರು ಎಂದು ಶಾಲೆ, ಹೈಸ್ಕೂಲುಗಳನ್ನೂ ತೆರೆಯುತ್ತಾರೆ; ಸಾಹಸ ಮಾಡುತ್ತಾರೆ. ಇಂಥ ಹಲವು ಪ್ರಸಿದ್ಧ ಸಂಘಗಳು ನಮ್ಮ ಕಣ್ಣಮುಂದೆ ಇವೆ.

ಕನ್ನಡ ಕನ್ನಡ, ಕನ್ನಡವೇ ನನ್ನ ಉಸಿರು, ಕನ್ನಡ ಸಂಘ—ಹೀಗೆ ಹೆಸರು ಹೇಳಿಕೊಂಡು ಜೀವನ ಮಾಡುವವರು ಹಲವರು. ಇದು ಎಲ್ಲರಿಗೂ ತಿಳಿದ ವಿಚಾರ. ಇಂಥವರಲ್ಲಿ ಕೆಲವರು ಬಲಾಢ್ಯರಾಗಿಯೂ ಇರುತ್ತಾರೆ. ನೃಪತುಂಗ ಮಂಟಪಗಳನ್ನು ಎಬ್ಬಿಸಿ ಲಕ್ಷಗಟ್ಟಲೆ ಖರ್ಚು ಮಾಡುತ್ತಾರೆ. ಇಷ್ಟು ಖರ್ಚು ಮಾಡಲು ಹಣ ಎಲ್ಲಿಂದ ಬರುತ್ತವೆ ಎಂದರೆ ಕನ್ನಡದ ಭಕ್ತರು ಕೊಡುತ್ತಾರೆ ಎನ್ನುತ್ತಾರೆ—ಇರಲಿ.

ಇವೆಲ್ಲವನ್ನೂ ಬಿಟ್ಟರೆ ಶಾಲೆ, ಕಾಲೇಜುಗಳಲ್ಲಿ ಕೆಲವು ಕನ್ನಡ ಸಂಘಗಳು ಇರುತ್ತವೆ. ಇವು ಅಲ್ಲಿನ ಅಧ್ಯಾಪಕ, ಪ್ರಾಧ್ಯಾಪಕರ, ವಿದ್ಯಾರ್ಥಿಗಳ, ಶ್ರಮದಿಂದ ಜನ್ಮತಾಳಿದವು. ಸಾಧಾರಣವಾಗಿ ಇಂಥ ಸಂಘಗಳು ರಚನಾತ್ಮಕವಾಗಿ ಪ್ರಯೋಜನಕ್ಕೆ ಬರುವಂಥ ಏನಾದರೂ ಕೆಲಸಗಳನ್ನು ಮೌನವಾಗಿ ಮಾಡಿಕೊಂಡಿರುತ್ತವೆ.

ಸೆಂಟ್ರಲ್ ಕಾಲೇಜ್ ಕರ್ನಾಟಕ ಸಂಘ—ಎಂದೊಡನೆ ನಮಗೆ ಹಲವು ಒಳ್ಳೆಯ ಕೆಲಸಗಳ ಸುರುಳಿ ಬಿಚ್ಚಿಕೊಳ್ಳುತ್ತದೆ. ನಮ್ಮ ಕಣ್ಣ ಮುಂದೆ ಜಿ. ಪಿ. ರಾಜರತ್ನಂ ಮಿಂಚುತ್ತಾರೆ.

ಇಂಥವುಗಳ ನೆನಪು ನಮಗೆ ಊದುಬತ್ತಿಯ ಸುರುಳಿಯ ಹಾಗೆ. ಸದಾ ಪರಿಮಳ.

ಕ್ರೈಸ್ಟ್ ಕಾಲೇಜ್ ಕನ್ನಡ ಸಂಘದ ವಿಚಾರವೂ ಹಾಗೆಯೇ. ಇದು ಜಿ. ಶ್ರೀನಿವಾಸರಾಜು ಅವರ ಮುದ್ದಿನ ಕೂಸು. ಅವರ ನಿರಂತರ ಶ್ರಮದಿಂದ ಕನಸಿನಿಂದ ಆಸೆಯಿಂದ ಬೆಳೆಯುತ್ತಿರುವ ಒಂದು ಪ್ರಮುಖ ಕನ್ನಡ ಸಂಘ. ಅಲ್ಪಾವಧಿಯಲ್ಲಿ ಐವತ್ತನೆಯ ಪ್ರಕಟಣೆಯನ್ನು ಇದು ಹೊರತರುತ್ತಿರುವುದಂತೂ ತುಂಬಾ ಹೆಮ್ಮೆಯ ಸಂಗತಿ ಎನ್ನುವುದಕ್ಕಿಂತ ಸಾಹಸ ಎನ್ನುವುದು ಮೇಲು.

ನನಗೂ ಕ್ರೈಸ್ಟ್ ಕಾಲೇಜ್ ಕನ್ನಡ ಸಂಘಕ್ಕೂ ಅಪೂರ್ವ ನಂಟು. ಅದರ ಮೊದಲ ಪ್ರಕಟಣೆಗಳನ್ನು ಮುದ್ರಿಸಿದವನು ನಾನು. ಎಂದರೆ ಮುದ್ರಕ. ನಾನು ಆಗ ಒಂದು ಮುದ್ರಣ ಸಂಸ್ಥೆಯನ್ನು ನಡೆಸುತ್ತ ಇದ್ದೆ. ನದಿಯ ಮೇಲಿನ ಗಾಳಿ, ಕ್ರಿಸ್ತಾಂಜಲಿ, ಪ್ರತಿಷ್ಠಿತ ಶಕ್ತಿ ಮತ್ತು ಕನ್ನಡ ಸಾಹಿತ್ಯ—ಮುಂತಾದ ಪುಸ್ತಕಗಳು ನಮ್ಮಲ್ಲಿ ಅಚ್ಚಾಯಿತು.

ಪುಸ್ತಕಗಳ ಮುದ್ರಣ ವಿಚಾರದಲ್ಲಿ ನಾನು ತುಂಬಾ ಆಸ್ಥೆ ವಹಿಸುತ್ತಿದ್ದುದರಿಂದ, ತಪ್ಪಿಲ್ಲದೆ ಅಚ್ಚುಕಟ್ಟಾಗಿ ನೋಡುವುದಕ್ಕೂ ಅಂದವಾಗಿರಬೇಕು ಎಂದು ನಾನು ಬಯಸುತ್ತಿದ್ದುದರಿಂದ, ರಾಜು ನನಗೆ ಬಹಳ ಬೇಗ ಆತ್ಮೀಯರಾಗಿಬಿಟ್ಟರು. ಒಳಗಿನ ಹೂರಣವಷ್ಟೇ ಅಲ್ಲ, ಹೊರಮೈ ಸಹ ಸುಂದರವಾಗಿರಬೇಕು ಎಂದು ಸಹ ನನ್ನಂತೆಯೇ ಅವರು ಭಾವಿಸುತ್ತಿದ್ದವರು. ವಾಸ್ತವವಾಗಿ ನನಗೆ ಅವರ ಪರಿಚಯ ಆದದ್ದು ಈ ಕನ್ನಡ ಸಂಘದ ಪ್ರಕಟಣೆಗಳ ಮೂಲಕವೇ.

ಈ ಶ್ರದ್ಧಾ ಭಕ್ತಿಗಳ ಫಲವಾಗಿಯೇ ಒಂದು ಪುಟದ ಕೆಲವೇ ಸಾಲುಗಳ ಪ್ರೂಫ್ ನೋಡಬೇಕಾದರೂ ಅವರು ಬೇಜಾರು ಮಾಡಿಕೊಳ್ಳುತ್ತ ಇರಲಿಲ್ಲ. ಅವರ

ಮನೆ ನಗರದ ಉತ್ತರದ ತುದಿ. ನನ್ನ ಮುದ್ರಣ ಸಂಸ್ಥೆ ದಕ್ಷಿಣದ ಅಂಚು. ಕಾಲೇಜ್ ಪೂರ್ವದ ಗಡಿ. ಅರ್ಧ ಪುಟ ಒಂದು ಪುಟ ಸರಿ ನೋಡುವುದಕ್ಕೆ ಅವರು ಬೆಂಗಳೂರನ್ನು ಒಂದು ಪ್ರದಕ್ಷಿಣೆ ಹಾಕುತ್ತ ಇದ್ದರು. ಸಲೀಸಾಗಿ. ಸರಾಗವಾಗಿ. ಬೇಸರವಿಲ್ಲದೆ.

ನಾನು ಕಂಡಂತೆ, ಶ್ರೀನಿವಾಸರಾಜು ಪಾತಿ ಮಾಡಿ ಗಿಡ ನೆಟ್ಟು ನೀರೆರೆದು ಬೆಳೆಸಿದ ಕ್ರೈಸ್ಟ್ ಕಾಲೇಜ್ ಕನ್ನಡ ಸಂಘ, ಇಂದು ತನ್ನ ಐವತ್ತನೆಯ ಪ್ರಕಟಣೆಯನ್ನು ಹೊರ ತರುತ್ತಿದೆ ಎಂದರೆ, ನನಗಂತೂ ತುಂಬಾ ಸಂತೋಷದ ವಿಚಾರವಾಗಿದೆ. ಈ ಸಂಘದ ಮೊದಲ ಪ್ರಕಟಣೆಗಳು ಹೊರಬರಲು ನನ್ನಿಂದಲೂ ಅಲ್ಪಸ್ವಲ್ಪ ಸಹಾಯವಾಗಿದೆ ಎನ್ನುವಾಗ, ನನಗೆ ಒಂದು ಬಗೆಯ ಹೆಮ್ಮೆಯೂ ಆಗುತ್ತದೆ. ಹಾಗೆಯೇ ಶ್ರೀನಿವಾಸರಾಜು ಅವರ ಶ್ರಮದ ಬೆಲೆಯೂ ಅರ್ಥವಾಗುತ್ತದೆ—ಎಷ್ಟೆಂದು.

ಶ್ರಮದ ಬೆಲೆಯೂ ಹಾಗೆಯೇ. ಅದು ಎಲ್ಲರಿಗೂ ಅರ್ಥವಾಗುವಂಥದು ಅಲ್ಲ. ಅದರಲ್ಲಿ ದುಡಿದವರು, ಭಾಗಿಯಾದವರು, ಸಮೀಪ ನೋಡಿದವರು—ಇಂಥವರಿಗೆ ಮಾತ್ರ ಈ ಸಾಹಸದ ಹಿರಿಮೆ ತಿಳಿದೀತು.

ಈ ಕನ್ನಡ ಸಂಘ, ತನ್ನ ನೂರನೆಯ ಪ್ರಕಟಣೆಯನ್ನು, ಇನ್ನು ಕೆಲವು ವರುಷಗಳಲ್ಲಿ ಹೊರತರಲಿ, ಶ್ರೀನಿವಾಸರಾಜು ಅವರ ಉತ್ಸಾಹದ ಚಿಲುಮೆ ಚಿಮ್ಮುತ್ತಿರಲಿ—ಎನ್ನುವುದು ನನ್ನ ಹಿರಿಯಾಸೆ.

ಸುಮತೀಂದ್ರ ನಾಡಿಗ್

ನಾನು 1953 ರಿಂದ 1955ರ ವರೆಗೆ ಬೆಂಗಳೂರಿನ ಸೆಂಟ್ರಲ್ ಕಾಲೆಜ್‌ನಲ್ಲಿ ಜಿ. ಪಿ. ರಾಜರತ್ನಂ ಅವರ ಶಿಷ್ಯನಾಗಿದ್ದೆ. ಒಂದು ವರ್ಷ, ರಾಜರತ್ನಂ ಅವರು ನಡೆಸುತ್ತಿದ್ದ ಸೆಂಟ್ರಲ್ ಕಾಲೆಜ್ ಕರ್ನಾಟಕ ಸಂಘದ ಕಾರ್ಯದರ್ಶಿಯೂ ಆಗಿದ್ದೆ. ಬಿ. ಎಂ. ಶ್ರೀ ಅವರ 'ಇಂಗ್ಲೀಷ್ ಗೀತೆಗಳು' ಮೊದಲಾಗಿ, ಅನೇಕ ಪುಸ್ತಕಗಳನ್ನು ಪ್ರಕಟಿಸಿದ ಸೆಂಟ್ರಲ್ ಕಾಲೆಜ್ ಕರ್ನಾಟಕ ಸಂಘ ವಿದ್ಯಾರ್ಥಿಗಳ ಅತ್ಯುತ್ತಮ ಲೇಖನಗಳನ್ನು ಮತ್ತು ಕವಿತೆಗಳನ್ನೂ ಪುಸ್ತಕ ರೂಪದಲ್ಲಿ ಪ್ರಕಟಿಸುತ್ತಿತ್ತು. ಕ್ರೈಸ್ಟ್ ಕಾಲೆಜ್ ಕನ್ನಡ ಸಂಘ ಹಳೆಯ ದಿನಗಳನ್ನು ನೆನಪಿಗೆ ತರುತ್ತಿದೆ. ರಾಜರತ್ನಂ ಅವರು ಸೆಂಟ್ರಲ್ ಕಾಲೆಜ್ ಕರ್ನಾಟಕ ಸಂಘದ ಉಸಿರಾಗಿದ್ದಂತೆ, ಕ್ರೈಸ್ಟ್ ಕಾಲೆಜ್ ನಲ್ಲಿ ಜಿ. ಶ್ರೀನಿವಾಸರಾಜು ಇದ್ದಾರೆ. ರಾಜರತ್ನಂ ಸ್ವತಃ ಕವಿ, ನಾಟಕಕಾರಾಗಿದ್ದಂತೆ ಶ್ರೀನಿವಾಸರಾಜು ಕೂಡ ಕವಿ, ನಾಟಕಕಾರರಾಗಿದ್ದಾರೆ. ಬಹುಶಃ ಈ ಹೋಲಿಕೆ ಇಲ್ಲಿಗೆ ನಿಲ್ಲುತ್ತದೆ. ಸೆಂಟ್ರಲ್ ಕಾಲೆಜ್ ಕರ್ನಾಟಕ ಸಂಘ, ಆ ಕಾಲೇಜಿನ ವಿದ್ಯಾರ್ಥಿ

ಗಳಿಗೆ ಮಾತ್ರ ಪ್ರೋತ್ಸಾಹ ಕೊಡುತ್ತಿದ್ದರೆ, ಕ್ರೈಸ್ಟ್ ಕಾಲೆಜ್ ಕನ್ನಡ ಸಂಘ ಇಡೀ ಕರ್ನಾಟಕದ ವಿದ್ಯಾರ್ಥಿಗಳಲ್ಲಿ ಪ್ರತಿಭಾವಂತರ ಗಮನವನ್ನು ಸೆಳೆದಿದೆ. ಕರ್ನಾಟಕದ ಯಾವ ವಿದ್ಯಾರ್ಥಿ ಬೇಕಾದರೂ ಈ ಕನ್ನಡ ಸಂಘ ನಡೆಸುವ ಡಾ॥ ಅ. ನ. ಕೃ. ಸ್ಮಾರಕ ಅಂತರ ಕಾಲೇಜು ಲೇಖನ ಸ್ಪರ್ಧೆಯಲ್ಲಿ ಮತ್ತು ಡಾ॥ ದ. ರಾ. ಬೇಂದ್ರೆ ಸ್ಮೃತಿ ಅಂತರ ಕಾಲೇಜು ಕವನ ಸ್ಪರ್ಧೆಯಲ್ಲಿ ಭಾಗವಹಿಸಬಹುದು. ಸ್ಪರ್ಧೆಯಲ್ಲಿ ಗೆದ್ದವರಿಗೆ ಬಹುಮಾನಗಳನ್ನು ಕೊಡುವುದಲ್ಲದೆ, ಸ್ಪರ್ಧೆಗೆ ಬಂದ ಉತ್ತಮ ಲೇಖನ ಮತ್ತು ಕವನಗಳನ್ನು ಕನ್ನಡ ಸಂಘದವರು ಪ್ರಕಟಿಸುತ್ತಲೂ ಬಂದಿದ್ದಾರೆ. ಇದಲ್ಲದೆ ಪ್ರತಿವರ್ಷವೂ ದ. ರಾ. ಬೇಂದ್ರೆಯವರ ಸಾಹಿತ್ಯದ ಬಗ್ಗೆ ಒಂದು ಉಪನ್ಯಾಸ ಮಾಲೆಯನ್ನು ನಡೆಸಿ, ಅದನ್ನು ಪ್ರಕಟಿಸುತ್ತಲೂ ಬಂದಿರುವ ಈ ಕನ್ನಡ ಸಂಘ ಶ್ರೀರಂಗ, ಕ. ವೆಂ. ರಾಜಗೋಪಾಲ, ಎಚ್. ಎಸ್. ಶಿವಪ್ರಕಾಶ, ಟಿ. ಜಿ. ರಾಘವ, ರಂ. ಶ್ರೀ ಮುಗಳಿ, ಕೆ. ವಿ. ತಿರುಮಲೇಶ್ ಮುಂತಾದವರನ್ನೂ ತನ್ನ ಲೇಖಕರನ್ನಾಗಿ ಮಾಡಿಕೊಂಡಿರುವುದು, ಪ್ರಶಂಸನೀಯವಾಗಿದೆ.

ಈಗ ಕ್ರೈಸ್ಟ್ ಕಾಲೇಜಿನ ಕನ್ನಡ ಸಂಘ ಕೈಗೊಂಡಿರುವ ಆಜೀವ ಸದಸ್ಯತ್ವ ಮೊದಲಾದ ಕೆಲಸಗಳನ್ನು ನೋಡಿದರೆ, 19ನೇ ಶತಮಾನದಲ್ಲಿ ಕ್ರೈಸ್ತ ಮಿಶನರಿಗಳು ಕನ್ನಡವನ್ನು ಬೆಳೆಸಿದ ದಿನಗಳು ನೆನಪಾಗುತ್ತವೆ. ಹೀಗೆ ಕ್ರೈಸ್ಟ್ ಕಾಲೆಜ್ ಕನ್ನಡ ಸಂಘ ಸೆಂಟ್ರಲ್ ಕಾಲೆಜ್ ಕರ್ನಾಟಕ ಸಂಘದ ಕೆಲಸವನ್ನು ಮುಂದುವರಿಸುತ್ತ, ಅದನ್ನು ವಿಸ್ತಾರಗೊಳಿಸುತ್ತ, ಬೆಳೆಸುತ್ತಿರುವುದು ಹೆಮ್ಮೆಯ ಸಂಗತಿಯಾಗಿದೆ. ಈಗ ಪ್ರೊ॥ ಎ. ಎನ್. ಮೂರ್ತಿರಾಯರ 'ಸಮಗ್ರ ಲಲಿತ ಪ್ರಬಂಧ'ಗಳನ್ನು ಪ್ರಕಟಿಸುತ್ತಿರುವ ಸಂದರ್ಭದಲ್ಲಿ ಈ ಎಲ್ಲ ಚಟುವಟಿಕೆಗಳ ಹಿಂದೆ ದೃಢವಾಗಿ ನಿಂತಿರುವ ಪ್ರಿನ್ಸಿಪಾಲ್ ಅಗಸ್ಟಿನೊ ಜೋಸೆಫ್ ಅವರನ್ನು ಮನಃ ಪೂರ್ವಕವಾಗಿ ಅಭಿನಂದಿಸುತ್ತೇನೆ.

ಸಿದ್ದಲಿಂಗ ಪಟ್ಟಣ ಶೆಟ್ಟಿ

ಬೆಂಗಳೂರಿನ ಕ್ರೈಸ್ಟ್ ಕಾಲೇಜಿನ ಕನ್ನಡ ಸಂಘ ಮತ್ತು ಅದರ ಮುಖ್ಯ ಜೀವಾಳವಾದ ಜಿ. ಶ್ರೀನಿವಾಸರಾಜು ಅವರನ್ನು ನಾನು ಬಹಳ ವರ್ಷಗಳಿಂದ ಹತ್ತಿರದಿಂದ ಬಲ್ಲೆ. ಒಂದು ಕಾಲೇಜಿನ ಕನ್ನಡ ಸಂಘವನ್ನು ಕ್ರಿಯಾತ್ಮಕವಾಗಿ ರಚನಾತ್ಮಕ ಮಾರ್ಗದಲ್ಲಿ ಮುನ್ನೆಡಿಸಿ ಅದಕ್ಕೆ ಜೀವಂತಿಕೆಯನ್ನು, ಮಹತ್ವವನ್ನು ನೀಡುವ ವಿಧಾನವನ್ನು ಕನ್ನಡದಲ್ಲಿ ಮೊದಲು ಆರಂಭಿಸಿದವರು ಜಿ. ಪಿ. ರಾಜರತ್ನಂ ಅವರು. ಆ ನಂತರ ಅಲ್ಲಲ್ಲಿ ಕೆಲವು ಮಹಾವಿದ್ಯಾಲಯಗಳ ಕನ್ನಡ ಸಂಘಗಳು ಇಂಥ ಕಾರ್ಯಕ್ಕೆ ತೊಡಗಿ, ಸೊರಗಿ ನಿಂತು ಬಿಟ್ಟವು ಅಥವಾ ಸ್ಥಗಿತಗೊಂಡವು. ಇಂಥ ಸ್ಥಿತಿಯಲ್ಲಿ ಬೆಂಗಳೂರಿನ ನೆಲೆಯಲ್ಲಿಯೇ, ಕನ್ನಡದ ನೆಲದಲ್ಲಿ ಕ್ರೈಸ್ಟ್ ಕಾಲೇಜ್ ಇಂಥ ಕನ್ನಡ

ಕಾರ್ಯವನ್ನು ಆರಂಭಿಸಿದ್ದು ಮತ್ತು ಎಂಥ ಸ್ಥಿತಿಯಲ್ಲೂ ಅದನ್ನು ಮುನ್ನಡೆಸಿಕೊಂಡು ಬಂದದ್ದು ನಿಜವಾಗಿಯೂ ಮೆಚ್ಚತಕ್ಕಂಥ ಆದರ್ಶ.

ಕಾಲೇಜಿನ ತಮ್ಮ ವಿದ್ಯಾರ್ಥಿಗಳನ್ನು, ಶಿಕ್ಷಕರನ್ನು ಮಾತ್ರ ಲಕ್ಷಿಸದೇ, ಸಮಗ್ರ ವಾಗಿ ಕನ್ನಡ ನಾಡಿನ ಮತ್ತು ನುಡಿಯ ಬೆಳವಣಿಗೆ ಹಾಗೂ ಪ್ರಕಟಣೆಗೆ ಮಹತ್ವ ನೀಡಿ ನಿರಂತರವಾಗಿ ಪುಸ್ತಕಗಳನ್ನು ಪ್ರಕಟಿಸುತ್ತ ಬಂದಿರುವುದು ಈ ಸಂಘದ ವೈಶಿಷ್ಟ್ಯ. ಕೆಲವು ಪ್ರತಿಷ್ಠಿತ ಲೇಖಕರ ಮಹತ್ವದ ಗ್ರಂಥಗಳನ್ನು ಪ್ರಕಟಿಸಿದ ಕೀರ್ತಿಕೂಡ ಈ ಸಂಸ್ಥೆಗಿದೆ, 'ನದಿಯ ಮೇಲಿನ ಗಾಳಿ', 'ಟುವಟಾರ', 'ಮಳೆ ಬಿದ್ದ ನೆಲ ದಲ್ಲಿ' ಮುಂತಾದವು ಇದಕ್ಕೆ ಉದಾಹರಣೆ. ಈ ಸಂಘವು ಪ್ರಕಟಿಸಿದ ಅನೇಕರ ಮೊದಲ ಕೃತಿಗಳೂ ಆ ಲೇಖಕರನ್ನು ಸಾಹಿತ್ಯ ಪ್ರಪಂಚದಲ್ಲಿ ಬೆಳಕಿಗೆ ತಂದಿವೆ. ಎಚ್. ಎಸ್. ಶಿವಪ್ರಕಾಶ್, ಪ್ರತಿಭಾ ನಂದಕುಮಾರ್ ಮುಂತಾದವರ ಕೃತಿಗಳು ಈ ಸಾಲಿನಲ್ಲಿ ಬರುತ್ತವೆ.

ಆಗಾಗ ಕನ್ನಡ ಸಾಹಿತ್ಯದ ವಿವಿಧ ವಿಷಯಗಳನ್ನು ಕುರಿತು ವಿದ್ಯಾರ್ಥಿಗಳಿಗೆ ಸ್ಪರ್ಧೆಗಳನ್ನು ಏರ್ಪಡಿಸಿ ಅಲ್ಲಿ ಬಹುಮಾನಿತ ಲೇಖನ, ಕವನಗಳನ್ನು ಪುಸ್ತಕ ರೂಪ ದಲ್ಲಿ ಪ್ರಕಟಿಸಿರುವುದೂ ಕೂಡ ಸಂಘ ಮಾಡಿದ ಹೆಮ್ಮೆಯ ಕೆಲಸ. ಉತ್ತರ ಕರ್ನಾ ಟಕದ ಬೇಂದ್ರೆಯವರ ನೆನಪಿನಲ್ಲಿ ಪ್ರತಿ ವರ್ಷ ನಡೆಯುವ ಸ್ಪರ್ಧೆ, ಬೇಂದ್ರೆ ಸಾಹಿ ತ್ಯದ ಬಗ್ಗೆ ವಿದ್ವಾಂಸರಿಂದ ಉಪನ್ಯಾಸಗಳ ವ್ಯವಸ್ಥೆ ಮತ್ತು ಇತ್ತೀಚೆಗೆ ಪ್ರಕಟವಾದ ಎ. ಎನ್. ಮೂರ್ತಿರಾಯರ ಸಮಗ್ರ ಪ್ರಬಂಧಗಳ ಸಂಕಲನ ಮುಂತಾದವನ್ನು ನೆನ ದರೆ ಸಂಘದ ಕಾರ್ಯ ಚಟುವಟಿಕೆಯ ವಿಸ್ತಾರ ಸಹಜವಾಗಿ ಅರ್ಥವಾಗುತ್ತದೆ.

ಈ ಸಂಘ ಪ್ರಕಟಿಸಿದ ಕೆಲವು ಪುಸ್ತಕಗಳನ್ನು ಪತ್ರಿಕೆಗಳಿಗೆ ವಿಮರ್ಶೆ ಮಾಡು ವಾಗ ಸಹ ನಾನು ಅಭಿಮಾನದಿಂದ ಈ ಸಂಸ್ಥೆಯ ಕಾರ್ಯವನ್ನು ಮೆಚ್ಚಿಕೊಂಡಿ ದ್ದೇನೆ. ಕ್ರೈಸ್ಟ್ ಕಾಲೇಜಿನ ಕನ್ನಡ ಸಂಘ ಇನ್ನೂ ಹೆಚ್ಚು ಕನ್ನಡ–ಕಾರ್ಯವನ್ನು ಮಾಡುವಂತಾಗಲಿ.

ನೀಲತ್ತಹಳ್ಳಿ ಕಸ್ತೂರಿ

"ದೋಣಿ ಸಾಗಲಿ, ಮುಂದೆ ಹೋಗಲಿ" ಎಂದು ಕವಿಯೋನ್ನೋ ಹಾಡಿದರು. ಆದರೆ ದೋಣಿ ತಾನೇ ಸಾಗೀತೇ ? ಸಾಗಿಸುವ ಹುಟ್ಟುಗಾರ ಬಲವಾಗಿ ಇದ್ದರೆ ಸಾಗೀತಷ್ಟೆ. ನಮ್ಮ ನಾಡಿನ ಕರ್ನಾಟಕ ಸಂಘಗಳ ಗತಿಯೂ ಅದೇ. ಆಚಾರ್ಯ ಬಿ. ಎಂ. ಶ್ರೀ ಕಾಲಕ್ಕೆ ಊರೂರಿನಲ್ಲಿ ಕರ್ನಾಟಕ ಸಂಘ ಹುಟ್ಟಿಕೊಂಡವು. ಶಾಲಾ ಕಾಲೇಜುಗಳಲ್ಲೂ ಅವತರಿಸಿದವು. ಆದರೆ ಬಹುಪಾಲು ಸಂಘಗಳೆಲ್ಲ ಅಷ್ಟು ಇಷ್ಟು ತಪ್ಪು ಹೆಜ್ಜೆ ಹಾಕಿಯೊ, ತೆವಳಿಕೊಂಡೊ ಸ್ವಲ್ಪ ಕಾಲ ನಡೆದವು, ನಿಂತವು, ಮರೆಯಾ

ದವು. ಶಿವಮೊಗ್ಗದ ಕರ್ನಾಟಕ ಸಂಘ ಸ್ವಲ್ಪ ಹೆಚ್ಚು ದೂರ ನಡೆಯಿತು. ಮೈಸೂರಿನ ಮಹಾರಾಜಾ ಕಾಲೇಜು ಕರ್ನಾಟಕ ಸಂಘ ಗಟಾನುಗಟಿಗಳ ಕೈಯಲ್ಲಿತ್ತು. ಇನ್ನಷ್ಟು ಹೆಚ್ಚು ದೂರ ಸಾಗಿತು. ನಿಂತಿತು. ಬೆಂಗಳೂರಿನ ಸೆಂಟ್ರಲ್ ಕಾಲೇಜು ಕರ್ನಾಟಕ ಸಂಘದ ದೆಶೆ ಇನ್ನಷ್ಟು ಚೆನ್ನಾಗಿತ್ತು, ಹೆಚ್ಚು ದೂರ ಸಾಗಿತು. ಅದಕ್ಕೆ ದೊರೆತ ಹುಟ್ಟುಗಾರ ಗಟ್ಟಿಗರು, ಛಲಗಾರರು. ಪಟ್ಟು ಸಡಿಲಿಸದೆ ಹುಟ್ಟು ಹಾಕುತ್ತಿದ್ದ ಛಾತಿವಂತರು. ಅವರ ಕೈ ಚಳಕದಿಂದ ಆ ಸಂಘ ಅತ್ಯಂತ ಹೆಚ್ಚು ದೂರ ಸಾಗಿತು. ಆ ಹುಟ್ಟುಗಾರ ಜಿ. ಪಿ. ರಾಜರತ್ನಂ ರಿಟೈರಾದರು. ಸಂಘ ತೆವಳಿಕೊಂಡು ನಾಲ್ಕು ಹೆಜ್ಜೆ ಮುಂದೆ ಸಾಗಿ ನಿಂತಿತು.

ಕ್ರೈಸ್ಟ್ ಕಾಲೇಜು ಕನ್ನಡ ಸಂಘದ ಕೆಲಸದಲ್ಲಿ ಆ ಸೆಂಟ್ರಲ್ ಕಾಲೇಜು ಕರ್ನಾಟಕ ಸಂಘದ ನೆರಳೇ ಕಾಣಿಸುತ್ತದೆ. ಅದೇ ಧ್ಯೇಯ, ಅದೇ ಛಲ, ಅದೇ ಪಟ್ಟು, ಅದೇ ಛಾತಿ. ಕಾಲೇಜು ಮಕ್ಕಳನ್ನು ಚಿಂತನೆಗೆ ಹಚ್ಚುವುದು, ಅಧ್ಯಯನದಲ್ಲಿ ಅದ್ದುವುದು, ಓದಿಸುವುದು, ಬರೆಯಿಸುವುದು, ಬರೆದದ್ದನ್ನು ತಿದ್ದಿ ಪ್ರಕಟಿಸುವುದು. ಜಾತಿ ಸಸಿಗಳನ್ನು ಗುರುತಿಸಿ ಸುತ್ತು ಕಳೆ ಕಸ ಕಿತ್ತು ಸಸಿ ತಲೆಯೆತ್ತುವಂತೆ ಮಾಡುವುದು, ನಾಡಿದ ಸಾಹಿತ್ಯ ಚಟುವಟಿಕೆಗಳಿಗೆ ಸ್ಪಂದಿಸುವುದು, ಹಿರಿಯ ಸಾಹಿತಿಗಳ ಸ್ಮರಣೆಯನ್ನು ಸಾರ್ಥಕವಾಗಿ ಮಾಡುವುದು, ಅವರ ಹೊಗಳಿಕೆಯಲ್ಲೇ ಮೈಮರೆಯದೆ ಕಾಲ ಕಳೆಯದೆ ಅವರ ಕೃತಿಗಳನ್ನು ಕೆದಕಿ ನೋಡುವುದು, ಅವುಗಳ ಸ್ವಾರಸ್ಯವನ್ನು ಎತ್ತಿ ತೋರಿಸುವುದು—ಒಟ್ಟಿನಲ್ಲಿ ಜಿ. ಪಿ. ರಾ. ಹೇಳುತ್ತಿದ್ದಂತೆ ಸಾಹಿತ್ಯ ಪಾಲನೆ, ಸಾಹಿತ್ಯ ಪರಿಚಾರಿಕೆಯ ಕೆಲಸ. ಸಾರೋದ್ಧಾರವಾಗಿ ನಡೆದಿದೆ. ಪ್ರಕಟನೆ 50ರ ಸಂಖ್ಯೆ ಮುಟ್ಟಿದೆ. 50ರಲ್ಲೂ ವೈವಿಧ್ಯತೆ ಇದೆ, ಹೊಸ ಬರೆಹಗಾರರ ಅನಾವರಣ ಇದೆ.

ಈ ಸಂಘಕ್ಕೆ ಸಿಕ್ಕಿರುವ ಹುಟ್ಟುಗಾರ ತರುಣ ಮಿತ್ರ ಚಿ. ಶ್ರೀನಿವಾಸರಾಜು ರಾಜರತ್ನಂರಿಗೆ ಏಕಲವ್ಯ. ಪರೋಕ್ಷದಲ್ಲಿ ಗುರುವಿನ ಪಟ್ಟುಗಳನ್ನೆಲ್ಲ ಕಲಿತವರು. ಈಗ ಪ್ರಯೋಗ ಪಟುಗಳು, ಅವರ ನೆರವಿಗೆ ನಿಂತ ನಾಲ್ಕಾರು ಸಾಹಿತಿ ಮಿತ್ರರು, ವಿದ್ಯಾರ್ಥಿ ಬಳಗ, ಬೆನ್‌ಬಲವಾಗಿ ಕಾಲೇಜು ಆಡಳಿತ ವರ್ಗ, ಕೆಲಸ ಆಶ್ಚರ್ಯಕರವಾಗಿ ಸಾಗಿದೆ. ನನಗೆ ತಿಳಿದಂತೆ ಇಂಥದು ವಿರಳ. ಪುತ್ತೂರಿನ ಫಿಲೋಮಿನಾ ಕಾಲೇಜಿನಲ್ಲೂ ಇಂಥ ಕೆಲಸ ಸಾಗಿದೆ. ಅದು ಇದರ ತಮ್ಮ. ಕ್ರೈಸ್ಟ್ ಕಾಲೇಜಿನ ಸಂಘದ ದೆಶೆ ಚೆನ್ನಾಗಿದೆ. ಒಳ್ಳೆ ಹುಟ್ಟುಗಾರ ದೊರೆತಿದಾರೆ. 50ನ್ನು ದಾಟಿ ನೂರನ್ನೂ ಮುಟ್ಟೀತು. ಮುಂದೆಯೂ ಸಾಗೀತು.

'ಸಾಹಸಮುಸೇನಾನುಮುನ್ ಎಸಗಿ ತೊರಲೇ ವೇಳ್ಕುಂ' ಎಂದ ಅಶ್ವತ್ಥಾಮ. ಅವನದು ದುಸ್ಸಾಹಸ ಆಯಿತು. ಕ್ರೈಸ್ಟ್ ಕಾಲೇಜು ಕನ್ನಡ ಸಂಘದ್ದು ಸಾಹಸವೇ. ಇದು ಸತ್‌ಸಾಹಸ.

ಸಾಹಸಿಗಳು ಅಭಿನಂದನೀಯರು ತಾನೇ !

ಆನಂದ

ಕಾಳೇಗೌಡ ನಾಗವಾರ

ಕ್ರೈಸ್ಟ್ ಕಾಲೇಜ್ ಕನ್ನಡ ಸಂಘವು ತನ್ನ ಐವತ್ತನೆಯ ಪ್ರಕಟಣೆಯನ್ನು ಹೊರತರುತ್ತಿರುವುದು ಸಂತೋಷದ ಸಂಗತಿಯಾಗಿದೆ. ಈ ಪ್ರಕಟಣೆಗಳ ಒಂದೆ ಉತ್ತಮ ಮಟ್ಟದ ಸದಭಿರುಚಿ ಇದೆ, ಸಾಹಿತ್ಯದ ಗಂಭೀರ ವಿದ್ಯಾರ್ಥಿಗಳು ಕುತೂ ಹಲದಿಂದ ಗಮನಿಸುವಂತಹ ಹಲವಾರು ಕೃತಿಗಳನ್ನು ಈ ಸಂಘವು ಈಗಾಗಲೇ ಹೊರತಂದಿದೆ.

ಯುವ ಪ್ರತಿಭೆಗಳ ವಿಕಾಸಕ್ಕಾಗಿ ಕನ್ನಡ ಸಂಘವು ಪ್ರತಿವರ್ಷ ಹಮ್ಮಿಕೊಳ್ಳು ತ್ತಿರುವ ಲೇಖನ ಮತ್ತು ಕವನ ಸ್ಪರ್ಧೆಗಳ ಮೂಲಕ ಕೆಲವು ಸಮರ್ಥ ಯುವ ಬರಹ ಗಾರರು ಪ್ರೋತ್ಸಾಹ ಪಡೆದು ಒಳ್ಳೆಯ ಬೆಳವಣಿಗೆಯನ್ನು ಹೊಂದುತ್ತಿರುವುದು ಶ್ಲಾಘನೀಯವಾದ ಸಂಗತಿಯಾಗಿದೆ.

ಹಾಗೆಯೇ ಬೇಂದ್ರೆಯವರಂತಹ ನಮ್ಮ ಹೆಮ್ಮೆಯ ಕವಿಯ ಕಾವ್ಯವನ್ನು ಕುರಿತು ಪ್ರತಿ ವರ್ಷವೂ ಹೊಸ ಹೊಸ ದೃಷ್ಟಿಕೋನಗಳಿಂದ ಅಧ್ಯಯನ ನಡೆಸಿರುವ ವಿಮರ್ಶಕರಿಂದ, ಏರ್ಪಡಿಸಲಾಗುವ ವಿಶೇಷ ಉಪನ್ಯಾಸಗಳು ಹಾಗು ಇವುಗಳ ಪ್ರಕ ಟಣ ಕಾರ್ಯದ ಬಗ್ಗೆ ಕನ್ನಡ ಸಂಘ ತೋರುತ್ತಿರುವ ಆಸ್ಥೆ ನಿಜಕ್ಕೂ ಅಪರೂಪ ದ್ದಾಗಿದೆ.

ಈ ಎಲ್ಲ ಚಟುವಟಿಕೆಗಳ ಬೆನ್ನೆಲುಬಾಗಿರುವ ಗೆಳೆಯ ಶ್ರೀನಿವಾಸರಾಜು ಉತ್ತಮ ಸಂಘಟಕರಾಗಿದ್ದು–ಸುತ್ತಲ ಆರೋಗ್ಯಕರ ಮನಸ್ಸುಗಳನ್ನು ಒಂದಾಗಿಸುವ ಆ ಮೂಲಕ ನಮ್ಮ ಸಾಹಿತ್ಯ ಮತ್ತು ಸಾಂಸ್ಕೃತಿಕ ರಂಗಗಳಲ್ಲಿ ಗುಣಮಟ್ಟವನ್ನು ಕಾಯ್ದಿಟ್ಟುಕೊಳ್ಳಲು ಸಾಧ್ಯವಾಗುವ ಕೆಲಸಕಾರ್ಯಗಳಲ್ಲಿ ಈ ಲೇಖಕರನ್ನು ತೊಡ ಗಿಸಬಲ್ಲ ಸಾರ್ಥಕ ಪ್ರಯತ್ನಗಳಲ್ಲಿ ಮುಂದಾಗಿದ್ದಾರೆ, ಮುಂಬರುವ ದಿನಗಳಲ್ಲಿ ಇನ್ನಷ್ಟು ಹೆಚ್ಚಿನ ದುಡಿಮೆ ಈ ದಿಕ್ಕಿನಲ್ಲಿ ನಿರಂತರವಾಗಿ ನಡೆಯುತ್ತಿರಲೆಂದು ನಾನು ಹೃದಯತುಂಬಿ ಹಾರೈಸುತ್ತೇನೆ.

ಶ್ರೀಕೃಷ್ಣ ಆಲನಹಳ್ಳಿ

ಕ್ರೈಸ್ಟ್ ಕಾಲೇಜಿನ ಕನ್ನಡ ಸಂಘದ ಚಟುವಟಿಕೆಗಳನ್ನು ನಾನು ಅದು ಶುರು ದಾಗಿವಾಗಿನಿಂದಲೂ ಆಸಕ್ತಿಯಿಂದ ಗಮನಿಸುತ್ತಾ ಬಂದಿದ್ದೇನೆ. ನಿಜವಾಗಿಯೂ ಈ ಸಂಘದ ಪ್ರಕಟಣೆಗಳಲ್ಲಿ ಕೆಲವಂತೂ ಅಪೂರ್ವವಾದವಾಗಿವೆ. ಶಿವಪ್ರಕಾಶನಂಥ ಮಹತ್ವದ ಕವಿಯೊಬ್ಬನನ್ನು ಅನಾವರಣಗೊಳಿಸಿದ ಕೀರ್ತಿ ಈ ಸಂಘದ್ದು. ಹಾಗೇ ಕ. ವೆಂ., ನರಹಳ್ಳಿ, ರಾಘವೇಂದ್ರರಾವ್, ಲಕ್ಷ್ಮಣರಾವ್ ಮುಂತಾದವರ ಜೊತೆಗೆ

ಇವೇ ಮೊದಲಿಗೆ ಕೆಲವೊಂದು ಅಪರೂಪದ ಹೊಸ ದನಿಗಳನ್ನೂ ಈ ಸಂಘ ನಮಗೆ ಕೇಳಿಸುತ್ತಲೇ ಬಂದಿದೆ. ಬೇಂದ್ರೆಯ ಬಗ್ಗೆ ಸದ್ದಿಲ್ಲದೆ ನೀವು ನಡೆಸಿರುವ ಕೆಲಸ ಯಾವತ್ತೂ ಉಳಿಯುವಂಥದು.

ನಾನು ಬೆಂಗಳೂರಲ್ಲಿ ನಡೆಯುವ ಯಾವುದೇ ಸಾಹಿತ್ಯ ಸಮಾರಂಭಕ್ಕೆ ಹೋಗಲಿ ಈ ಸಂಘದ ಪ್ರಕಟಣೆಗಳ ಪ್ರದರ್ಶನವನ್ನು ಕಾಣದೆ ಇದ್ದ ಪ್ರಸಂಗವೇ ಇಲ್ಲವೇನೋ ? 'ಅಂಕಣ' ಪತ್ರಿಕೆ ಜೊತೆ ತಮ್ಮ ಸಂಘದ ಪ್ರಕಟಣೆಗಳು ಹಾಗೂ ಬೇರೆ ಅಪರೂಪದ ಪುಸ್ತಕಗಳ ಪ್ರದರ್ಶನದ ನಡುವೆ ಸದಾ ಉತ್ಸಾಹದ ಚಿಲುಮೆಯಾಗಿ ಚಿ. ಶ್ರೀನಿವಾಸ ರಾಜು ಇದ್ದೇ ಇರುತ್ತಿದ್ದರು. ಕರ್ನಾಟಕದ ಪ್ರತಿ ಕಾಲೇಜಿನ ಕನ್ನಡ ಸಂಘದಲ್ಲೂ ಒಬ್ಬೊಬ್ಬ ಶ್ರೀನಿವಾಸರಾಜು ಇದ್ದೇ ಬಿಟ್ಟಿದ್ದರೆ ? ಕರ್ನಾಟಕದ ಪ್ರಕಟನಾಲೋಕ ಇನ್ನಷ್ಟು ಶ್ರೀಮಂತವಾಗುತ್ತಿತ್ತು. ಹಾಗೇ ಓದುಗರ ಬಳಗ ಕೂಡ ಅದ್ಭುತವಾಗಿ ಬೆಳೆದು ಯಾವ ಪ್ರಕಾಶಕನೂ ಸರ್ಕಾರದ ಸಗಟು ಖರೀದಿಯ ರಾಡಿಯಲ್ಲಿ ತಮ್ಮ ಕೈಯನ್ನು ಗಲೀಜು ಮಾಡಿಕೊಳ್ಳಬೇಕಾದ ಅಗತ್ಯ ಇರುತ್ತಿರಲಿಲ್ಲ.

ಉತ್ತಮವಾದುದನ್ನೇ ಹೊರತರಬೇಕೆನ್ನುವ ಈ ಸಂಘದ ನಿಲುವು ಕನ್ನಡ ಜನ ಮನದಲ್ಲಿ ಉತ್ತಮೋತ್ತಮವಾದ ಅಭಿರುಚಿಯನ್ನು ಬೆಳೆಸಲು ಸಾಕಷ್ಟು ಸಫಲ ಗೊಂಡಿದೆ. ಇದು ಹೀಗೇ ಮುಂದೆಯೂ ವಿಶಿಷ್ಟವಾದುದನ್ನೇ ಕೈಗೊಳ್ಳುತ್ತದೆ ಅನ್ನುವುದಕ್ಕೆ ಸಾಕ್ಷಿ : ಪ್ರಕಟವಾಗಲಿರುವ ಎ. ಎನ್. ಮೂರ್ತಿರಾಯರ ಪ್ರಬಂಧಗಳ ಸಮಗ್ರ ಸಂಪುಟ. ಇಂಥ ದೊಡ್ಡ ಸಾಹಸವನ್ನು ಮಾಡುತ್ತಿರುವ ಈ ಕನ್ನಡ ಸಂಘ ಇನ್ನೂ ಇನ್ನೂ ಉತ್ಕೃಷ್ಟ ಕೃತಿಗಳನ್ನು ಹೊರತರಲೆಂದು ಹಾರೈಸುತ್ತೇನೆ.

ಎಚ್. ಎಸ್. ವೆಂಕಟೇಶಮೂರ್ತಿ

ಕನ್ನಡದ ಜೀವಶಕ್ತಿ ವಿಲಕ್ಷಣವಾದದ್ದು. ಸೆಂಟ್ರಲ್ ಕಾಲೇಜ್ ಕರ್ನಾಟಕ ಸಂಘ. ನಿಷ್ಕ್ರಿಯವಾದ ಮೇಲೆ, ಅದೇ ಬಗೆಯ ಚೇತನ ಕ್ರೈಸ್ಟ್ ಕಾಲೇಜ್ ಕನ್ನಡ ಸಂಘವಾಗಿ ಉದ್ಭವಿಸಿದೆ ಎಂದು ನನಗನ್ನಿಸುತ್ತದೆ. ಈ ಸಂಘದ ಕಾರ್ಯವ್ಯಾಪ್ತಿ ತುಂಬ ವಿಸ್ತಾರವಾದದ್ದು ; ಸಂಘವು ಈ ಪ್ರಕಟಣೆಗಳ ಮೂಲಕವೇ ಪ್ರಧಾನವಾಗಿ ತನ್ನ ಚೇತನದ ಹಲವು ಬಗೆಯ ಅಭಿವ್ಯಕ್ತಿಯನ್ನು ಸಾಧಿಸುತ್ತಿದೆ.

ವ್ಯಾಪಾರೀ ಪ್ರವೃತ್ತಿಯ ಪ್ರಕಾಶನ ಸಂಸ್ಥೆಗಳು ಮುಟ್ಟಲಿಕ್ಕೂ ಹಿಂಜರಿಯು ವಂಥ ಅನೇಕ ಘನವಾದ ಕೃತಿಗಳು ಕ್ರೈಸ್ಟ್ ಕಾಲೇಜ್ ಕನ್ನಡ ಸಂಘದ ಮೂಲಕ ಹೊರಬಂದಿವೆ. ಇಲ್ಲ ಪ್ರಕಟವಾದ ಪುಸ್ತಕಗಳ ಲೇಖಕರಲ್ಲಿ ರಂ. ಶ್ರೀ ಮುಗಳಿ, ಶ್ರೀರಂಗ, ಕ.ವೆಂ ರಾಜಗೋಪಾಲರಂಥ ಹಳಬರಿದ್ದಾರೆ. ರಾಘವೇಂದ್ರರಾವ್, ಶಿವ ಪ್ರಕಾಶ್, ಮಂಜುನಾಥ್ ಅವರಂತಹ ಹೊಸಬರಿದ್ದಾರೆ. ತಮ್ಮ ಹೆಸರು ಗುರುತಿಸಿ ಕೊಳ್ಳುತ್ತಿರುವ, ಪ್ರತಿಭಾಶಾಲಿಗಳಾದ, ಅನೇಕ ವಿದ್ಯಾರ್ಥಿಗಳಿದ್ದಾರೆ, ಕಾವ್ಯ,

ವಿಮರ್ಶೆ, ಕಥೆ, ನಾಟಕ, ಕಾದಂಬರಿ, ವಿಜ್ಞಾನ–ಹೀಗೆ ಹಲವು ಪ್ರಕಾರಗಳ ಕೃತಿಗಳು ಇಲ್ಲಿವೆ. ಜೊತೆಗೆ ಅನ್ಯಭಾಷಾ ಕೃತಿಗಳೂ ಇವೆ. ಈ ಸಂಘದ ಚಾಲಕ ಶಕ್ತಿಯಾಗಿರುವ ಜಿ. ಶ್ರೀನಿವಾಸರಾಜು ಅವರ ಕನಸುಗಾರಿಕೆ, ದೂರದೃಷ್ಟಿ, ಮಹತ್ವಾಕಾಂಕ್ಷೆ – ಎಲ್ಲಕ್ಕೂ ಹೆಚ್ಚಾಗಿ ನಿರ್ವ್ಯಾಜ ಸಂಸ್ಕೃತಿ ಪ್ರೀತಿಯನ್ನು ಈ ಪ್ರಕಟಣೆಗಳು ತೋರಿಸುವಂತಿವೆ. ಇಂಥ ಸಂಘ ಹೀಗೆ ಅರಳಲು ಅನುವು ಮಾಡಿಕೊಟ್ಟ ಕ್ರೈಸ್ಟ್ ಕಾಲೇಜಿನ ವ್ಯವಸ್ಥಾಪಕ ವರ್ಗ, ನಾಡಿಗೆ, ನಿಜಕ್ಕೂ ಶ್ಲಾಘನೀಯ ಮೇಲ್ಪಂಕ್ತಿ ಹಾಕಿಕೊಟ್ಟಿದೆ.

ಈಗ ಕನ್ನಡ ಸಂಘವು ತನ್ನ 50 ನೆಯ ಪ್ರಕಟಣೆಯಾಗಿ ಎ. ಎನ್. ಮೂರ್ತಿರಾಯರ ಸಮಗ್ರ ಲಲಿತ ಪ್ರಬಂಧಗಳನ್ನು ಹೊರತರುತ್ತಿರುವುದು ಅದರ ಘನತೆಗೆ ತಕ್ಕುದಾಗಿದೆ. ಕ್ರೈಸ್ಟ್ ಕಾಲೇಜ್ ಕನ್ನಡ ಸಂಘದ ಇತಿಹಾಸದಲ್ಲಿ ಮಾತ್ರವಲ್ಲ, ಕನ್ನಡ ಗ್ರಂಥ ಪ್ರಕಾಶನದ ಇತಿಹಾಸದಲ್ಲೂ, ಮೂರ್ತಿರಾಯರ ಸಮಗ್ರ ಪ್ರಬಂಧಗಳ ಪ್ರಕಟಣೆ ಒಂದು ಮಹತ್ವದ ಸಾಂಸ್ಕೃತಿಕ ಘಟನೆ ಎಂದು ನಾನು ದೃಢವಾಗಿ ನಂಬಿದ್ದೇನೆ. ಈ ಸಂದರ್ಭದಲ್ಲಿ, ಸಂಘಕ್ಕೆ ನನ್ನ ಹೃತ್ಪೂರ್ವಕ ಶುಭಾಶಯಗಳು.

ನರಹಳ್ಳಿ ಬಾಲಸುಬ್ರಹ್ಮಣ್ಯ

ನನಗೂ ಕ್ರೈಸ್ ಕಾಲೇಜು ಕನ್ನಡ ಸಂಘಕ್ಕೂ ಒಂದೂವರೆ ದಶಕಕ್ಕೂ ಹೆಚ್ಚು ಕಾಲದ ನಂಟು. ನಾನು ಆನರ್ಸ್ ವಿದ್ಯಾರ್ಥಿಯಾಗಿದ್ದಾಗಲೇ ಶ್ರೀನಿವಾಸರಾಜು ಅವರು ನನ್ನ ಗೆಳೆಯ ಲಕ್ಷ್ಮಣ ಕೊಡಸೆ ಅವರೊಟ್ಟಿಗೆ ಕನ್ನಡದಲ್ಲಿ ಕ್ರಿಸ್ತ ಸಂಬಂಧೀ ಕವಿತೆಗಳನ್ನು ಸಂಕಲಿಸುವ ಜವಾಬ್ದಾರಿಯನ್ನು ನಮಗೆ ವಹಿಸಿದರು. ಆ ದಿನಗಳಲ್ಲಿ ಕಿರಿಯರಾದ ನಮ್ಮ ಬಗ್ಗೆ ರಾಜು ಅವರು ಇಟ್ಟ ವಿಶ್ವಾಸ, ಭರವಸೆಯನ್ನು ನೆನಪಿಸಿಕೊಂಡರೆ ಈಗಲೂ ಮನಸ್ಸು ತುಂಬಿ ಬರುತ್ತದೆ. ನಾವು ಸಂಪಾದಿಸಿದ 'ಕ್ರಿಸ್ತಾಂಜಲಿ'– ಕವನ ಸಂಕಲನ ಕನ್ನಡ ಸಂಘದ ಎರಡನೆಯ ಪ್ರಕಟಣೆ; ನಮ್ಮ ಮೊದಲ ಕೃತಿ.

ಇಂದಿಗೂ ಕಿರಿಯರ ಬಗ್ಗೆ ರಾಜು ಅವರಿಗೆ ಅದೇ ವಿಶ್ವಾಸ. ಯುವಜನಾಂಗದ ಜೊತೆ ಪ್ರೀತಿಯ ಸಂಬಂಧ ಸ್ಥಾಪಿಸಿಕೊಂಡು ಅವರನ್ನು ಪ್ರೋತ್ಸಾಹಿಸುವ, ಅವರ ಪ್ರತಿಭಾ ವಿಕಾಸಕ್ಕೆ ಅಗತ್ಯ ಪರಿಸರ ಕಲ್ಪಿಸಿಕೊಡುವ ರಾಜು ಅವರ ಕೆಲಸ ಅನನ್ಯವಾದುದು. ಕಿರಿಯರ ಬಗೆಗಿನ ಈ ಪ್ರೀತಿ ವಿಶ್ವಾಸ ಭರವಸೆಯೇ–ಕ್ರೈಸ್ಟ್ ಕಾಲೇಜು ಕನ್ನಡ ಸಂಘದ ಶಕ್ತಿಯೆಂದು ನಾನು ಭಾವಿಸುತ್ತೇನೆ.

ಕನ್ನಡ ಸಂಘದ ಐವತ್ತನೆಯ ಪ್ರಕಟಣೆ – ಕನ್ನಡದ ಸಂದರ್ಭದಲ್ಲಿ ಒಂದು ವಿಶಿಷ್ಟ ದಾಖಲೆ. ನೂರಾರು ಪುಸ್ತಕಗಳನ್ನು ಪ್ರಕಟಿಸಿರುವ ಪ್ರಕಾಶಕರಿದ್ದಾರೆ ನಿಜ; ಆದರೆ ಕನ್ನಡ ಸಂಘದ ಕೆಲಸ ಕೇವಲ ಪ್ರಕಟನ ದಾಖಲೆಗೆ ಸಂಬಂಧಿಸಿದ್ದಲ್ಲ–ಪ್ರತಿಭಾ

ಶೋಧನೆಗೆ, ವಿಕಾಸಕ್ಕೆ, ಸಂಸ್ಕೃತಿಯ ಚಲನಶೀಲತೆಗೆ, ಜೀವಂತಿಕೆಗೆ ಸಂಬಂಧಿಸಿದ್ದು. ಕನ್ನಡ ಸಂಘ ನಿರಂತರವಾಗಿ ನಡೆಸಿಕೊಂಡು ಬರುತ್ತಿರುವ ಅನಕೃ ಸ್ಮಾರಕ ಪ್ರಬಂಧ ಸ್ಪರ್ಧೆ, ಬೇಂದ್ರೆ ಸ್ಮೃತಿ ಕವನ ಸ್ಪರ್ಧೆ – ಈ ಹಿನ್ನೆಲೆಯಲ್ಲಿ ಮಹತ್ವದ ಸಾರ್ಥಕ ಕೆಲಸ.

ರಾಜರತ್ನಂ ಪರಂಪರೆಯನ್ನು, ಸೆಂಟ್ರಲ್ ಕಾಲೇಜು ಕರ್ಣಾಟಕ ಸಂಘದ ಸತ್ಸಂಪ್ರದಾಯವನ್ನು ಅರ್ಥಪೂರ್ಣವಾಗಿ ಬೆಳೆಸುತ್ತಿರುವ ಕ್ರೈಸ್ಟ್ ಕಾಲೇಜು ಕನ್ನಡ ಸಂಘಕ್ಕೆ ಎಲ್ಲ ರೀತಿಯ ಯಶಸ್ಸು ದೊರಕಲಿ ಎಂದು ಪ್ರೀತಿಯಿಂದ ಹಾರೈಸುತ್ತೇನೆ.

ಎಚ್. ಎಸ್. ಮಾಧವರಾವ್

1973–75ರ ಅವಧಿಯ ಎರಡು ವರ್ಷಗಳ ಕಾಲ ಕ್ರೈಸ್ಟ್ ಕಾಲೇಜಿನಲ್ಲಿ ನಾನು ಕನ್ನಡ ಅಧ್ಯಾಪಕನಾಗಿದ್ದು, ಕನ್ನಡ ಸಂಘದ ಕಾರ್ಯಗಳನ್ನು ಹಲವಾರು ವರ್ಷಗಳಿಂದ ಹತ್ತಿರದಿಂದ ನೋಡುತ್ತಿದ್ದೇನೆ. ಇಷ್ಟು ಕಡಿಮೆ ಅವಧಿಯಲ್ಲಿ ಕಾಲೇಜಿನ ಕನ್ನಡ ಸಂಘವೊಂದು ಉತ್ತಮವಾದ ಐವತ್ತು ಪುಸ್ತಕಗಳನ್ನು ತಂದಿರುವುದು ಪ್ರಕಟಣ ಪ್ರಪಂಚದ ಆಶ್ಚರ್ಯಗಳಲ್ಲಿ ಒಂದು.

ನಾನು ಆಗತಾನೆ ಎಂ.ಎ. ಮುಗಿಸಿ ಕ್ರೈಸ್ಟ್ ಕಾಲೇಜಿಗೆ ಹೋಗುತ್ತಿದ್ದು ಅಲ್ಲಿನ ಕನ್ನಡೇತರ ವಾತಾವರಣ ದಿಗಿಲು ತರಿಸುತ್ತಿತ್ತು. ಆಫೀಸಿನ ಸಿಬ್ಬಂದಿ ಬಳಿ ಮಾತನಾಡ ಬೇಕಾದರೂ ಮೊದಲೆ ಇಂಗ್ಲಿಷ್ ವಾಕ್ಯಗಳನ್ನು ಸಿದ್ಧಪಡಿಸಿಕೊಂಡು ನಾಟಕದ ಪಾತ್ರ ದಂತೆ ಮಾತನಾಡಬೇಕಾಗಿದ್ದು ನನಗೆ ಬಹಳ ಮುಜುಗರವುಂಟುಮಾಡುತ್ತಿತ್ತು. ಇಂತಹ ವಾತಾವರಣದಲ್ಲಿ ಶ್ರೀನಿವಾಸರಾಜು ಕನ್ನಡ ಸಂಘದ ಕೆಲಸಗಳನ್ನು ಅತ್ಯಂತ ಉತ್ಸಾಹದಿಂದ ನಡೆಸುತ್ತಿರುವುದು ಅವರ ಕನ್ನಡ ಪ್ರೀತಿ ಕಂಡುಕೊಂಡ ಮಾರ್ಗ ಇರ ಬೇಕು. ರಾಜು ಅವರು ಕನ್ನಡ ಸಂಘದ ಕಾರ್ಯಕ್ರಮ ನಡೆಸಲು ತೋರುತ್ತಿದ್ದ ಶ್ರದ್ಧೆ, ಉತ್ಸಾಹ, ತಾಳ್ಮೆ ಅಪಾರವಾದದ್ದು. ವ್ಯವಸ್ಥಿತವಾಗಿ ಕಾರ್ಯಕ್ರಮವನ್ನು ರೂಪಿಸುತ್ತಿದ್ದ ರಾಜು ಅವರು ಸಿದ್ಧತೆಯ ಕೊನೆಯ ಹಂತವಾಗಿ ಗಂಧದ ಹಾರ ತರುತ್ತಿದ್ದದ್ದು ನನಗೆ ಮರೆಯಲಾಗದ ಸುವಾಸನೆಯಾಗಿದೆ. ಎಲ್ಲ ಕೆಲಸವನ್ನು ಅವರೇ ನಿರ್ವಹಿಸಿ, ಉದ್ದೇಶಪೂರ್ವಕವಾಗಿ ಒಂದು ಚಿಕ್ಕ ಕೆಲಸವನ್ನು ಬೇರೆಯವರಿಗೆ ವಹಿಸಿ 'ಸಲಹೆ–ಸಹಾಯ–ಸಹಕಾರ'ಗಳ ದೊಡ್ಡ ಪಟ್ಟಿ ಬೆಳೆಸುವುದು ರಾಜು ಅವರಿಗೆ ಬಹಳ ಸಂತೋಷದ ಸಂಗತಿ.

ಕನ್ನಡ ಸಂಘ ಉಪಯುಕ್ತ ಪುಸ್ತಕಗಳನ್ನು ಪ್ರಕಟಿಸುವುದರಲ್ಲಿ ತೋರಿಸುವ ಉತ್ಸಾಹದಲ್ಲಿ ಸ್ವಲ್ಪ ಭಾಗವನ್ನಾದರೂ ಮಾರಾಟದಲ್ಲಿ ತೋರಿಸಿದ್ದರೆ ಈ ವೇಳೆಗೆ ನೂರು ಪುಸ್ತಕಗಳು ಪ್ರಕಟವಾಗಿರುತ್ತಿತ್ತು. ಒಂದು ಪುಸ್ತಕ ಪ್ರಕಟವಾದ ತಕ್ಷಣ

ರಾಜು ಅವರಿಗೆ ಹೊಳೆಯುವ ತಕ್ಷಣದ ಯೋಜನೆ ಮತ್ತೊಂದು ಪುಸ್ತಕ ಪ್ರಕಟಿಸುವುದು. ಪುಸ್ತಕದ ಸಂಖ್ಯೆಯು ದಾಖಲೆಯಂತೆ ಆರ್ಥಿಕವಾಗಿ ನಷ್ಟ ಹೊಂದಿರುವ ಸಂಘವಾಗಿಯೂ ಕ್ರೈಸ್ಟ್ ಕಾಲೇಜ್ ಕನ್ನಡ ಸಂಘ ದಾಖಲೆ ಸ್ಥಾಪಿಸಿದೆ – ಅದು ಬಹಿರಂಗವಾಗದಿದ್ದರೂ ಹಲವಾರು ವರ್ಷಗಳಿಂದ ತಪ್ಪದೆ ನಡೆಸಿಕೊಂಡು ಬರುತ್ತಿರುವ ವಿದ್ಯಾರ್ಥಿ ವಿಕಾಸ ಪ್ರತಿಭೆಯ ಸ್ಪರ್ಧೆಯು ಸಾಕಷ್ಟು ವಿದ್ಯಾರ್ಥಿಗಳಿಗೆ ಸಂತೋಷ – ಪ್ರೋತ್ಸಾಹ ಕೊಟ್ಟಿದೆ. ಬೇಂದ್ರೆಯವರ ಜನ್ಮದಿನವನ್ನು ಕನ್ನಡ ಸಂಘ ಅರ್ಥಪೂರ್ಣವಾಗಿ ನಡೆಸಿಕೊಂಡು ಬಂದಿದೆ. ಅನ್ಯಭಾಷಾ ಕೃತಿಗಳ ಪ್ರಕಟಣೆ ಸಹ ಕನ್ನಡ ಸಂಘ ನಡೆಸಿರಬಹುದಾದ ಅಪರೂಪದ ಕೆಲಸ. ಎಲ್ಲವನ್ನು ಅಪನಂಬಿಕೆಯಿಂದ, ಸಿನಿಕತೆಯಿಂದ ನೋಡುವುದೆ ಸಹಜವೋ ಎನ್ನಿಸುವಂತಹ ಇಂತಹ ವಾತಾವರಣದಲ್ಲಿ ಕನ್ನಡ ಸಂಘದ ಸಾಧನೆ ಗಮನಾರ್ಹ.

7665.

ಬಿ. ಎಸ್. ರಘುನಾಥ್

ಶ್ರೇಷ್ಠ ವ್ಯಕ್ತಿಗಳು ಅದರಲ್ಲೂ ಸಮಾಜೋಪಯೋಗಿ ವ್ಯಕ್ತಿಗಳು ಪರರ ಹಿತಕ್ಕಾಗಿ ನಿಸ್ವಾರ್ಥವಾಗಿ ದುಡಿಯುತ್ತಾರೆ. ಹೀಗೆ ದುಡಿಯುವಾಗ ಉದ್ದೇಶವು ಎಷ್ಟು ಮುಖ್ಯವೋ ಅದನ್ನು ಅರ್ಥ ಮಾಡಿಕೊಂಡು ಅದಕ್ಕೆ ಪ್ರತ್ಯಕ್ಷ–ಪರೋಕ್ಷವಾಗಿ ಬೆಂಬಲ ನೀಡುವವರೂ ಮುಖ್ಯ. ಆಗ ಉದ್ದೇಶ ಸಫಲವಾಗುತ್ತದೆ. ಬೇಂದ್ರೆಯವರು ಒಂದು ಕಡೆ ಹೇಳುತ್ತಾರೆ. ನಾವು ಕನ್ನಡದಲ್ಲಿ ನವೋದಯ ಕಾವ್ಯ ಪ್ರಾರಂಭಮಾಡಿದಾಗ ಪರಿಸ್ಥಿತಿಯು ಅನುಕೂಲವಿತ್ತು. ಅದು ಕಾವ್ಯ ಜನಪ್ರಿಯವಾಗುವ ಹಾಗೆ ಮಾಡಿತು ಎಂಬ ಅರ್ಥದಲ್ಲಿ. ಇದರ ಅರ್ಥ ಸಹೃದಯರು, ರಸಿಕರು ಹೇರಳವಾಗಿದ್ದು ಕಾವ್ಯವನ್ನು ಸ್ವಾಗತಿಸುತ್ತಿದ್ದರು ಎಂದು. ಈ ದಿನಗಳಲ್ಲಿ ಸಾಹಿತ್ಯ ಆ ದಿನಗಳಷ್ಟು ಜನಪ್ರಿಯವಲ್ಲ. ನಿಜಕ್ಕೂ ಇಂದಿನ ಸಮಾಜದಲ್ಲಿ ಸಾಹಿತ್ಯಕ್ಕೆ ಸಿಕ್ಕುತ್ತಿರುವ ಪ್ರತಿಕ್ರಿಯೆ ತೀರಾ ಕಡಿಮೆ. ಇಂತಹ ಸನ್ನಿವೇಶದಲ್ಲಿ ಜನಪ್ರಿಯತೆ ನಿರೀಕ್ಷಿಸದೆ, ಎಲ್ಲಾ ತಮ್ಮ ವೇಳೆಯನ್ನು ಸಾಹಿತ್ಯಿಕ ಬೆಳವಣಿಗೆಗೆ ಮೀಸಲಾಗಿಡುವವರನ್ನು, ಹಾಗೆಯೇ ಅಂಥವರನ್ನು ಪ್ರೋತ್ಸಾಹಿಸುವವರನ್ನು ಸ್ತುತಿಸಬೇಕಾದುದು ಕರ್ತವ್ಯ. ಇಷ್ಟೆಲ್ಲಾ ಮಾತುಗಳು 'ಕ್ರೈಸ್ಟ್ ಕಾಲೇಜ್ ಕನ್ನಡ ಸಂಘ' ತರುತ್ತಿರುವ ಐವತ್ತನೇ ಪುಸ್ತಕದಂತಹ ಸಾಧನೆಯ ಹಿನ್ನೆಲೆಗೆ ಅನ್ವಯಿಸುವ ಮಾತುಗಳು. ಭರವಸೆ ಹುಟ್ಟಿಸುವ ಲೇಖಕರು, ಈಗಾಗಲೇ ಸಾಕಷ್ಟು ಹೆಸರಾಗಿರುವ ಲೇಖಕರು ವಿದ್ಯಾರ್ಥಿ ವಿದ್ಯಾರ್ಥಿನಿಯರು ಇವರುಗಳನ್ನು ತಮ್ಮ ಉದ್ದೇಶಕ್ಕೆ ಸೆಳೆದು ಪ್ರೋತ್ಸಾಹದ ನೀರೆರೆಯುತ್ತಿರುವ ಶ್ರೀ ಶ್ರೀನಿವಾಸರಾಜು ಅವರು ಇಷ್ಟಾದರೂ 'Miles to go before I sleep' ಎನ್ನುವ ಸಜ್ಜನರು. ಹಾಗೇ ಸಂದರ್ಭ ಬಂದರೆ ಒಬ್ಬಂಟಿಯಾಗಿಯೇ ಸಮುದ್ದೇಶಕ್ಕೆ ಹೋರಾಡುವ ಹಟ

ಉಳ್ಳವರು. ನಾನು ಕನ್ನಡ ಅಧ್ಯಾಪಕನಾಗಿ ಕ್ರೈಸ್ಟ್ ಕಾಲೇಜಿನಲ್ಲಿ ಎರಡು ಮೂರು ವರ್ಷಗಳು ಕೆಲಸ ಮಾಡಿದ್ದೇನೆ. 'ಕನ್ನಡ ಸಂಘ'ದ ಚಟುವಟಿಕೆಗಳಲ್ಲಿ ಪಾಲು ಗೊಂಡಿದ್ದೇನೆ ಎಂಬ ಸಂತೋಷ ನನ್ನದಾಗಿದೆ. ಅಂಥವರಿಗೆ ಬೆಂಬಲವಾಗಿರುವ ಕ್ರೈಸ್ಟ್ ಕಾಲೇಜ್ ಆಡಳಿತ ಮಂಡಳಿ ಇಂದು ಹೆಮ್ಮೆ ಪಡುವ ಮಟ್ಟಕ್ಕೆ ಕನ್ನಡ ಸಂಘ ಬೆಳೆದಿದೆ. ಇದರ ಉದ್ದೇಶ ಸಫಲವಾಗಲಿ ಇದಕ್ಕೆ ನೀರೆರೆದು ಪೋಷಿಸುವವರ ಸಂಖ್ಯೆ ಹೇರಳವಾಗಲಿ ಎಂದು ಹಾರೈಸುತ್ತೇನೆ.

ಎ. ಜಿ. ವಿಜಯರಾಘವನ್

ಯಾವುದೇ ಒಂದು ಸಂಘ ಸಂಸ್ಥೆಯಾಗಲಿ ಅದು ಜೀವಂತವಾಗಿದೆ ಎನ್ನುವುದಕ್ಕೆ ಅದರ ಚಟುವಟಿಕೆಗಳೇ ಸಾಕ್ಷಿ. ಈ ದೃಷ್ಟಿಯಿಂದ ಕ್ರೈಸ್ಟ್ ಕಾಲೇಜು ಕನ್ನಡ ಸಂಘ ಜೀವಂತಿಕೆಯನ್ನು ಉಳಿಸಿಕೊಂಡು ಬಂದಿರುವಂತಾದ್ದು. ಪ್ರತಿವರ್ಷವೂ ಪ್ರಾರಂಭ ಮತ್ತು ಮುಕ್ತಾಯ ಸಮಾರಂಭ ಎಂದು ಎರಡೇ ಕಾರ್ಯಕ್ರಮಗಳನ್ನು ನಡೆಸು ತ್ತಿರುವ ಅನೇಕ ಕಾಲೇಜು ಕನ್ನಡ ಸಂಘಗಳಿವೆ. ಆದರೆ ಕ್ರೈಸ್ಟ್ ಕಾಲೇಜು ಕನ್ನಡ ಸಂಘ ಪ್ರತಿವರ್ಷ ಇವೆರಡೂ ಸಮಾರಂಭಗಳನ್ನು ಯಾಂತ್ರಿಕವಾಗಿ ನಡೆಸದೆ, ಕಾಲೇಜಿ ನಲ್ಲಿ ಕನ್ನಡ ಸಂಘ ಸ್ಥಾಪನೆಯಾದಾಗ ಪ್ರಾರಂಭೋತ್ಸವವನ್ನು ನಡೆಸಿ, ತನ್ನ ಚಟುವಟಿಕೆಗಳನ್ನು ಅತ್ಯಂತ ಉತ್ಸಾಹದಿಂದ ಕ್ರಿಯಾತ್ಮಕವಾಗಿ ನಡೆಸುತ್ತಾ ಬಂದಿದೆ. ಈ ಸಂಘ ಮುಕ್ತಾಯ ಸಮಾರಂಭವನ್ನೇ ಆಚರಿಸದೆ ಚಿರಕಾಲವೂ ಜೀವಂತವಾಗಿರ ಲೆಂದು ಆಶಿಸುತ್ತೇನೆ.

ಕ್ರೈಸ್ಟ್ ಕಾಲೇಜು ನಾನು ಓದಿದ ಕಾಲೇಜು. ಆದ್ದರಿಂದ ನನಗೆ ಹೆಚ್ಚಿನ ಸಂತೋಷ. ಇವೆಲ್ಲಕ್ಕಿಂತಲೂ ಹೆಚ್ಚಾಗಿ ಕನ್ನಡವೇ ಬದುಕು, ಬದುಕೇ ಕನ್ನಡ ಎಂದು ಸದಾಕಾಲ ಕನ್ನಡ ಸಂಘಕ್ಕೋಸ್ಕರ ದುಡಿಯುತ್ತಿರುವ ವ್ಯಕ್ತಿ, ನನ್ನ ಗುರುಗಳಾದ ಶ್ರೀ ಜಿ. ಶ್ರೀನಿವಾಸರಾಜು ಅವರು. ನಾನು ಕಂಡಂತೆ ಕ್ರೈಸ್ಟ್ ಕಾಲೇಜಿನಲ್ಲಿ ಕನ್ನಡ ಸಂಘ ಎಂದರೆ ರಾಜು ; ರಾಜು ಎಂದರೆ ಕನ್ನಡ ಸಂಘ. ಸಂಘವು ಆರ್ಥಿಕ ಮುಗ್ಗಟ್ಟನ್ನು ಎದುರಿಸುತ್ತಿದ್ದರೂ ತಮ್ಮ ಯೋಚನೆ ಮತ್ತು ಯೋಜನೆಗಳ ಮೂಲಕ ಹಾಗೂ ಹೀಗೂ ಪ್ರಕಟಣೆಯ ಕಾರ್ಯವನ್ನು ನಿಲ್ಲಿಸದೇ ಪ್ರಕಟಿಸುತ್ತಾ ಬಂದು 50ನೇ ಪುಸ್ತಕವನ್ನು ಪ್ರಕಟಿಸುತ್ತಿರುವುದು ಅತ್ಯಂತ ಹೆಮ್ಮೆಯ ವಿಚಾರ. ಕನ್ನಡದ ಉದಯೋನ್ಮುಖ ಬರಹಗಾರರು ಇಂದು ಪ್ರಕಾಶಕರು ಸಿಗದೆ ತಮ್ಮ ಸೃಜನ ಶೀಲತೆ ಬೆಳಕು ಕಾಣದೆ ತತ್ತರಿಸುತ್ತಿರುವಾಗ ಈ ಕನ್ನಡ ಸಂಘ ಅತ್ಯಂತ ಪ್ರಯೋಜನ ಕಾರಿಯಾಗಿ ಇಂತಹ ಬರಹಗಾರರಿಗೆ ಸಹಾಯ ಮಾಡುವುದರಲ್ಲಿ ತನ್ನ ಕನ್ನಡದ ಪರಿಚಾರಿಕೆಯನ್ನು ನಿರ್ವಹಿಸುತ್ತಿದೆ.

ಕನ್ನಡ ಸಂಘದ ಬಹುಮಾನಿತರು

ಅಬ್ದುಲ್ ರಶೀದ್

ನನಗೆ ಕ್ರೈಸ್ಟ್ ಕಾಲೇಜ್ ಕನ್ನಡ ಸಂಘ ಅಂದರೆ ತುಂಬ ಇಷ್ಟ. ನಾಲ್ಕೈದು ವರ್ಷಗಳಿಂದ ಪ್ರತೀವರ್ಷ ಬೇಂದ್ರೆ ಹುಟ್ಟಿದ ದಿನದಂದು ನಾವೆಲ್ಲ ಗಂಟುಮೂಟೆ, ಜೊತೆಗೆ ಕವಿತೆ ಹೊತ್ತುಕೊಂಡು ಬೆಂಗಳೂರಿಗೆ ಹೋಗಿ ಬಹುಮಾನ ಪಡೆದು ಬರುತ್ತೇವೆ. ಒಂದು ರೀತಿಯ ರಾಜಾಶ್ರಯದ ಹಾಗೆ, ತಂದೆಯ ಪ್ರೀತಿಯಹಾಗೆ, ಆ ದಿನ ನಮ್ಮನ್ನು ಲಾಲಿಸಿ ಕಳಿಸುತ್ತದೆ. ಅಲ್ಲಿಂದು ಬರುವಾಗ ಜೊತೆಗೆ ಬಹುಮಾನ ಪಡೆದಿರುವ ಕವನಗಳ ಪುಸ್ತಕವನ್ನೂ ಊರಿಗೆ ತರುತ್ತೇವೆ. ನಮ್ಮ ಗೆಳೆಯರಿಗೆ, ಮನೆಗೆ, ಗುರುಗಳಿಗೆ ಹೆಮ್ಮೆಯಿಂದ ಅದನ್ನು ಹಂಚುತ್ತೇವೆ. ಇದು ಪ್ರತೀವರ್ಷ ಜನವರಿಯ ಕೊನೆಯಲ್ಲಿ ನಡೆಯುವ ಒಂದು ರೀತಿಯ ದೊಡ್ಡ ಹಬ್ಬದ ದಿವಸ. ನಾನಂತೂ ಆ ದಿನವನ್ನು ಕಾಯುತ್ತಿರುತ್ತೇನೆ.

ಜಿ. ಎನ್. ಮೋಹನ್

ಕ್ರೈಸ್ಟ್ ಕಾಲೇಜ್ ಕನ್ನಡ ಸಂಘ ಐವತ್ತನೆಯ ಪುಸ್ತಕಕ್ಕೆ ಸಜ್ಜಾಗುತ್ತಿದೆ ಎಂದು ಗೊತ್ತಾದಾಗ ಎಲ್ಲೋ ಮನ ರೆಕ್ಕೆ ಬಿಚ್ಚಿದ ಹಕ್ಕಿಯಾಗುತ್ತದೆ. ಕ್ರೈಸ್ಟ್ ಕಾಲೇಜ್‌ನ ಆ ಪುಸ್ತಕದ ಪುಟಗಳಲ್ಲೂ ನಾವು ನಮ್ಮನ್ನು ಎಲ್ಲಿಯೋ ತೊಡಗಿಸಿ ಕೊಂಡಿದ್ದೇವೆ ಎನ್ನುವಷ್ಟು ಇಂದಿನವರೆಗೂ ಕ್ರೈಸ್ಟ್ ಕಾಲೇಜ್‌ನ ಕನ್ನಡ ಸಂಘ ದೊಡನೆ ನಾವು ಬೆಸೆದುಹೋಗಿದ್ದೇವೆ.

ನನಗಿನ್ನೂ ನೆನಪಿದೆ. ಆಗತಾನೆ ನಿಜಲಿಂಗಪ್ಪ ಕಾಲೇಜಿನಲ್ಲಿ ಪಿ.ಯು.ಸಿ. ಓದುತ್ತಿದ್ದೆ. ಒಂದು ದಿನ ನನ್ನ ಅಣ್ಣ ನನ್ನ ಕೈಗೆ ಒಂದು ಪುಸ್ತಕ ತಂದಿತ್ತ. ನಾನು ಕಾಣರಿಯದ ಗೆಳೆಯ ಸಿ. ಪಿ. ರವಿಕುಮಾರ್ 'ಅವರು ಬೆಳೆಸಿದ ಗಿಡಗಳು' ಕವನ ಸಂಕಲನವನ್ನು ನನಗಾಗಿ ಕಳುಹಿಸಿದ್ದ. ಕವನಗಳನ್ನು ಓದುತ್ತಾ ಹೋದೆ. ಅವು ಅರೆಬರೆಯ ಕವನಗಳಲ್ಲ. ಎಲ್ಲೋ ಒಂದೆಡೆ ಸಾಣೆ ಹಿಡಿದು ನೀಟಾದ ಚಿತ್ರಗಳನ್ನು ಮೂಡಿಸಿದಂತಿತ್ತು. ಕ್ರೈಸ್ಟ್ ಕಾಲೇಜ್ ಆ ಕವಿ ಗೆಳೆಯರೆಲ್ಲರನ್ನೂ ಒಂದೆಡೆ ಸೇರಿಸಿ ಸಾಣೆ ಹಿಡಿದಿತ್ತು.

ಪಿ.ಯು.ಸಿ. ಮುಗಿಸಿ ಪದವಿಗಾಗಿ ನಾಟಕವನ್ನು ಆಯ್ದುಕೊಂಡಿದ್ದೆ. ಕ್ರೈಸ್ಟ್ ಕಾಲೇಜ್ ಪ್ರತೀ ಜನವರಿ 31ರಂದು ಕವನ ಸಂಕಲನ ಬಿಡುಗಡೆ ಇಟ್ಟುಕೊಳ್ಳುತ್ತಾರೆ ಎಂದು ಗೊತ್ತಿತ್ತು. ಲೆಕ್ಕ ಹಾಕಿದೆ. ಸ್ಪರ್ಧೆಯ ಪೂರ್ವ ತಯಾರಿಗೆ ಎಷ್ಟು ದಿನ ಬೇಕು. ಎರಡು ತಿಂಗಳು. ನವೆಂಬರ್‌ನಿಂದಲೇ ನಮ್ಮ ಕಾಲೇಜಿನ ನೋಟಿಸ್ ಬೋರ್ಡ್ ನೋಡುವ ಕೆಲಸ ನನ್ನದಾಯಿತು. ಕೊನೆಗೂ ಅಲ್ಲಿ ಅದು ಕಾಣಸಿಗಲೇ

ಇಲ್ಲ. ಆಗಾಗ ಕಬ್ಬನ್ ಪಾರ್ಕಿನ ಜೊತೆಗೆ ಅಲ್ಲಿನ ಲೈಬ್ರರಿಗೂ ಭೇಟಿ ಕೊಡುವ ಹವ್ಯಾಸ ಇತ್ತು. ಆ ದಿನ ಲೈಬ್ರರಿಗೆ ಯಾವುದೋ ರಜೆ. ಗೊತ್ತಿಲ್ಲದೇ ಹೋಗಿದ್ದೆ. ರಜ ಏಕಿರಬಹುದು ಎಂಬ ಕುತೂಹಲದಿಂದ ನೋಟಿಸ್ ಬೋರ್ಡ್ ನೋಡಿದೆ. ಅಲ್ಲಿ ಅಂತೂ ನನಗೆ ಬೇಕಿದ್ದ ಪ್ರವೇಶ ಸಿಕ್ಕಿಬಿಟ್ಟಿತು.

ಜನವರಿ 31.

ನಾನೂ ಆಯ್ಕೆಯಾಗಿಬಿಟ್ಟಿದ್ದೆ. ಬೆಂಗಳೂರು ಎಂಬ ನಗರಿಯಲ್ಲಿ ಅದು ನನಗೆ ಮೊದಲು ಸಿಕ್ಕ ಪದಕ. 'ಮುಗ್ಗುಲಾಗದ ಮೌನಕ್ಕೆ ಒಂದಿಷ್ಟು ಪ್ರಶ್ನೆಗಳು' ನನ್ನ ನೋವಿನ ಹಲವು ಸಾಲುಗಳು ನನಗೇ ಗಂಭೀರವಾಗಿ ಕಾಡತೊಡಗಿತ್ತು. ಅಂದಿನಿಂದ ನಾನು ಎಲ್ಲಾ ಜನವರಿ 31ನ್ನು ಕ್ರೈಸ್ಟ್ ಕಾಲೇಜಿನಲ್ಲಿಯೇ ಕಳೆದಿದ್ದೇನೆ ಎಂಬುದು ಚೆನ್ನಾಗಿ ನೆನಪಿದೆ. ಕ್ರೈಸ್ಟ್ ಕಾಲೇಜ್ ಒಂದು ರೀತಿಯಲ್ಲಿ ಹಲವು ರೆಕ್ಕೆಯ ಹಕ್ಕಿ. (ನನ್ನ ಕವನದ ಹೆಸರೂ ಅದೇ) ಮೇಷ್ಟ್ರು ಶ್ರೀನಿವಾಸರಾಜುರವರು ಏನೆಲ್ಲಾ ಮಾಡಬಲ್ಲರು ಎಂಬುದು ಎಲ್ಲರಿಗೂ ಗೊತ್ತಿದೆ. ಸ್ಕೂಟರ್ ಹತ್ತಿ ಚಾಮರಾಜ ಪೇಟೆಯ ಬೆಂಗಳೂರು ಹೈಸ್ಕೂಲ್‌ನ ಹಿಂದೆ ಇರುವ ಪುಟ್ಟ ಹೋಟೆಲ್‌ನಲ್ಲಿ ಇಡ್ಲಿ ತಿಂದು ಇಳಾಗೆ, ಮುನಿಧರ್ಮಯ್ಯನವರ ಪ್ರೆಸ್ಸಿಗೆ ಭೇಟಿ ನೀಡಿ ಕವನಗಳ ತಪ್ಪುಗಳಿಗೆ ಕಾಟು ಹೊಡೆದು ನೀಟು ಗೀಟು ಹಾಕಿದ್ದಾರೆ. ಅವರ ಈ ಕಾಟುಗಳ ಮೂಸೆಯಲ್ಲಿ ನನ್ನ 'ಮುಗ್ಗುಲಾಗದ ಮೌನ...', 'ವಿದಾಯ', 'ನೂಪುರ', 'ಸೋನೆ ಮಳೆಯ ಸಂಜೆ', 'ಓಲಗದ ಮರೆಯಲ್ಲಿ' ಕವನಗಳು ಸಿಕ್ಕಿವೆ.

ಕ್ರೈಸ್ಟ್ ಕಾಲೇಜಿನಲ್ಲಿ ನಾನು ಹಲವು ಗೆಳೆಯರನ್ನು ಕೂಡಿ ಕಳೆದಿದ್ದೇನೆ. ಹಲವು ಗೆಳೆಯರು ಸಿಕ್ಕಿದ್ದಾರೆ. ರಾಜು ನಮ್ಮ ಗೆಳೆಯರ ತೆಕ್ಕೆಗೆ ಧಾರವಾಡದ ವಕ್ಕುಂದರರನ್ನು, ತುಮಕೂರಿನ ಗುರುದತ್, ಬೆಂಗಳೂರಿನ ಬಿ. ಎಸ್. ಗಾಯಿತ್ರಿ, ಶಿವಮೊಗ್ಗದ ಹೇಮಾ ಶಿರವಂತೆ ಅವರುಗಳನ್ನು ಸೇರಿಸಿದ್ದಾರೆ.

ಕನ್ನಡ ಸಂಘದೊಡನೆ ಕೆಲಸ ಮಾಡುವುದು ನಮಗೆ ಹೆಮ್ಮೆಯ ವಿಷಯ. ಗೆಳೆಯ ಎಲ್ಸಿ ತನ್ನ ವಿದ್ಯಾರ್ಥಿ ಜೀವನ ಮುಗಿಸಿದಾಗ 'ಇಳಾ'ದಲ್ಲಿ ಕನ್ನಡ ಸಂಘದ ನಮ್ಮ ಕವನಗಳಿಗೆ ಕರಡು ತಿದ್ದಿದ್ದಾನೆ. ಬುರ್ಖಾ ಬಗ್ಗೆ ಹೆಚ್ಚು ಬರೆಯುತ್ತಿದ್ದ ನಟರಾಜ್ ಹುಳಿಯಾರ್, ಮಾದಾಪುರದ ಅಬ್ದುಲ್ ರಷೀದ್ ಪ್ರಜಾವಾಣಿಯಲ್ಲಿ ಕಥೆಗಾಗಿ ಪ್ರಥಮ ಬಹುಮಾನಗಳನ್ನು ಗಿಟ್ಟಿಸಿದ್ದಾರೆ. ಇವರ್‍ಯಾರೂ ಕನ್ನಡ ಸಂಘದಿಂದ ಆಚೆ ಹೋದ ನೆನಪಿಲ್ಲ.

'ಮುಗ್ಗುಲಾಗದ ಮೌನ .. ದಿಂದ ಪಲ್ಲಕ್ಕಿ ಹೊರಿರೋ ಪಾಣಿಗ್ರಹಣಕ್ಕೆ' ಎಂಬ ದೀರ್ಘ ಕವನದವರೆಗೆ ಕ್ರೈಸ್ಟ್ ಕಾಲೇಜ್ ನನ್ನಲ್ಲಿ ಹುಮ್ಮಸ್ಸು ಹುಟ್ಟು ಹಾಕಿದೆ.

ಹಾಂ ಪಾಣಿಗ್ರಹಣದವರೆಗೂ....

ಯಾಕೆಂದರೆ ನನ್ನ ಪಾಣಿಗ್ರಹಣಕ್ಕೆ ಹುಡುಗಿ ಸಿಕ್ಕಿದ್ದೂ ಕ್ರೈಸ್ಟ್ ಕಾಲೇಜಿ

ನಲ್ಲಿಯೇ. ಅ.ನ.ಕೃ. ಪ್ರಬಂಧ ಸ್ಪರ್ಧೆಯಲ್ಲಿ ಬಹುಮಾನ ಪಡೆಯಲು ತುಮಕೂರಿನಿಂದ ಬಂದ ಹುಡುಗಿಯನ್ನು ಕಂಗ್ರಾಜುಲೇಟ್ ಮಾಡುವ ನೆವದಲ್ಲಿ ಹೋಗಿ ಬಲಿಗೆ ಬಿದ್ದೆ. ನಂತರ ಈ ಸಂಬಂಧ ಜನ ನನಗೆ ಕಂಗ್ರಾಜುಲೇಷನ್ಸ್ ಹೇಳಿದ್ದಾರೆ.

ಹೀಗೆ....ಮೌನದಿಂದ ನಿನಾದದವರೆಗೂ, ಕವನದಿಂದ ಪಾಣಿಗ್ರಹದವರೆಗೂ ಪತ್ತು ಹಲವು ರೀತಿಯಲ್ಲಿ ಕ್ರೈಸ್ಟ್ ಕಾಲೆಜ್ ಕನ್ನಡ ಸಂಘ, ಶ್ರೀನಿವಾಸರಾಜು ಹಾಗೆಯೇ ಆಗಸ್ಟಿನ್ ಜೋಸೆಫ್ ಹಚ್ಚ ಹಸುರಾಗಿದ್ದಾರೆ.

ನಟರಾಜ್ ಹುಳಿಯಾರ್

ನನಗಿನ್ನೂ ಚೆನ್ನಾಗಿ ನೆನಪಿದೆ. ನಾಲ್ಕೈದು ವರ್ಷದ ಹಿಂದಿನ ಮಾತು. ತಿಪಟೂರಿನಲ್ಲಿ ಬಿ.ಎ. ಓದುತ್ತಿದ್ದೆ. ನಿಮ್ಮ ಕ್ರೈಸ್ಟ್ ಕಾಲೇಜಿನ ಕನ್ನಡ ಸಂಘದ ಲೇಖನ ಸ್ಪರ್ಧೆಯಲ್ಲಿ ನನಗೊಂದು ಬಹುಮಾನ ಬಂದಿತ್ತು. ಆ ದಿವಸಗಳಲ್ಲಿ ನಾನು ಬಹುವಾಗಿ ಹಚ್ಚಿಕೊಂಡಿದ್ದ ಮತಾಂತರ ಕುರಿತ ಲೇಖನ ಅದು. ಹಳ್ಳಿಗಾಡಿನ ಕಾಲೇಜುಗಳಲ್ಲಿ ಅದೇ ಆಗ ಬರೆಯುವುದನ್ನು ಕುದುರಿಸಿಕೊಳ್ಳಹೊರಡುತ್ತಿರುವ ಹುಡುಗರಿಗಾಗಲೀ, ಹುಡುಗಿಯರಿಗಾಗಲೀ ಇಂಥ ಸ್ಪರ್ಧೆಗಳು, ಇವುಗಳ ಬಹುಮಾನಗಳು ತರುವಂಥ ಸಡಗರ. ಆತ್ಮವಿಶ್ವಾಸವಾಗಲೀ, ಇಂಥ ತಮ್ಮ ಬರಹಗಳು ಪ್ರಿಂಟಿನಲ್ಲಿ ಕಂಡು ಉಕ್ಕುವ ಬರವಣಿಗೆಯ ಮೊದಲ ದಿನಗಳ ಸಂಭ್ರಮವಾಗಲೀ ಎಷ್ಟೊಂದು ಅಲ್ಲವ ! ಯಾವುದೇ ಬರೆಯ ಹೊರಡುವವನ ಬದುಕಲ್ಲಿ ಇವು ಕೂಡ ಮುಖ್ಯವಾದ ಗಳಿಗೆಗಳು ಅಂತ ನನಗನಿಸುತ್ತದೆ...ಆಮೇಲೆ ನನ್ನ ಪದ್ಯಗಳೂ ಕೂಡ ಈ ಕನ್ನಡ ಸಂಘದಿಂದಲೇ ಪ್ರತಿವರ್ಷ ಅಚ್ಚಾಗತೊಡಗಿದವು...ನಾನೊಬ್ಬ ಕವಿಯೆಂಬ ಭ್ರಮೆಯೂ ವಿಶ್ವಾಸವೂ ನನ್ನೊಳಗೆ ಹರಡಿಕೊಳ್ಳತೊಡಗಿದವು.

ಹಾಗೆ ನೋಡಿದರೆ ಈ ನನ್ನ ಪೀಳಿಗೆಯಲ್ಲಿ ಕಣ್ಣಿಟ್ಟು ನೋಡಬೇಕಾದಂಥ ಕವಿಗಳೆಲ್ಲ ಈ ಕನ್ನಡ ಸಂಘದ ಆಂಥಾಲಜಿಗಳಲ್ಲೆ ಸಿಕ್ಕಿದ್ದು. ರಶೀದ, ಎಲ್ಸಿ ನಾಗರಾಜು, ಮೋಹನ, ಗುರುದತ್, ಮಮ್ತಾ ಸಾಗರ, ಗಾಯತ್ರಿ...ಇನ್ನೂ ಹೀಗೆ ಎಷ್ಟೊಂದು ಎಳೆಯ ದನಿಗಳು, 'ಫ್ರೆಶ್' ಅನಿಸುವಂಥ ಕೊರಳುಗಳು ! ಈ ಹೊತ್ತಿನ ಮುಖ್ಯ ಕವಿಗಳಾದ ಶಿವಪ್ರಕಾಶ್, ಮಂಜುನಾಥ ಮೊದಲಾದವರ ಸಂಕಲನಗಳನ್ನೂ ನಿಮ್ಮ ಸಂಘದ ಪ್ರಕಾಶನದಲ್ಲೇ ಓದುತ್ತೇನೆ. ಎಷ್ಟೋ ಸಲ ಅನಿಸುತ್ತೆ— ನೀವು ಪ್ರತಿವರ್ಷ ತರುವ ಕವನಗಳ ಆಂಥಾಲಜಿಗಳನ್ನು ತಿರುವಿಹಾಕಿದರೆ ಸಾಕು ಈ ದಶಕದ ಹುಡುಗ, ಹುಡುಗಿಯರ ಕನಸು, ತಲ್ಲಣ, ಯಾತನೆ, ಖುಷಿಗಳ ಹಲವಾರು ಮುಖಗಳು ಮತ್ತು ನವ್ಯೋತ್ತರ ಕನ್ನಡ ಕಾವ್ಯ ಹಿಡಿದಂಥ ದಿಕ್ಕುಗಳು ಕೂಡ

ಗೋಚರವಾಗತೊಡಗುತ್ತವೆ. ಕಡೆಯ ಪಕ್ಷ ಎಳೆಯ ಲೇಖಕರ ದೃಷ್ಟಿಯಿಂದ ತುಂಬ ಮಹತ್ತರವಾದ ಸಂಕಲನಗಳನ್ನು ವರ್ಷವರ್ಷ ತರುವುದರ ಹಿಂದೆ ಆಬ್ಬರವಿಲ್ಲದೆ ತೊಡಗಿಸಿಕೊಂಡ ಮನಸ್ಸು ಯಾರದೆಂಬುದು ಬರಿ ನನಗಷ್ಟೇ ಏನು, ಎಲ್ಲರಿಗೂ ಗೊತ್ತು...

...ಈ ನನ್ನ ಅನುಭವಗಳೇ ನನ್ನ ವಾರಿಗೆಯ ಎಷ್ಟೋ ಪಡ್ಡೆಗಳ ಅನುಭವ ಗಳೂ ಆಗಿರುವುದರಿಂದ ಹೀಗೆ ಪರ್ಸನಲ್ಲಾಗಿ ಬರೆದೆ...

ಗಾಯಿತ್ರಿ ಬಿ. ಎಸ್.

ಇವತ್ತು ಯಾರಾದರೂ ಮೆಚ್ಚುಗೆಯಿಂದ ನನ್ನದೊಂದು ಪದ್ಯವನ್ನು "ಚೆನ್ನಾ ಗಿದೆ" ಎಂದರೆ, ನಾನು ಮೊದಲು ನೆನಪಿಸಿಕೊಳ್ಳುವುದು ಆ ಒಂದು ಸ್ಪರ್ಧೆ, ಅದೊಂದು ಅವಕಾಶ, ಅದೋದು ಸಂಘ–ಕನ್ನಡ ಸಂಘ, ಕ್ರೈಸ್ಟ್ ಕಾಲೇಜ್.

ನನ್ನ ಮೊದಲ ಕವನ ಪ್ರಕಟವಾದದ್ದೇ ಕ್ರೈಸ್ಟ್ ಕಾಲೇಜ್ ಕನ್ನಡ ಸಂಘದ "ದ. ರಾ. ಬೇಂದ್ರೆ ಸ್ಮೃತಿ ಅಂತರ ಕಾಲೇಜು ವಿದ್ಯಾರ್ಥಿ ಕವನ ಸ್ಪರ್ಧೆ"ಯಲ್ಲಿ ಬಹು ಮಾನ ಪಡೆದಾಗ. ಯಾವ ಹಿರಿಯ ಕವಿಯನ್ನೇ ಕೇಳಿ ಬೇಕಾದರೆ, ತಮ್ಮ ಕವನ ವನ್ನು ಮೊದಲು ಬೆಳಕಿಗೆ ತಂದ ಸಂಸ್ಥೆಗೆ ಅವರೆಂತಹ ಆತ್ಮೀಯ ಬಂಧವನ್ನು ಹೊಂದಿರುತ್ತಾರೆಂಬುದಾಗಿ ! ಮಾತಿನಾಚೆಗೂ, ಲೇಖನದಾಚೆಗೂ ಹೊಮ್ಮುವ ಅಪ್ಯಾಯಮಾನತೆಯನ್ನು 'ಅಭಿಪ್ರಾಯ' ವೆಂದಷ್ಟೇ ನಾನು ಕರೆಯುವುದಿಲ್ಲ.

ಬರೆಯುವವರು ಬಹಳಷ್ಟು ಮಂದಿ, ನನ್ನಂತೆ ಈ ಕೃಷಿಯಲ್ಲಿ ಕೈ ಹಾಕಿರು ವವರಲ್ಲಿ ನಂಬಲಾರದಂತಹ ತೀಕ್ಷ್ಣ ಸ್ಪರ್ಧೆ ಇದೆ. ಸ್ಪರ್ಧೆ ಒಳ್ಳೆಯದು, ಅದು ಒಳ್ಳೆಯ ಸ್ಪರ್ಧೆಯಾಗಿದ್ದರೆ ಮಾತ್ರ. ಹೊಸದಾಗಿ ಬರೆಯುವವರನ್ನು ಕಂಡರೆ ಈಗಾ ಗಲೇ 'ನೆಲೆ' ನಿಂತಿರುವವರ ದೃಷ್ಟಿಯಲ್ಲಿ ತೀರಾ 'ಅಪಕ್ವ'ವೆಂದೆನಿಸುತ್ತದೆ. ಇದು ಬಹಳ ಸಹಜವಿರಬಹುದು. ಆದರೆ ಅವರ ಗಟ್ಟಿತನವನ್ನು ಹೊರತೆಗೆಯುವ ಒಂದೇ ಒಂದು ಪ್ರಾಮಾಣಿಕ ಪ್ರಯತ್ನ ಎಷ್ಟೊಂದು ಎಳೆ ಪ್ರತಿಭೆಗಳನ್ನು ಗುರುತಿಸ ಬಲ್ಲದು !

ಆ ನಂತರ ದಿನಗಳಲ್ಲಿ ನನ್ನ ಬಹಳಷ್ಟು ಕವನ, ಲೇಖನ, ಕತೆಗಳು ವಿವಿಧ ಪತ್ರಿಕೆಗಳಲ್ಲಿ ಪ್ರಕಟವಾಗಿವೆ; ಹಲವಾರು ಸ್ಪರ್ಧೆಗಳಲ್ಲಿ ಬಹುಮಾನ ಪಡೆದಿವೆ. ಆದರೆ, ಪದವಿಯಲ್ಲಿದ್ದ ಮೂರು ವರ್ಷಗಳಲ್ಲೂ ಸತತವಾಗಿ ಪಡೆದ ಕ್ರೈಸ್ಟ್ ಕಾಲೇಜ್ ಬಹುಮಾನ ನನ್ನ ಆಸಕ್ತಿಯನ್ನು, ನನ್ನ ಬದುಕಿನ 'ಕೆರಿಯಾರ್' ಅನ್ನೇ ಬದಲಿಸು ವಷ್ಟರ ಮಟ್ಟಿಗೆ ಪ್ರಭಾವ ಬೀರಿದೆ ಎಂದರೆ ಆಶ್ಚರ್ಯವಲ್ಲ. ಎಲ್ಲಕ್ಕಿಂತ ಹೆಚ್ಚಾಗಿ ನನಗೆ ಎಷ್ಟೊಂದು ನೋವು ನಲಿವುಗಳನ್ನು ತಂದುಕೊಟ್ಟ ಹಲವಾರು ಆತ್ಮೀಯ

ಗೆಳೆಯ ಗೆಳತಿಯರನ್ನು ಪರಿಚಯಿಸಿರುವ ಈ ಸಂಘ ನನ್ನ ವೈಯಕ್ತಿಕ ಬದುಕಿನಲ್ಲೂ ತನ್ನದೇ ಆದ ಸ್ಥಾನವನ್ನು ಪಡೆದಿದೆ.

ಕ್ರೈಸ್ಟ್ ಕಾಲೇಜ್ ಕನ್ನಡ ಸಂಘ ಪ್ರಕಟಿಸಿರುವ ಅನೇಕ ಕವನ ಸಂಕಲನಗಳು, ವಿಮರ್ಶಾತ್ಮಕ ಪುಸ್ತಕಗಳು ಸಾಹಿತ್ಯದ ವಿದ್ಯಾರ್ಥಿಯಾದ ನನ್ನ ದೃಷ್ಟಿಯಲ್ಲಂತೂ ತೀರಾ ಉಪಯೋಗಿಯಾದವು. ಈ ಅನನ್ಯ ಸಂಘದ ಹಿಂದೆ ನಿಸ್ವಾರ್ಥದಿಂದ ದುಡಿಯುತ್ತಿರುವ ವ್ಯಕ್ತಿಗಳಿಗೆ ನನ್ನಂತೆಯೇ ಸಂಘದಿಂದ ಪರಿಚಿತರಾಗಿ ಇಂದು ಸ್ವತಂತ್ರ ಬರಹಗಾರರಾಗಿರುವ ಎಲ್ಲ ಯುವ ಪ್ರತಿಭೆಗಳ ಅಭಿನಂದನೆಗಳು ಸಲ್ಲುತ್ತವೆ. ಹೀಗೇ ಬೆಳೆಯುತ್ತಿರಲೆಂಬ ಹಾರೈಕೆಯೂ ಸಹ.

ಯಾರದೋ ಕಚಡಾ ರಾಜಕೀಯದಿಂದ, ಸ್ವಾರ್ಥತೆಯಿಂದ ಕೊಳೆಯುತ್ತಿರುವ ; ಸಾಹಿತ್ಯ ಕ್ಷೇತ್ರದಲ್ಲೂ ಸಲ್ಲದ ದಂಧೆ ನಡೆಸುವವರ ಮಧ್ಯೆಯೂ 'ಬನ್ನಿ ಪ್ರತಿಭೆಗಳೇ ಬನ್ನಿ' ಎಂದು ಕರೆಯುತ್ತಲೋ, ಸದ್ದು ಗದ್ದಲವಿಲ್ಲದೆ 'ಮಿಣಿ ಮಿಣಿ ಬೆಳಕು' ಹಿಡಿದು ದಾರಿ ತೋರುತ್ತಲೋ ಜೀವಂತವಾಗಿರುವ ಕ್ರೈಸ್ಟ್ ಕಾಲೇಜ್‌ನ ಕನ್ನಡ ಸಂಘ ನಾವಿನ್ನೂ ಜೀವಂತವಾಗಿರುವುದರ ಸಂಕೇತವೇ ಸರಿ.

ಚಿಂತಾಮಣಿ ಕೊಡ್ಲೆಕೆರೆ

ನಾನು ಧಾರವಾಡದಲ್ಲಿ ಓದುತ್ತಿದ್ದ ದಿನಗಳು ಅವು. ಒಂದು ದಿನ ಪ್ರಜಾವಾಣಿಯಲ್ಲಿ ಕ್ರೈಸ್ಟ್ ಕಾಲೇಜ್ ಕನ್ನಡ ಸಂಘವು ಲೇಖನ ಹಾಗೂ ಕವನ ಸ್ಪರ್ಧೆಗಳನ್ನು ಏರ್ಪಡಿಸಿರುವುದಾಗಿಯೂ, ಹೆಚ್ಚಿನ ವಿವರಗಳಿಗೆ ಕಾಲೇಜ್ ವಿಳಾಸವನ್ನು ಸಂಪರ್ಕಿಸ ಬಹುದೆಂದೂ ಪ್ರಕಟಣೆಯನ್ನು ಓದಿದೆ. ಹಾಗೇ ಕನ್ನಡ ಸಂಘವನ್ನು ಸಂಪರ್ಕಿಸಿ ವಿವರಗಳನ್ನು ಪಡೆದೆ.

ಆ ದಿನಗಳು ಚೆನ್ನಾಗಿ ನೆನಪಿವೆ. ವಿಷಮಶೀತ-ಜ್ವರದ ಕ್ರೂರ ಅನುಭವ ವನ್ನು ಪಡೆದು ಬದುಕಿಗೆ ಹಿಂತಿರುಗಿದ, ಗಾಢ ದುಃಖವನ್ನು ಮೈತುಂಬ ಧರಿಸಿದ ನನಗೆ ಏನಾದರೊಂದು outlet ಬೇಕಾಗಿತ್ತು. ನನ್ನ ಜ್ವರದ ಅನುಭವದಲ್ಲಿ ಬರೆದ 'ಬದುಕು ಬೇಡ ಅನ್ನಿಸಲಿಲ್ಲ' ಹಾಗೂ ಆ ಹಿಂದಿನ ವರ್ಷ ಬೇಂದ್ರೆಯವರು ನಿಧನರಾದ ಸಂದರ್ಭದಲ್ಲಿ ಬರೆದ 'ಈಗ ಅವರಿಲ್ಲ' ಇವೆರಡೂ ಕವನ ಸ್ಪರ್ಧೆಗೆ ಕಳುಹಿಸಲು ನನ್ನ ಪ್ರೀತಿಯ ಆಯ್ಕೆಗಳಾದವು. ವಿಶ್ವವಿದ್ಯಾಲಯದ ಲೈಬ್ರರಿಗೆ ಹೋಗಿ ತಾಸೆರಡು ತಾಸು ಹುಡುಕಾಡಿ, 'ಕರ್ವಾಲೋ' ಸಂಪಾದಿಸಿ, ಒಂದೇ ಉಸಿರಿಗೆ ಓದಿ, ಒಂದೆರಡು ದಿನಗಳಲ್ಲೇ ಸ್ಪರ್ಧೆಗೆ ಲೇಖನವನ್ನು ಸಿದ್ಧಪಡಿಸಿದೆ.

ಇವೆಲ್ಲವೂ ಸ್ಪರ್ಧೆಗಳಲ್ಲಿ ಆಯ್ಕೆಯಾದವು. ತೀರ್ಪುಗಾರರಾದ ಶ್ರೀ ಹೆಚ್. ಎಸ್. ವೆಂಕಟೇಶಮೂರ್ತಿರಾಯರು ಕವಿತೆಗಳ ಬಗೆಗೆ ಕೆಲವು ಒಳ್ಳೆಯ ಮಾತುಗಳನ್ನು

ಬರೆದರು. 'ಈಗ ಅವರಿಲ್ಲ' ಕವಿತೆಯು ಒಂದು ಸಾಲು ಬಹುಮಾನಿತ ಕವನಗಳ ಸಂಕಲನದ ಶೀರ್ಷಿಕೆಯಾಯಿತು... ಇವುಗಳ ಬಿಡುಗಡೆ, ಬಹುಮಾನ ವಿತರಣೆ ಸಮಾರಂಭಕ್ಕೆ ಬೆಂಗಳೂರಿಗೆ ಬರಮಾಡಿದ್ದ ನನಗೆ, ಶ್ರೀ ಜಿ. ಶ್ರೀನಿವಾಸರಾಜು ಅವರು ಧಾರವಾಡಕ್ಕೆ ಬಂದಾಗ, ಹಲವಾರು ಒಳ್ಳೆಯ ಸುಂದರ ಪುಸ್ತಕಗಳ ಬಹುಮಾನದ ಆತ್ಮೀಯ ಹೊರೆಯನ್ನು ಒಪ್ಪಿಸಿ ಹೋದರು.

ಬದುಕು ನನಗೆ ಇಷ್ಟವಾದದ್ದು ಹೀಗೆ. ಕನ್ನಡಸಂಘದ ಹಾಗೂ ನನ್ನ ಪ್ರೀತಿಯ ಸಂಬಂಧ ನಾನು ಕೇರಳದಲ್ಲಿದ್ದಾಗಲೂ ಕಡಿಮೆಯಾಗಲಿಲ್ಲ. ಕಳೆದ ವರ್ಷ ಕವನ ಸ್ಪರ್ಧೆಗೆ ಬಂದಿದ್ದ ಕವಿತೆಗಳನ್ನು ಆಯ್ಕೆಗಾಗಿ ಓದುವ ಸದವಕಾಶ ನನ್ನದಾಗಿತ್ತು. ಹೊಸ ಗಾಳಿ, ಹೊಸ ನೀರಿಗೆ ಮೈ ಒಡ್ಡಿಕೊಳ್ಳುವಂತ ವಿಶಿಷ್ಟ ಅನುಭವ ಅದು.

ಕನ್ನಡದ ಸಾಹಿತ್ಯ ಸಂದರ್ಭದಲ್ಲಿ ತುಂಬ ಮಹತ್ತರ. ಅನೇಕ ಕೃತಿಗಳನ್ನು ಕನ್ನಡ ಸಂಘ ಪ್ರಕಟಿಸಿದೆ. ಸತ್ವ ಹಾಗೂ ಅಚ್ಚುಕಟ್ಟಾದ ಮುದ್ರಣಗಳಿಂದ ಕನ್ನಡ ಸಂಘದ ಪ್ರಕಟನೆಗಳು ಹೆಸರು ಪಡೆದಿವೆ. ಹೂವಿನ ಜನತೆಯಲ್ಲಿ ಪರಿಮಳವೂ ಸಂಚರಿಸುವಂತೆ ಕನ್ನಡ ಸಂಘದ ಜತೆಗೆ ಗುಣಗೌರವ ಹಾಗೂ ಕಾವ್ಯ ಪ್ರೀತಿ ಸಹಜ ಒಳ ಉಸಿರಾಗಿದೆ. ಇಂಥ ಕನ್ನಡ ಸಘಂದೊಡನೆ ಸಂಬಂಧ ಗುರುತಿಸಿಕೊಳ್ಳುವುದು ನನಗೆ ಎಂದಿಗೂ ಸಂತೋಷದ ವಿಷಯವಾಗಿದೆ.

ವಿಜಯ ಧಾರವಾಡ

ಕ್ರೈಸ್ಟ್ ಕಾಲೇಜು ಅಲ್ಲಿಯ ಕನ್ನಡ ಸಂಘ ನನಗೆ ಪರಿಚಯವಾದದ್ದು ನಾಲ್ಕೈದು ವರ್ಷಗಳ ಹಿಂದೆ. ನಾನಾಗ ಬೆಳಗಾವಿ ಜಿಲ್ಲೆಯ ಅಥಣಿ ತಾಲ್ಲೂಕಿನ ಒಂದು ಚಿಕ್ಕ ಊರಾದ ಕಾಗವಾಡದಲ್ಲಿ ಬಿ. ಎ. ಓದ್ತಾ ಇದ್ದೆ. ಒಮ್ಮೆ ಅಕಸ್ಮಾತ್ತಾಗಿ ಪ್ರಜಾವಾಣಿಯಲ್ಲಿ ಬಂದಂಥ ಕ್ರೈಸ್ಟ್ ಕಾಲೇಜಿನ ಕನ್ನಡ ಸಂಘದ ಪ್ರಕಟಣೆ ಕಣ್ಣಿಗೆ ಬಿದ್ದಿತು. ಅದು 'ಬೇಂದ್ರೆ' ಸ್ಮೃತಿ ಅಂತರ್ ಕಾಲೇಜು ಕವನ ಸ್ಪರ್ಧೆ. ನಾನೂ ಅವಾಗಾವಾಗ ಏನಾದರೂ ಗೀಚ್ತಾ ಇದ್ದೆ. ಹೀಗಾಗಿ ಒಂದೆರಡು ಕವನಗಳನ್ನು ಕಳುಹಿಸಿದೆ. ಆದರೆ ಆ ವರ್ಷ ನನಗೆ ಬಹುಮಾನ ಬರಲಿಲ್ಲ. ನಾನು ನಿರೀಕ್ಷಿಸಿಯೂ ಇರಲಿಲ್ಲ. ಮರು ವರ್ಷ ಸ್ಪರ್ಧೆಯ ಆಹ್ವಾನ ಪತ್ರಿಕೆ ನನ್ನ ಹೆಸರಿನಲ್ಲಿ ಕಾಲೇಜಿಗೆ ಒಂದು ಬಂದಿತು. ಆಗಲೇ ನಾನಂದುಕೊಂಡೆ ಅಲ್ಲಿಯ ಕನ್ನಡ ಎಷ್ಟು ವ್ಯವಸ್ಥಿತವಾಗಿ ಈ ಸ್ಪರ್ಧೆಯನ್ನು ನಡೆಸುತ್ತಿರಬಹುದು ಎಂದು. ಏಕೆಂದರೆ ಬೆಂಗಳೂರು ಎಲ್ಲಿ, ಕಾಗವಾಡ ಹಳ್ಳಿ ಎಲ್ಲಿ. ನನ್ನ ವಿಳಾಸಕ್ಕೆ ಒಂದು ವರ್ಷದ ನಂತರವೂ ಕೂಡ ಮರೆಯದೇ ಆಹ್ವಾನ ಪತ್ರಿಕೆ ಬಂದದ್ದು. ಆಗ ನನಗೆ ಆಶ್ಚರ್ಯದ ವಿಷಯವೇ ಆಗಿತ್ತು. ಸರಿ ಆ ವರ್ಷ ಕೂಡ ಎರಡು ಕವನಗಳನ್ನು ಸ್ಪರ್ಧೆಗೆ ಕಳುಹಿಸಿದೆ.

ಅವರಲ್ಲಿ ಒಂದು ಕವನ ಬಹುಮಾನ ಗಳಿಸಿ ಪುಸ್ತಕರೂಪದಲ್ಲಿ ಬಂದಂಥ ಕವನಗಳಲ್ಲಿ ಪ್ರಕಟವಾಯಿತು. ನಂತರ ಸತತ ಮೂರು ವರ್ಷಗಳವರೆಗೆ ನಾನು ಬಹುಮಾನ ಪಡೆದೆ.

ನಾನು ಬಿ. ಎ. ಅಂತಿಮ ವರ್ಗದಲ್ಲಿ ಧಾರವಾಡದ ಕಿಟೆಲ್ ಕಾಲೇಜಿನಲ್ಲಿ ಓದುತ್ತಿರಬೇಕಾದಾಗ ಬಹುಮಾನವನ್ನು ಸ್ವೀಕರಿಸಲು ಕ್ರೈಸ್ಟ್ ಕಾಲೇಜು ಏರ್ಪಡಿಸಿದ ಸಮಾರಂಭಕ್ಕೆ ಬಂದೆ. ಆಗಲೇ ನಾನು ಕಣ್ಣಾರೆ ಕಂಡದ್ದು ಆ ಕಾಲೇಜು, ಕನ್ನಡ ಸಂಘ ಮತ್ತು ಇದಕ್ಕೆಲ್ಲ ಹಿಂದೆ ಪ್ರೇರಣೆಯಾಗಿರುವಂತಹ ಸಾತ್ವಿಕ ಮನಸ್ಸಿನ, ಯಾವಂದೂ ಫಲಾಪೇಕ್ಷೆ ಇಲ್ಲದೆ ಕನ್ನಡದ ಸೇವೆಯನ್ನು ಮಾಡುತ್ತಿರುವಂತಹ ಮಾನ್ಯ ಶ್ರೀ ಶ್ರೀನಿವಾಸರಾಜುರವರನ್ನು. ಕನ್ನಡ ಸಂಘಕ್ಕೆ ಅಂತಹ ಆರ್ಥಿಕ ಬೆಂಬಲ ಇಲ್ಲ ದಾಗ್ಯೂ ಕೂಡ ಅನೇಕ ಚಟುವಟಿಕೆಗಳನ್ನೂ, ಕಾರ್ಯಗಳನ್ನೂ ಹಮ್ಮಿಕೊಂಡಿದ್ದನ್ನ ಕೇಳಿ, ನೋಡಿ ನಿಜವಾಗಿಯೂ ಆಶ್ಚರ್ಯಪಟ್ಟೆ. ಶ್ರೀನಿವಾಸರಾಜುರವರಲ್ಲಿದ್ದ ಕರ್ತೃತ್ವಶಕ್ತಿಯನ್ನು ಮನಸ್ಸಿನಲ್ಲಿ ಮನಸಾರೆ ಹಲವು ಬಾರಿ ಹೊಗಳಿದ್ದೇನೆ. ಆದರೆ ಇಂದು ಅದನ್ನು ವ್ಯಕ್ತಪಡಿಸುವ ಅವಕಾಶ ಸಿಕ್ಕಿದ್ದರಿಂದ ಒಳಗಿದ್ದದ್ದನ್ನ ಹೊರ ಹಾಕ್ತಾ ಇದ್ದೇನೆ. ಅದರಲ್ಲಿ ಅತಿಶಯೋಕ್ತಿಯಾಗಲೀ, ಕೇವಲ ಬಾಯಿ ಮಾತನ ಹೊಗಳಿಕೆ ಯಾಗಲೀ ಖಂಡಿತವಾಗಿಯೂ ಇಲ್ಲ. ಏಕೆಂದರೆ ನನ್ನದೇ ಆದ ಪುಟ್ಟ ಜಗತ್ತು ಏನಾ ದರೂ ನಿರ್ಮಾಣವಾಗಿದ್ದರೆ ಅದರ ಶ್ರೇಯಸ್ಸೆಲ್ಲ ಕ್ರೈಸ್ಟ್ ಕಾಲೇಜಿನ ಕನ್ನಡ ಸಂಘಕ್ಕೆ ಸಲ್ಲಬೇಕು. ಕರ್ನಾಟಕದಲ್ಲಿ ಈ ರೀತಿಯಾಗಿ ಕನ್ನಡ ಕೆಲಸಗಳನ್ನು ರಚನಾತ್ಮಕವಾಗಿ ಮಾಡುತ್ತಿರುವಂಥಗಳಲ್ಲಿ ಬಹುಶಃ ಕ್ರೈಸ್ಟ್ ಕಾಲೇಜು ಒಂದೇ ಎಂದರೂ ಕೂಡ ತಪ್ಪಾಗಲಾರದು. ನನ್ನಂಥ ಅನೇಕ ಜನ ಕಿರಿಯನ್ನ ಸಾಹಿತ್ಯ ಜಗತ್ತಿಗೆ ಪರಿಚಯ ಮಾಡಿಕೊಟ್ಟು ಪ್ರೋತ್ಸಾಹ ನೀಡಿದೆ.

ಇದೇ ರೀತಿ ಅದು ಮತ್ತಷ್ಟು ಕನ್ನಡದ ಸೇವೆಯನ್ನು ಮಾಡಲು ಸಾಕಷ್ಟು ಶಕ್ತಿಯುತವಾಗಿ ಬೆಳೆಯಲಿ. ಅದರ ಹಿಂದಿರುವ ಚಾಲಕಶಕ್ತಿಗೆ ಚೈತನ್ಯದ ಮಳೆ ಯಾವತ್ತೂ ಸುರೀತಾ ಇರಲಿ, ಎನ್ನುವದೇ ನನ್ನ ಕಳಕಳಿಯ ಹಾರೈಕೆ.

ಟಿ. ಎನ್. ಗುರುದತ್

ಕ್ರೈಸ್ಟ್ ಕಾಲೇಜಿನ ಕನ್ನಡ ಸಂಘವನ್ನು ಬಲ್ಲ ಎಲ್ಲರಿಗೂ ಅದು ತನ್ನ ಐವತ್ತನೆ ಪುಸ್ತಕ ಪ್ರಕಟಿಸುತ್ತಿರುವ ಬಗ್ಗೆ ತುಂಬ ಸಂತೋಷವಾಗುತ್ತದೆ. ಅದಕ್ಕಿಂತ ಹೆಚ್ಚಿನ ಆಶ್ಚರ್ಯವಾಗುತ್ತದೆ. ಯುವ ಬರಹಗಾರರನ್ನೂ ವಿದ್ಯಾರ್ಥಿಗಳನ್ನೂ ಗುರುತಿಸಿ ಪ್ರೋತ್ಸಾಹಿಸುವ ರೀತಿಯಲ್ಲೇ ಅವರ ಗೀಳಿಗೆ ಗಂಭೀರತೆಯ ದೀಕ್ಷೆ ಕೊಡಿಸುತ್ತದೆ ;

ಸಾಹಿತ್ಯಕ ಜವಾಬುದಾರಿ ಹೊರೆಸುತ್ತದೆ ಈ ಸಂಘ. ಹಲವಾರು ಮಹತ್ವದ ಕೃತಿಗಳನ್ನು ಹೊರತಂದಿದ್ದು ಅಂಥವನ್ನು ಸೃಷ್ಟಿಸಬಲ್ಲ ಭರವಸೆಯ ಹೊಸ ಪಡೆಯ ನಿರ್ಮಾಣಕ್ಕೂ ಕಾರಣವಾಗುತ್ತಿದೆ. ದ.ರಾ. ಬೇಂದ್ರೆ ಸ್ಮೃತಿ ಅಂತರ ಕಾಲೇಜು ಕವನ ಸ್ಪರ್ಧೆ ಹಾಗೂ ಅ.ನ.ಕೃ. ಸ್ಮಾರಕ ಅಂತರ ಕಾಲೇಜು ಲೇಖನ ಸ್ಪರ್ಧೆಗಳಿಂದ ಅನೇಕರ ರಾಚನಿಕ ಮಗ್ಗುಲುಗಳು ವಿಕಸಿಸಿವೆ.

ಇವನೊಬ್ಬ ಕವಿ. ಇವಳು ಬರೆಯುತ್ತಾಳೆ. ಈತನೂ ಶುರು ಮಾಡಿದ್ದಾನೆ ನೋಡಿ – ಎಂದು ನಾಕು ಜನರ ಮುಂದೆ ಬಯಲುಗೊಳಿಸಿ ಉತ್ಪಾದನೆಯ ಸ್ಯಾಂಪಲ್ಲನ್ನೂ ತೋರಿಸಿಬಿಡುವ ಸಂಘ ಮೊದಲಿಗೆ ಅವರಲ್ಲಿ ಖುಷಿ ಮೂಡಿಸುತ್ತದೆ. ಅವರ ಹವ್ಯಾಸವನ್ನು, ಶಕ್ತಿಯನ್ನು ಅವರಲ್ಲಿ ಖಚಿತಪಡಿಸುತ್ತದೆ. ಆದರೆ ಹಿಂದೆಯೇ ಕಾಯುವ ಪ್ರಶ್ನೆ. ಇದೇ ಮುಖ್ಯ : ನಾನು ಕೊರೆದದ್ದಕ್ಕೂ ನಾಕಾರು ಕಣ್ಣುಗಳ ಕಿವಿಗಳ ಚಂದಾದಾರಿಕೆಯಿದೆ. ಗುಟ್ಟಿನ ಸ್ವಗತಗಳು ಇನ್ನು ಸಾಮಾಜಿಕ ಪ್ರಸ್ತುತತೆ ಸಾಧಿಸಬೇಕು. ಅಧ್ಯಯನ, ಪ್ರಯೋಗಗಳಿಂದ ವೇದಿಯ ಸಮಕ್ಷಮದಲ್ಲಿ ಅಭಿವ್ಯಕ್ತಿಯ ಶ್ರುತಿ ಹಿಡಿಯಬೇಕು ; ಜೀವನದ ಅರ್ಥಗಳನ್ನು ಕಂಡುಕೊಂಡು ಯುಗಧರ್ಮದ ಚಕ್ರ ಕೂಡಿಸಬೇಕು ಎಂಬ ಇರಾದೆ ಗುರಿಯಾಗಬೇಕು – ಈ ಕಾಳಜಿ ಸಂಘದ ಸಂಕಲನಗಳ ಕೆಲವಾದರೂ ಮಂದಿಯನ್ನು ಆವರಿಕೊಂಡಿರುವುದು ಶುಭ ಸಂಕೇತ. ಗೀಳು ಉಮೇದುಗಳ ಬರವಣಿಗೆ ಶ್ರದ್ಧಾಪೂರ್ಣ ಸಾಧನೆಯತ್ತ ಮುಖಮಾಡಿದೆಯೆಂದರೆ ಕ್ರೈಸ್ಟ್ ಕಾಲೇಜಿನ ಸಾಧನೆ ಕಡಿಮೆ ಮಹತ್ವದ್ದೆ ?

ನಾಡಿನ ಆ ಮೂಲೆ ಈ ಮೂಲೆಯಲ್ಲಿ ಬರೆಯುವ ವಿದ್ಯಾರ್ಥಿಗಳಿಗೆಲ್ಲ ಒಂದು ಬಗೆಯ ವಾರ್ಷಿಕ ವೇದಿಕೆಯಾಗಿ ಸಂಘ ಪರಿಣಮಿಸಿದೆ. ಅವರವರಿಗೆ ಗೆಳೆತನ ಕೂಡಿಸಿ ಸಮಾನಾಸಕ್ತರನ್ನು ಒಂದು ಗುಂಪಾಗಿಸಿದೆ.

ಸಣ್ಣ ಸಭೆ ಕಲೆಹಾಕಿ ಸಾಹಿತ್ಯ ಕುರಿತೋ ಮತ್ತೊಂದು ಕುರಿತೋ ನಾಕು ಮಾತು ಆಡಿಸುವುದೂ ತರಲೆ ಉಸಾಬರಿ (ಸ್ವಾನುಭವ ಸಿದ್ಧ ಕೂಡ) ಯೆನಿಸಿಬಿಡುವಾಗ ಕ್ರೈಸ್ಟ್ ಕಾಲೇಜ್ ಕನ್ನಡ ಸಂಘ ಈ ಮಟ್ಟದಲ್ಲಿ ಚಟುವಟಿಕೆ ನಡೆಸುತ್ತಿರುವುದು ಒಂದು ಮಾದರಿ. ಒಂದು ಕಷ್ಟದ ಮಾದರಿ. ಆದರೆ ಇದಿಲ್ಲಿ ಪರಂಪರೆಯಾಗಿಬಿಟ್ಟಿದೆ. ಸಾಹಿತ್ಯ, ವಿಮರ್ಶೆ, ವಿಜ್ಞಾನ, ಅನ್ಯಭಾಷಾ ಕೃತಿ, ಸ್ಪರ್ಧಾ ಕೃತಿ – ಹೀಗೆ ವ್ಯಾಪಕವಾಗಿದೆ ಪ್ರಕಟಿತ ಬಗೆಗಳು. ಶ್ರೀ ಚಿ. ಶ್ರೀನಿವಾಸರಾಜು ಅವರು ಹಾಗೂ ಅವರ ಸಹಕಾರೀ ಗಣ್ಯರುಗಳ ಸಂಕಲ್ಪ – ಕ್ರಿಯಾಶಕ್ತಿಗಳಿಗೆ ಇದು ಸಾಕ್ಷಿ. ಇವರು ಮತ್ತು ಕಾಲೇಜಿನ ಪ್ರಿನ್ಸಿಪಾಲರು ಸಹಜವಾಗಿಯೆ ಕನ್ನಡಿಗರ ಗೌರವಕ್ಕೆ ಪಾತ್ರರು.

ಇನ್ನೂ ಅನೇಕ ಸಂಘಗಳಿಗೆ, ಕಾಲೇಜುಗಳಿಗೆ ಈ ತೆರನಾದ ಚಟುವಟಿಕೆ ಸಾಧ್ಯವಾಗಲೆಂಬುದು ನನ್ನ ಕನಸು.

ಆನಂದ

ಕ್ರೈಸ್ಟ್ ಕಾಲೇಜು ಹಿರಿಯ ವಿದ್ಯಾರ್ಥಿಗಳು

ಕೆ. ಎಸ್. ಶ್ರೀನಿವಾಸಮೂರ್ತಿ

ನಾನು ಕ್ರೈಸ್ಟ್ ಕಾಲೆಜ್ ಸೇರಿದ್ದೊಂದು ಆಕಸ್ಮಿಕ : ಆ ವೇಳೆಗೆ ಬೆಂಗಳೂರಿನ ಬೇರೊಂದು ಕಾಲೇಜಿನಲ್ಲಿ ಪಿ.ಯು.ಸಿ. ಮುಗಿಸಿದ್ದೆ. ಪಿ.ಯು.ಸಿ. ಯಲ್ಲಿ ಓದಿದ ವಿಷಯಗಳಿಗೂ (ವಾಣಿಜ್ಯ ವಿಷಯಗಳು) ನನ್ನ ನಿಜವಾದ ಆಸೆ, ಕನಸುಗಳಿಗೂ (ಸಾಹಿತ್ಯ, ಕಲೆ) ಏನೇನೂ ಸಂಬಂಧವಿರಲಿಲ್ಲ; ಆಗ ಅತ್ಯಂತ ಸಣ್ಣದಾದ, ಆದರೆ ವೈಯಕ್ತಿಕವಾಗಿ ಮನಸ್ಸಿಗೆ ನೋವಾಗುವಂಥ ಘಟನೆಯೊಂದು ನಡೆಯಿತು ; ನನ್ನ ಆವರೆಗಿನ ಆತ್ಮವಿಶ್ವಾಸವನ್ನು ಒಂದೇ ಏಟಿಗೆ ಕುಗ್ಗಿಸಿ, ಕೀಳರಿಮೆಗೆ ದಾರಿ ಮಾಡಿದ ಇದು, ಮುಂದೆ ಹಲವಾರು ವರ್ಷಗಳಷ್ಟು ಕಾಲ ನನ್ನನ್ನು ಏಕಾಕಿಯಾಗಿಸಿತು. ಈ ಹಿನ್ನೆಲೆಯಲ್ಲಿ ಬೇರೆಯೇ ಕಾಲೇಜೊಂದನ್ನು, ಹೊಸ ವಾತಾವರಣವನ್ನು, ನಾನು ಹುಡುಕತೊಡಗಿದೆ : ನಾಲ್ಕಾರು ಕಾಲೇಜುಗಳಿಗೆ ಸೇರಲು ಪ್ರಯತ್ನಿಸಿದೆ – ಅವುಗಳಲ್ಲಿ ಕ್ರೈಸ್ಟ್ ಕಾಲೇಜೊಂದು. ಶೈಕ್ಷಣಿಕ ಅಧ್ಯಯನಗಳು ಮತ್ತು ವೈಯಕ್ತಿಕ ಸಾಧನೆಗಳ ನಡುವೆ ನೇರವಾದ ಸಂಬಂಧವಿದೆಯೆಂಬ ಭ್ರಮೆ ಆಗಲೂ ನನಗಿತ್ತು ; ಒಟ್ಟಿನಲ್ಲಿ, ಕ್ರೈಸ್ಟ್ ಕಾಲೇಜಿನಲ್ಲಿ ಬಿ. ಎ. ಓದುವ ಆಸೆ ಹೊತ್ತು ಬಂದೆ ; ಆದರೆ ನನಗೆ ಪ್ರವೇಶ ಸಿಕ್ಕಿದ್ದು ಬಿ.ಕಾಂ.ಗೆ.

ಹೀಗಾಗಿ, ಶೈಕ್ಷಣಿಕವಾಗಿ, ಕ್ರೈಸ್ಟ್ ಕಾಲೇಜ್ ಮತ್ತು ನನ್ನ ಮಧ್ಯೆ ಹೇಳಿ ಕೊಳ್ಳುವಂಥ ಅರ್ಥಪೂರ್ಣವಾದ ಸಂಬಂಧವುಂಟಾಗಲಿಲ್ಲ. ಆದರೆ, ಒಂದು ಶಿಕ್ಷಣ ಸಂಸ್ಥೆಯಿಂದ ನಾವು ಅಪೇಕ್ಷಿಸುವ ಪ್ರಭಾವ–ಪ್ರೇರಣೆಗಳೂ ಇದರಾಚೆಗಿನದೆಂದೇ ಅನಿಸುತ್ತದೆ; ಇಲ್ಲಿ, ಅನಿವಾರ್ಯವಾಗಿ, ಕೆಲವು ವೈಯಕ್ತಿಕವೆನಿಸಬಹುದಾದ ವಿವರ ಗಳನ್ನು ಹೇಳಬೇಕಾಗುತ್ತದೆ :

ತೀವ್ರವಾದ ಕೀಳರಿಮೆ, ಸಂಕೋಚಗಳಿಂದ ಮುದುಡಿಕೊಂಡಿದ್ದ ನನ್ನ ಆಗಿನ ಕನಸು, ಭ್ರಮೆಗಳನ್ನು ಕ್ರೈಸ್ಟ್ ಕಾಲೇಜು ಅತ್ಯಂತ ಅರ್ಥಪೂರ್ಣವಾಗಿ ಹತ್ತಿರ ಮಾಡಿಕೊಂಡಿತು. ಇದನ್ನು ಸ್ಪಷ್ಟವಾಗಿ ಹೇಳಬೇಕೆಂದರೆ, ಫಾ॥ ಮಾಣಿಗೈಲ್ಸ್ ಮತ್ತು ಶ್ರೀ ಶ್ರೀನಿವಾಸರಾಜು ಅವರ, ಅವರಿಗೆ ಅನನ್ಯವಾದಂಥ, ಕೆಲವು ಗೆಶ್ಚರ್ ಗಳು ನೆನಪಿಗೆ ಬರುತ್ತವೆ :

ಅತ್ಯಂತ ಮಿತಭಾಷಿಯಾಗಿ, ಎತ್ತರದ ವ್ಯಕ್ತಿಯಾಗಿ, ಈ ಕಾರಣಗಳಿಂದ ಏಕೋ 'ದೂರ'ವೆನಿಸಬಹುದಾದ, ಫಾ॥ ಮಾಣಿಗೈಲ್ಸ್ ಅವರು ಹೇಗೆ ತೀರ ಹತ್ತಿರದ ವ್ಯಕ್ತಿಯಾಗಬಲ್ಲರು ಎಂಬುದು ಆಶ್ಚರ್ಯಕರ : ನಾನು ಚಿತ್ರಕಲೆಯಲ್ಲಿ ಆಗ ಮಾಡಿದ್ದ ಕೆಲವು ಸಣ್ಣ ಪ್ರಯತ್ನಗಳ ಪ್ರದರ್ಶನವನ್ನು ಕಾಲೇಜಿನಲ್ಲಿ, ಕನ್ನಡ ಸಂಘವು ಏರ್ಪಡಿಸಿತ್ತು. ಈ ಸಂದರ್ಭದ ಉದ್ಘಾಟನೆಯಲ್ಲಿ ಫಾ॥ ಮಾಣಿಗೈಲ್ಸ್ ಅವರು ನನ್ನನ್ನು ವೇದಿಕೆಯ ಮೇಲೆ ಕರೆಸಿ, ತಾವು ಬಳಸುತ್ತಿದ್ದ ಕಡು ನೀಲಿ ಬಣ್ಣದ

ಪಾರ್ಕರ್ ಪೆನ್ನನ್ನು, ಜೇಬಿನಿಂದ ತೆಗೆದು ಕಾಣಿಕೆಯಾಗಿ ಕೊಟ್ಟರು. ನನ್ನ ವ್ಯಾಸಂಗದ ಉದ್ದಕ್ಕೂ Full Freeship ಜೊತೆಗೆ Scholarship ಅನ್ನೂ ಅವರು ವ್ಯವಸ್ಥೆ ಮಾಡಿದರು; ಆದರೆ, ಈ ಎಲ್ಲವರ ನಂತರವೂ, ಕಾಲೇಜು ಬಿಟ್ಟ ಮೇಲೂ ನಾನು ಫಾ॥ ಗೈಲ್ಸ್ ಅವರ ಮುಂದೆ ಕುಳಿತು ಮಾತನಾಡಿದ ನೆನಪುಗಳೇ ಇಲ್ಲ!

ಅದೇ ರೀತಿ, ನನ್ನ ಆಗಿನ ಸಣ್ಣಪುಟ್ಟ ಚಿತ್ರ ಪದ್ಯಗಳಲ್ಲೂ ನನ್ನ ಪ್ರೀತಿಯ ಗುರುಗಳಾದ ಶ್ರೀ ಶ್ರೀನಿವಾಸರಾಜು ಅವರು ತಾಳ್ಮೆಯಿಂದ ತೋರಿಸಿದ ಆಸಕ್ತಿಯು ಅವರಿಗೇ ವಿಶೇಷವಾದದ್ದು; ಅಗತ್ಯವಾದಷ್ಟು ಪ್ರೀತಿಯ ಕಾವು ಮತ್ತು ಮೃದುವಾದ ಎಚ್ಚರಿಕೆಯ ಮಾತುಗಳಿಂದ ಎಲ್ಲಿಯೂ dogmatic ಆಗದ ಅವರ ಮಾತುಗಳು ನನ್ನ ಅಭಿರುಚಿ ಮತ್ತು ಆಸಕ್ತಿಗಳಿಗೆ ಒಂದು ಸ್ಪಷ್ಟವಾದ ಚೌಕಟ್ಟನ್ನು ಕೊಟ್ಟಿವೆ.

ಒಟ್ಟಿನಲ್ಲಿ, ನನಗಂತೂ ಕ್ರೈಸ್ಟ್ ಕಾಲೇಜ್ ಕೇವಲ ಒಂದು ಶಿಕ್ಷಣ ಸಂಸ್ಥೆಯಲ್ಲ; ಒಬ್ಬ ಆತ್ಮೀಯ ಗೆಳೆಯ. ಅಂದರೆ, ಒಂದು ಸಂಸ್ಥೆಯ ವ್ಯಕ್ತಿತ್ವವನ್ನು ನಾನು ಎಲ್ಲೋ, ಹೇಗೋ ಇಬ್ಬರ ವ್ಯಕ್ತಿತ್ವದೊಂದಿಗೆ ಸಮೀಕರಿಸಿವುದೂ ನಿಜ. ಇದು ವ್ಯಾವಹಾರಿಕವಾಗಿ ಎಷ್ಟು ತಪ್ಪು ಅಥವಾ ಸರಿ ಎಂಬುದೇ ಬೇರೆ : ಪ್ರೀತಿಯ ಕಾವಿಗೆ ವ್ಯಾವಹಾರಿಕವಾದ ಒಣತರ್ಕದ ತಣ್ಣೀರೇಕೆ ?

ಜಿ. ಪಿ. ರಾಮಣ್ಣ

"A Garden College in the Garden city" ನನ್ನ ಕಾಲೇಜು ದಿನಗಳಲ್ಲಿ ನನ್ನ ಸಹಪಾಠಿಯೊಬ್ಬ ಈ ಕಾಲೇಜನ್ನು ಕುರಿತು ಹೀಗೆ ಉಲಿದಿದ್ದು ಇನ್ನೂ ನನ್ನ ನೆನಪಿನಲ್ಲಿದೆ. ಅವನು ಅಂದು ಆಡಿದ ಈ ಮಾತಿಗೆ ಇಂದೂ ನನ್ನ ಬೆಂಬಲವಿದೆ. ಅದಕ್ಕೆ ಕಾರಣವೂ ಇದೆ. ನಗರದ ಸದ್ದುಗದ್ದಲಗಳಿಂದ ದೂರ ಉಳಿದು, ಪ್ರಶಾಂತ ಹಾಗೂ ಉಲ್ಲಸಿತ ಪರಿಸರದಲ್ಲಿ ಶಿಕ್ಷಣ ನೀಡುತ್ತಿರುವ ಈ ಕಾಲೇಜಿನ ಬಗ್ಗೆ ನನಗೆ ಅಭಿಮಾನವಿದೆ. ನಗರದ ಬೇಸರ ತರಿಸುವ ಯಾಂತ್ರಿಕ ವಾತಾವರಣದಿಂದ ಭಿನ್ನ ಅನ್ನಿಸಬಹುದಾದ ಇಲ್ಲಿನ ಪರಿಸರ ವಿದ್ಯಾರ್ಥಿಗಳ ಮೆಚ್ಚುಗೆ ಗಳಿಸಿರೋದ್ರಲ್ಲಿ ಆಶ್ಚರ್ಯ ಏನೂ ಇಲ್ಲ. ಶಾಂತವಾತಾವರಣ ಹಾಗೂ ಇಲ್ಲಿನ ವಿದ್ಯಾಭ್ಯಾಸ ಕ್ರಮದಲ್ಲಿನ ಅಚ್ಚುಕಟ್ಟುತನ ಶಿಕ್ಷಣ ಸಂಸ್ಥೆಗಳಲ್ಲಿರಲೇಬೇಕಾದ ಮೂಲಭೂತ ಅಂಶಗಳು. ಬಹುತೇಕ ಶಿಕ್ಷಣ ಸಂಸ್ಥೆಗಳಲ್ಲಿ ಕಂಡುಬರುವ ಈ ಅಂಶಗಳ ಕೊರತೆಯನ್ನು ಗಮನದಲ್ಲಿಟ್ಟುಕೊಂಡು, ಈ ಅಂಶಗಳಿಗೆ ಹೆಚ್ಚು ಒತ್ತುಕೊಟ್ಟು ಶಿಕ್ಷಣ ಸೌಧ ಆರಂಭಿಸಿದ ಇಲ್ಲಿನ ಆಡಳಿತ ವರ್ಗಕ್ಕೆ ಹಲವರಂತೆ ನನ್ನ ಮೆಚ್ಚುಗೆ ಕೂಡಾ ಸಲ್ಲುತ್ತದೆ.

ಇಷ್ಟೇ ಅಲ್ಲದೆ ಈ ಕಾಲೇಜನ್ನು ನಾನು ಪ್ರೀತಿಸಿದ್ದು ಮತ್ತೆರಡು ಕಾರಣಗಳಿಗಾಗಿ, ಒಂದು, ಕಾಲೇಜಿನಲ್ಲಿರುವ ಎಲ್ಲಾ ಭಾಷಾ ವಿಭಾಗಗಳ ಭಾಂದವ್ಯ ಮತ್ತು ಸಹಬಾಳ್ವೆ. ಎರಡು, ಕನ್ನಡ ಸಂಘದ ಕ್ರಿಯಾಶೀಲತೆ.

ಈ ಕಾಲೇಜಿನ ವಿವಿಧ ಭಾಷೆಗಳಿಗೆ ಸೇರಿದ ವಿದ್ಯಾರ್ಥಿಗಳು ಮತ್ತು ಆಯಾ ಭಾಷೆಯ ವಿಭಾಗಗಳು, ಮತ್ತು ಅವುಗಳ ಮುಖ್ಯರ ಮಧ್ಯೆ ಏರ್ಪಟ್ಟಿರುವ ಭಾಂದವ್ಯ ಅನನ್ಯ ಮತ್ತು ಅನುಕರಣೀಯ. ಅವರಲ್ಲಿನ ಸಾಮರಸ್ಯ, ಪರಸ್ಪರ ಅರಿತು ಬಾಳುವ ಮನೋಧರ್ಮ ನಾನು ಕಣ್ಣಾರೆ ಕಂಡದ್ದು ಮತ್ತು ಮೆಚ್ಚಿದ್ದು.

ಇತರ ಭಾಷೆಗಳ ಪ್ರಾಬಲ್ಯವಿದ್ದಾಗ್ಯೂ, ತನ್ನನ್ನು ತಾನು ಕಂಡುಕೊಂಡು, ತನ್ನದಲ್ಲದ ಪರಿಸರದಲ್ಲೂ ಅಪೂರ್ವ ರೀತಿಯ ಬೆಳವಣಿಗೆ ಕಾಣುತ್ತಿರುವ ಇಲ್ಲಿನ ಕನ್ನಡ ಸಂಘದ ಸಾಹಸಗಾಥೆ, ಬೇರೆ ಶಾಲಾ ಕಾಲೇಜುಗಳಲ್ಲಿರಬಹುದಾದ ಕನ್ನಡ ಸಂಘಗಳಿಗೆ ಮಾದರಿ. ಜೊತೆಗೆ ಸ್ಫೂರ್ತಿ ಕೂಡ ಆಗಬಲ್ಲುದು. ಕನ್ನಡ ವಿಭಾಗದ ಮುಖ್ಯರೂ, ಬೋಧಕರೂ, ಕನ್ನಡ ಸಂಘದ ನೇತಾರರೂ ಆದ ಶ್ರೀ ಚಿ. ಶ್ರೀನಿವಾಸ ರಾಜು, ಮತ್ತು ಅವರ ಮಿತ್ರರಾದ ಶ್ರೀ ರಾವ್, ಮತ್ತು ಶ್ರೀ ಶಾಸ್ತ್ರಿಗಳವರ ಶ್ರಮದಿಂದಾಗಿ ಕನ್ನಡ ಸಂಘ ಇಂದಿನ ಈ ಎತ್ತರಕ್ಕೆ ಏರಿದೆ. ತರಗತಿಗಳಿಂದ ಮೊದಲ್ಗೊಂಡು ವಿದ್ಯಾರ್ಥಿಗಳಲ್ಲಿ ಕನ್ನಡದ ಬಗ್ಗೆ ಕಾಳಜಿ ಹುಟ್ಟಿಸಿ, ಅದರತ್ತ ಅವರ ಒಲವನ್ನು ಹೆಚ್ಚಿಸಿ, ಕನ್ನಡ ಸಾಹಿತ್ಯಾಭಿಮಾನಿಗಳನ್ನು, ಕನ್ನಡ ಪ್ರೇಮಿಗಳನ್ನು ಮೇಲಾಗಿ ಯುವ ಬರಹಗಾರರನ್ನು ಸೃಷ್ಟಿಸಿದ ಕೀರ್ತಿ ಇಲ್ಲಿನ ಕನ್ನಡ ವಿಭಾಗದ್ದು ; ಕನ್ನಡ ಸಂಘದ್ದು. ವಿದ್ಯಾರ್ಥಿಗಳಲ್ಲಿನ ಪ್ರತಿಭೆಯನ್ನು ಒರೆಹಚ್ಚಲೋಸುಗ ಹಾಕಿಕೊಂಡ ಅನೇಕ ಸ್ಪರ್ಧಾತ್ಮಕ ಕಾರ್ಯಕ್ರಮುಗಳು ಮತ್ತು ಪುಸ್ತಕ ಪ್ರಕಟಣೆಯಂತಹ ಗುರುತರ ಹೊರೆ, ಕನ್ನಡ ಸಂಘದ ಧೀಶಕ್ತಿಗೆ ಸಾಕ್ಷಿ ಹೇಳುತ್ತವೆ. ಕನ್ನಡ ಸಂಘದ ಮತ್ತು ಕನ್ನಡ ವಿಭಾಗದ ಹಲವಾರು ಕಾರ್ಯಕ್ರಮುಗಳಿಗೆ ಒತ್ತಾಸೆಯಾಗಿ ನಿಂತು ಸಹಕರಿಸುತ್ತಿರುವ ಇಲ್ಲಿನ ಆಡಳಿತವರ್ಗ ಎಲ್ಲರ ಪ್ರಶಂಸೆಗೆ ಪಾತ್ರ. ಹಾಗಾಗಿ ಕನ್ನಡ ಸಂಘದ ಬಗ್ಗೆ ಹೇಳಬೇಕಾದಾಗ ಕಾಲೇಜಿನ ಬಗ್ಗೆಯೂ ಹೇಳಬೇಕಾಗುತ್ತದೆ. ಮುಂಬರುವ ದಿನಗಳಲ್ಲಿ ಕನ್ನಡ ಸಂಘ ತನ್ನೆಲ್ಲಾ ಕಾರ್ಯಚಟುವಟಿಕೆಗಳಲ್ಲಿ ಯಶ ಸಾಧಿಸಲಿ.

ಎಂ. ಗೋಪಿನಾಥ್

ಹತ್ತು ವರ್ಷಗಳ ಹಿಂದೆ, ನೆರೆಯ ಆಂಧ್ರಪ್ರದೇಶ ರಾಜ್ಯವು ಹಿಂದೆಂದೂ ಕಾಣದ ಭಾರಿ ಚಂಡಮಾರುತಕ್ಕೆ ಸಿಲುಕಿ ತೀವ್ರತರದ ಸಾವುನೋವುಗಳಿಗೆ ಗುರಿಯಾಗಿತ್ತು. ಅಂದಿನ ದುರಂತವು ದೇಶದಲ್ಲಿನ ಪ್ರತಿಯೊಬ್ಬರನ್ನೂ ಅಲುಗಾಡಿಸಿತ್ತು. ಚಂಡಮಾರುತಕ್ಕೆ ಸಿಲುಕಿದ ಪ್ರದೇಶಗಳಿಗೆ ಭೇಟಿಯಿತ್ತು ಬಂದರು ನಮ್ಮ ಗುರುಗಳಾದ

ಟಿ. ಶ್ರೀನಿವಾಸರಾಜುರವರು, ಆಗ ಉಂಟಾದ ಮಾನಸಿಕ ಆಘಾತದಿಂದ ಚೇತರಿಸಿ ಕೊಳ್ಳಲಾಗದೆ ಒಂದು ವಾರ ಪಾಠ ಮಾಡಲಿಲ್ಲ. ಒಂದು ದಿನ ತರಗತಿಗೆ ಬಂದ ಗುರು ಗಳು, ಪ್ರವಾಸಕ್ಕೆ ಸಿಲುಕಿದ ಪ್ರದೇಶಗಳಲ್ಲಿ ಕಂಡ ಸನ್ನಿವೇಶಗಳನ್ನು ಮನಮುಟ್ಟು ವಂತೆ ಹೇಳಿದರು. ಕೊನೆಗೆ, ಮೊದಲ ವರ್ಷದ ಪದವಿ ತರಗತಿಯ ವಿದ್ಯಾರ್ಥಿ ಗಳಾದ ನಾವು ಎಷ್ಟರಮಟ್ಟಿಗೆ, ಪ್ರತಿಸ್ಪಂದಿಸಿದ್ದೇವೆ ಎಂಬದನ್ನು ತಿಳಿಯಲು, ಚಂಡ ಮಾರುತವನ್ನು ಕುರಿತು ಕಾಲೇಜ್ ಮ್ಯಾಗಜಿನ್‌ಗೆ ಲೇಖನವೊಂದನ್ನು ಬರೆಯಲು ಹೇಳಿದರು. ತೀರಾ ಹುಡುಗು ಸ್ವಭಾವದವನಾಗಿದ್ದ ನಾನು, ಈ ವಿಷಯವನ್ನು ಗಂಭೀರ ವಾಗಿ ಪರಿಗಣಿಸದೆ ಕಾಲ ಕಳೆದು, ಕೊನೆಗೆ, ಪತ್ರಿಕಾ ವರದಿಗಳನ್ನಾಧರಿಸಿದ ಒಂದು ಕಳಪೆ ಲೇಖನವನ್ನು ಬರೆದು ಕೊಟ್ಟೆ. ಅಷ್ಟೊತ್ತಿಗಾಗಲೇ, ಲೇಖನ ಸ್ಪರ್ಧೆ ಮತ್ತು ಚಿತ್ರಕಲಾ ಸ್ಪರ್ಧೆಗಳಲ್ಲಿ ಬಹುಮಾನ, ಪುರಸ್ಕಾರಗಳನ್ನು ಗಳಿಸಿದ್ದ, ನನ್ನಿಂದ ಅತ್ಯು ತ್ತಮ ಲೇಖನವನ್ನು ನಿರೀಕ್ಷಿಸಿದ್ದ ಗುರುಗಳಿಗೆ ಈ ನನ್ನ ಲೇಖನವನ್ನು ಕಂಡು ಬಹಳ ನಿರಾಶೆಯಾಯಿತು. ಆದರೆ, ಅವರ ನಿರಾಶೆಯನ್ನು ನನಗೆ ತೋರ್ಪಡಿಸಲಿಲ್ಲ. ಚಂಡ ಮಾರುತವನ್ನು ಕುರಿತು ಗೆಳೆಯ ಸತೀಶ್‌ರಾವ್ ಬರೆದಿದ್ದ ಲೇಖನದೊಂದಿಗೆ ಮ್ಯಾಗ ಜಿನ್ ಬಿಡುಗಡೆಯಾಯಿತು. ಅದರಲ್ಲಿ, ಕನ್ನಡ ಸಂಘದ ಚಟುವಟಿಕೆಗಳನ್ನು ಕುರಿತು ನಮ್ಮ ಗುರುಗಳೇ ಬರೆದ ವರದಿ "ಹೊಸತೆಲ್ಲಾ ಹುಟ್ಟಿ ಬರಲಿ" ಎಂಬುದು ಪ್ರಕಟ ವಾಯಿತು.

ಈ ವರದಿಯಲ್ಲಿ, ನನಗೆ ಸಂಬಂಧಿಸಿದಂತೆ ಒಳ್ಳೆಯ ವಿಷಯಗಳಿದ್ದರೂ, ಅದರ ಶೀರ್ಷಿಕೆಯು ನನ್ನಲ್ಲಿ ಅಳುಕುಂಟುಮಾಡಿತು. ನನ್ನ ಗುರುಗಳು ಇದನ್ನು ನನ ಗಾಗಿಯೇ ಬರೆದರೇನೋ ಎಂದು ಭಾವಿಸತೊಡಗಿದೆ. ಸುಮಾರು ಆರು ತಿಂಗಳು, ನೇರ ಸಂಪರ್ಕವಿಟ್ಟುಕೊಳ್ಳಲು ನಾಚಿಕೆಪಟ್ಟು ದೂರವುಳಿದೆ. ಈ ಅವಧಿಯಲ್ಲಿ, ಕನ್ನಡ ಸಾಹಿತ್ಯ ಅಧ್ಯಯನದೊಂದಿಗೆ, ಚಿತ್ರಕಲೆಯಲ್ಲೂ ಪ್ರಯೋಗಗಳನ್ನು ಮಾಡಿದೆ. ಈ ಪ್ರಕ್ರಿಯೆಯಲ್ಲಿ ನನ್ನ ಸ್ವಭಾವವೂ ಸಹ ತೀವ್ರ ಬದಲಾವಣೆಗೆ ಗುರಿಯಾಯಿತು. ಕೊನೆಗೆ, ದಿನಾಂಕ 16–12–78ರಂದು, ನಮ್ಮ ಇಂಗ್ಲಿಷ್ ಅಧ್ಯಾಪಕರಾದ ಶ್ರೀ ಪಿ. ಟಿ. ಎಸ್. ಕುಮಾರರು ಏರ್ಪಡಿಸಿದ್ದ "ವಿಜ್ಞಾನ ಮತ್ತು ಸಮಾಜ" ಎಂಬ ಸೆಮಿ ನಾರಿಗೆ ಭಿತ್ತಿಪತ್ರಗಳನ್ನು ರಚಿಸಬೇಕಾಯ್ತು. ನನ್ನ ಸ್ವತಂತ್ರ ಆಲೋಚನೆಗಳನ್ನು ಅಳವಡಿಸಿ, ಬರೆದ ಆ ಚಿತ್ರಗಳು ಎಷ್ಟು ಪರಿಣಾಮಕಾರಿಯಾಗಿತ್ತೆಂದರೆ, ಅಧ್ಯಾಪಕ ರಾದ ಶ್ರೀ ರಾಮಕೃಷ್ಣ ರಾವ್‌ರವರು ಒಂದು ಚಿತ್ರವನ್ನು ನಮ್ಮ ಮನೆಗೆ ಕೊಂಡೊ ಯ್ದರು. ಆ ಚಿತ್ರಗಳನ್ನು ನೋಡಿದ ಶ್ರೀನಿವಾಸರಾಜುರವರು "ನಿನ್ನ ಚಿತ್ರಗಳು ಬಹಳ ಪರಿಣಾಮಕಾರಿಯಾಗಿವೆ" ಎಂದರು ! ನನ್ನ ಜನ್ಮ ಸಾರ್ಥಕವಾಯಿತೆನಿಸಿತು. ನನ್ನ ಗುರುಗಳು, ಸ್ವತಃ ಸಾಹಿತ್ಯ ಕೃಷಿಯನ್ನು ಹೆಚ್ಚಾಗಿ ಮಾಡಿಲ್ಲ. ಆದರೆ ಅನೇಕ ಸಾಹಿತಿಗಳನ್ನು ಸೃಷ್ಟಿಸಿದ್ದಾರೆ. ನಾನು ಸಾಹಿತಿಯಾಗದಿದ್ದರೂ

ಅವರು ಬರೆದ ಒಂದೇ ಒಂದು ವರದಿಯಿಂದ ನನ್ನ ಜೀವನವನ್ನೇ ಬದಲಾಯಿಸಿ ಕೊಂಡೆ. ಅಲ್ಲಿಯ ತನಕ ಸಾಧಾರಣ ವಿದ್ಯಾರ್ಥಿಯಾಗಿದ್ದ ನಾನು, ಆ ವರ್ಷ ಪ್ರಥಮ ದರ್ಜೆಯಲ್ಲಿ ಪಾಸಾದೆ ಹಾಗೂ ಕನ್ನಡದಲ್ಲಿ ಹೆಚ್ಚು ಅಂಕ ಗಳಿಸಿದ್ದಕ್ಕಾಗಿ ಡಾ॥ ಶಿವರಾಮ ಕಾರಂತರ ಬಹುಮಾನ ಪಡೆದೆ. ಮತ್ತಷ್ಟು ಲೇಖನ ಸ್ಪರ್ಧೆ ಮತ್ತು ಚಿತ್ರಕಲಾ ಸ್ಪರ್ಧೆಗಳಲ್ಲಿ, ಹಿಂದೆಂದೂ ಗಳಿಸಿದಷ್ಟು ಬಹುಮಾನಗಳನ್ನು ಪಡೆದೆ. ಆ ದಿನಗಳಲ್ಲಿ, ನನ್ನ ಗುರುಗಳು ನೀಡಿದ ತರಬೇತಿಯಿಂದಾಗಿ, ಜೀವನದಲ್ಲಿ ಒದಗಿದ ಅನೇಕ ಘಟನೆಗಳನ್ನು ಧೈರ್ಯವಾಗಿ ಎದುರಿಸುವ ತಾಕತ್ತು ನನ್ನಲ್ಲಿ ಉಂಟಾಯಿತು. ಕೇವಲ, ಕ್ಲಾಸ್ ಮತ್ತು ರ್‍ಯಾಂಕ್ ವಿದ್ಯಾರ್ಥಿಗಳನ್ನು ಯಾರು ಬೇಕಾದರೂ ಸೃಷ್ಟಿಸ ಬಲ್ಲರು. ಆದರೆ, ವಿದ್ಯಾರ್ಥಿಗಳಲ್ಲಿ ಸಾಮಾಜಿಕ ಜವಾಬ್ದಾರಿ ಮತ್ತು ಜೀವನ ಸಾರ್ಥಕತೆಯನ್ನು ಪಡೆದುಕೊಳ್ಳಬಲ್ಲ ಹಂಬಲವನ್ನು ಕೆಲವರು ಮಾತ್ರ ತುಂಬಬಲ್ಲರು. ನನ್ನ ಗುರುಗಳು ಕ್ರೈಸ್ಟ್ ಕಾಲೇಜಿನಲ್ಲಿ ಸೃಷ್ಟಿಸಿದ ವಾತಾವರಣ ಮತ್ತು ಅವರ ಮಾರ್ಗದರ್ಶನ ನನ್ನಂತೆ ಹಲವಾರು ವಿದ್ಯಾರ್ಥಿಗಳು ಜೀವನದ ಬಗ್ಗೆ ತಮ್ಮ ದೃಷ್ಟಿ ಕೋನವನ್ನೇ ಬದಲಾಯಿಸುವಂತೆ ಮಾಡಿದೆ. ನನ್ನ ಗುರುಗಳನ್ನು ಹಾಗೂ ನನ್ನ ಕಾಲೇಜನ್ನು ನಾನು ಎಲ್ಲಿದ್ದರೂ ಕೃತಜ್ಞತಾ ಪೂರ್ವಕವಾಗಿ ಸ್ಮರಿಸುತ್ತೇನೆ.

ಎನ್. ರಮೇಶ್

1974 ರಿಂದ 1978ರ ವರೆಗಿನ ಕ್ರೈಸ್ಟ್ ಕಾಲೇಜಿನ ನನ್ನ ವಿದ್ಯಾರ್ಥಿ ಜೀವನ ದಲ್ಲಿ ನಾನು ಅರಿತದ್ದು ಕಲಿತದ್ದು ಅಪಾರ. ಬರೀ ಪಾಠ, ಪ್ರವಚನ, ಪರೀಕ್ಷೆ ಮಾತ್ರ ವಿದ್ಯಾರ್ಥಿಗಳಿಗೆ ಸೀಮಿತವಲ್ಲ. ಆಟ ಪಾಠದೊಂದಿಗೆ ಕಲೆ ಸಾಹಿತ್ಯ ಪ್ರಜ್ಞೆಯೂ ಮುಖ್ಯ. ವಿದ್ಯಾರ್ಥಿಗಳಲ್ಲಿ ಸಾಹಿತ್ಯ ಪ್ರಜ್ಞೆಯನ್ನು ಮೂಡಿಸಲು ಪ್ರಾರಂಭಗೊಂಡ ಸಂಘವೇ "ಕ್ರೈಸ್ಟ್ ಕಾಲೇಜ್ ಕನ್ನಡ ಸಂಘ". ಈ ಕನ್ನಡ ಸಂಘ ಶಿಕ್ಷಣ ಕ್ಷೇತ್ರದಿಂದ ಕನ್ನಡಕ್ಕೊಂದು ವಿಶಿಷ್ಟವಾದ ಕಾಣಿಕೆಯನ್ನಿತ್ತಿದೆ. ನಾನು ಸೇರುವ ಮೊದಲೆರಡ ವರ್ಷಗಳ ಮೊದಲು ಪ್ರಾರಂಭಗೊಂಡ ಈ ಕನ್ನಡ ಸಂಘ ದಿನೇ ದಿನೇ ಬೆಳೆಯುತ್ತಿರು ವುದು ನಮ್ಮ ಕನ್ನಡ ಸಾಹಿತ್ಯಲೋಕಕ್ಕೊಂದು ಹೆಮ್ಮೆಯ ಸಂಗತಿ.

ನದಿಯ ಮೇಲಿನ ಗಾಳಿ, ಕ್ರಿಸ್ತಾಂಜಲಿ, ಬೆರಳ ಸಂದಿಯ ಬೆಳಕು, ಮಿಲರೇಪ, ಮಳೆ ಬಿದ್ದ ನೆಲದಲ್ಲಿ ಇತ್ಯಾದಿ ಕವನ ಸಂಕಲನಗಳು ನಾನಲ್ಲಿರುವಾಗಲೇ ಪ್ರಕಟ ಗೊಂಡಿತ್ತು. ಈಗಾಗಲೇ 25ಕ್ಕೂ ಹೆಚ್ಚು ಪುಸ್ತಕಗಳು ಪ್ರಕಟಗೊಂಡಿದ್ದು, ಈ ಶೈಕ್ಷಣಿಕ ವರ್ಷದಲ್ಲಿ ತನ್ನ 50ನೇಯ ಪುಸ್ತಕವಾಗಿ ಪ್ರೊ॥ ಎ. ಎನ್. ಮೂರ್ತಿ ರಾಯರ "ಸಮಗ್ರ ಲಲಿತ ಪ್ರಬಂಧಗಳು" ಪ್ರಕಟಿಸಲಿದೆ.

ಈ ಕನ್ನಡ ಸಂಘ ಮುಂದೆಯೂ ಕನ್ನಡ ಕವಿ ಸಾಹಿತಿಗಳೊಂದಿಗೆ ಧ್ವಜಧಾರಿಯಾಗಿ, ಕನ್ನಡ ಭಾಷಾ ಸಾಹಿತ್ಯ ಕ್ಷೇತ್ರಕ್ಕೆ ಕಾಣಿಕೆ ನೀಡಿ ಎಲ್ಲ ಕನ್ನಡಿಗರ ಕೃತಜ್ಞತೆಗೆ ಪಾತ್ರವಾಗಲಿ ಎಂದು ಹಾರೈಸುವೆ.

ಹಳೆ ವಿದ್ಯಾರ್ಥಿಯಾಗಿದ್ದ ನನ್ನ ನೆನಪುಗಳನ್ನು ಬರೆಯುವಂತೆ ಈ ಪುಣ್ಯದ ಕಾಶವನ್ನು ಕಲ್ಪಿಸಿಕೊಟ್ಟ ನನ್ನ ಗುರುಗಳಾದ ಪ್ರೊ. ಎಚ್. ಆರ್. ರಾಮಕೃಷ್ಣರಾವ್ ಅವರಿಗೆ ಧನ್ಯವಾದಗಳನ್ನರ್ಪಿಸುವುದಲ್ಲದೆ ಹೆಚ್ಚಿನ ಸಂಖ್ಯೆಯ ಕವಿತೆ, ಲೇಖನಗಳನ್ನು ಸಂಗ್ರಹಿಸಿ, ಅಚ್ಚು ಹಾಕಿಸಿ ಕನ್ನಡಿಗರ ಕೃತಜ್ಞತೆಗೆ ಪಾತ್ರವಾದ ಕನ್ನಡ ಸಂಘಕ್ಕೆ ನನ್ನ ಅಭಿನಂದನೆಗಳು.

ಎನ್. ಎಸ್. ಉಮೇಶ್

ಕ್ರೈಸ್ಟ್ ಕಾಲೇಜ್ ವಿದ್ಯಾರ್ಥಿಯಾದ ನನಗೆ ನಮ್ಮ ಕಾಲೇಜಿನ 'ಕನ್ನಡ ಸಂಘ'ದ ಬಗ್ಗೆ ಬರೆಯಲು ನಿಜಕ್ಕೂ ಹೆಮ್ಮೆ ಎನಿಸುತ್ತಿದೆ. ಕನ್ನಡ ಭಾಷೆಗೆ ಕಿಂಚಿತ್ತಾದರೂ ಸೇವೆ ಸಲ್ಲಿಸುತ್ತಿರುವ ನಗರದ ಬೆರಳೆಣಿಕೆಗೆ ಸಿಗುವ ಕಾಲೇಜುಗಳಲ್ಲಿ ಕ್ರೈಸ್ಟ್ ಕಾಲೇಜ್ ಸಹ ಒಂದು. ಕನ್ನಡ ಸಂಘ ತನ್ನ ವತಿಯಿಂದ ಸಾಹಿತ್ಯದ ಹಲವಾರು ಕ್ಷೇತ್ರಗಳಿಗೆ ಸಂಬಂಧಪಟ್ಟ ಪುಸ್ತಕಗಳನ್ನು ಪ್ರಕಟಿಸುವ ಹೊಣೆಯನ್ನು ಹೊತ್ತು, ಆ ಕಾರ್ಯವನ್ನು ಯಶಸ್ವಿಯಾಗಿ ಸಾಗಿಸಿದೆ, ಹಾಗೂ ಸಾಗಿಸುತ್ತಿದೆ. ಈ ದಿಸೆಯಲ್ಲಿಯೇ ಕನ್ನಡದ ಖ್ಯಾತ ಪ್ರಬಂಧಕಾರರಾದ, ಎ. ಎನ್. ಮೂರ್ತಿರಾಯರ ಪ್ರಬಂಧ ಸಂಕಲನದ ಪುಸ್ತಕವನ್ನು ಐವತ್ತನೇ ಪುಸ್ತಕವಾಗಿ ಪ್ರಕಟಿಸುತ್ತಿರುವುದು ಹೆಮ್ಮೆಯ ವಿಷಯ.

ನಮ್ಮ ಕಾಲೇಜಿನಲ್ಲಿ ಹಾಗೂ ಇತರ ಕಾಲೇಜುಗಳಲ್ಲಿ ಓದುತ್ತಿರುವ ವಿದ್ಯಾರ್ಥಿ ಬೌದ್ಧಿಕ ಮಟ್ಟವನ್ನು ಬೆಳಕಿಗೆ ತರುವ ಸಲುವಾಗಿ ಪ್ರಬಂಧ ಸ್ಪರ್ಧೆ ಹಾಗೂ ಕವನ ಸ್ಪರ್ಧೆಗಳನ್ನು ಕನ್ನಡ ಸಂಘ ಏರ್ಪಡಿಸಿರುತ್ತದೆ. ಸ್ಪರ್ಧೆಗಳಲ್ಲಿ ಜಯಶಾಲಿಗಳಾದವರಿಗೆ ಬಹುಮಾನಗಳನ್ನು ನೀಡಿ ಪ್ರೋತ್ಸಾಹಿಸುತ್ತದೆ. ಇದರ ಜೊತೆಗೆ ವಿಮರ್ಶಾತ್ಮಕ ಲೇಖನಗಳನ್ನು ಪುಟ್ಟ ಹೊತ್ತಿಗೆಗಳ ರೂಪದಲ್ಲಿ ಪ್ರಕಟಿಸುತ್ತದೆ.

ವಿದ್ಯಾರ್ಥಿಗಳಲ್ಲಿ ಕನ್ನಡದ ಬಗ್ಗೆ ಒಲವನ್ನು ಮೂಡಿಸುವ ಸಲುವಾಗಿ ಪರೀಕ್ಷೆಗಳಲ್ಲಿ ಅತಿ ಹೆಚ್ಚು ಅಂಕ ಗಳಿಸಿದ(ಕನ್ನಡದಲ್ಲಿ)ವಿದ್ಯಾರ್ಥಿ ಅಥವಾ ವಿದ್ಯಾರ್ಥಿನಿಯರಿಗೆ ಪುಸ್ತಕಗಳನ್ನು ನೀಡಿ ಪ್ರೋತ್ಸಾಹಿಸಲಾಗುತ್ತದೆ. ಈ ಪ್ರೋತ್ಸಾಹ ವಿದ್ಯಾರ್ಥಿಗಳಲ್ಲಿ ಕನ್ನಡ ಬಗ್ಗೆ ವಿಶೇಷವಾದ ಆಸಕ್ತಿಯನ್ನು ಮೂಡಿಸಿ ಅದರ ಬಗ್ಗೆ ಅಧ್ಯಯನ ಮಾಡಲು ಸಹಾಯ ಮಾಡಿಕೊಡುತ್ತದೆ. ಇದು ಪದವಿಪೂರ್ವ ಹಾಗೂ ಪದವಿ ತರಗತಿಗಳೆರಡಕ್ಕೂ ಸಂಬಂಧಿಸಿದೆ. ವಾರ್ಷಿಕ ಪರೀಕ್ಷೆಗಳಲ್ಲಿ ಹೆಚ್ಚು ಅಂಕ ಗಳಿಸಿದವರನ್ನು ಯೋಗ್ಯ ಪುಸ್ತಕಗಳನ್ನು ನೀಡಿ ಅಭಿನಂದಿಸಲಾಗುತ್ತದೆ.

ಸಂಘದ ಸದಸ್ಯತ್ವ: ಅರ್ಹತೆಯ ಆಧಾರದ ಮೇಲೆ ಕನ್ನಡ ಸಂಘದ ಸದಸ್ಯತ್ವವನ್ನು ವಿದ್ಯಾರ್ಥಿ ಪಡೆದುಕೊಳ್ಳಬಹುದಾಗಿದೆ, ಆಯಾ ತರಗತಿಗಳಲ್ಲಿ ವಾರ್ಷಿಕ ಪರೀಕ್ಷೆಯಲ್ಲಿ ಕನ್ನಡದಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿ ಅಥವಾ ವಿದ್ಯಾರ್ಥಿನಿಗೆ ಈ ಸದಸ್ಯತ್ವ ಲಭಿಸುತ್ತದೆ. ಆದ್ದರಿಂದ 'ಕ್ರೈಸ್ಟ್ ಕಾಲೇಜ್ ಕನ್ನಡ ಸಂಘ' ಎಂದೂ ಪೊಳ್ಳಾಗಲು ಸಾಧ್ಯವಿಲ್ಲ.

ಕನ್ನಡ ಸಂಘ ಆಗಾಗ ಕಾಲೇಜಿನಲ್ಲಿ ನಾಟಕಗಳನ್ನಾಡಿಸುವ ಕಾರ್ಯಕ್ರಮಗಳನ್ನು ಹುಮ್ಮಿಕೊಂಡಿದೆ. ಈ ನಾಟಕಗಳು ಅನ್ಯವಾಗಿರದೆ, ತರಗತಿಗಳ ಪಠ್ಯಗಳಿಗೆ ಸಂಬಂಧಿಸಿದವುಗಳೇ ಆಗಿರುವುದರಿಂದ ವಿದ್ಯಾರ್ಥಿಗಳಿಗೆ ಪಠ್ಯದ ಬಗ್ಗೆ ಪೂರ್ಣ ತಿಳುವಳಿಕೆ ಬರಲು ಸಹಾಯಕವಾಗುತ್ತದೆ. ಇದು ನಿಜಕ್ಕೂ ವಿದ್ಯಾರ್ಥಿಗಳ ದೃಷ್ಟಿಯಿಂದ ಬಹಳ ಉಪಯುಕ್ತವಾಗಿದ್ದು ಶ್ಲಾಘನೀಯವಾಗಿದೆ.

ಹೀಗೆ ಚಟುವಟಿಕೆಯಿಂದ ಕೂಡಿರುವ 'ಕ್ರೈಸ್ಟ್ ಕಾಲೇಜ್ ಕನ್ನಡ ಸಂಘ'ದ ಸಾಮೀಪ್ಯ, ನನಗೆ ಒದಗಿ ಬಂದದ್ದು ಸುವರ್ಣಾವಕಾಶ. ಈ ಸಂಘದ ಕಾರ್ಯ ಚಟುವಟಿಕೆಗಳು ಎಂದೂ ಹಿಂದಾಗದೆ, ಚುರುಕುಗೊಳ್ಳುತ್ತಾ ಸಾಗಿ ಅದರ ಸುಗಂಧ ಎಲ್ಲೆಡೆ ಹರಡಲಿ ಎಂದು ಹಾರೈಸುತ್ತೇನೆ.

ಕೆ. ವೆಂಕಟೇಶ

ಕ್ರೈಸ್ಟ್ ಕಾಲೇಜ್ ಕನ್ನಡ ವಿಭಾಗದ ಬಗ್ಗೆ ನನ್ನ ಅಭಿಪ್ರಾಯ–ಆ ಕ್ರಿಸ್ತನ ಆಣೆಯಾಗಿಯೂ ಒಳ್ಳೇ ಅಭಿಪ್ರಾಯವೇ—ಆದರೆ. ಇನ್ನೊಬ್ಬರಲ್ಲಿ ಹೇಳಿಕೊಳ್ಳುವಷ್ಟು ಸ್ಪಷ್ಟ ರೂಪ ಪಡೆದವುಗಳಲ್ಲ. ಒಂದು ರೀತಿಯ ಹೆಮ್ಮೆ, ಒಲವು, ಖುಷಿ, ಬೆರೆತ ಭಾವ ಮಾತ್ರ (ಅವಕ್ಕೆಲ್ಲಾ ಕಾರಣಗಳಿವೆ). ಆದರೀಗ ಈ ಪುಟ ಬಣ್ಣವಾಗಬೇಕಾದ್ದು ನನ್ನ ಅಭಿಪ್ರಾಯಗಳಿಂದ–ಕಾಲೇಜು ಬಿಟ್ಟು ಎಷ್ಟೋ ದಿನಗಳಾದ್ದರಿಂದ ಸಂಬಂಧಪಟ್ಟವರ ಭಯವಿಲ್ಲದೆ, ಕೆಲವು ನನಗನಿಸಿದ ಸತ್ಯಗಳ ಚಲಾವಣೆಗೆ ತರಬಹುದು ಅನ್ನಿಸುತ್ತದೆ—ಮೊದಲಿಗೆ—ಕ್ರೈಸ್ಟ್ ಕಾಲೇಜ್ ಕನ್ನಡ ವಿಭಾಗಕ್ಕೆ ಒಂದು ವಿಶೇಷ ಕಳೆ, ಇಲ್ಲಿ ಇದ್ದ ತೆಲಗು, ತಮಿಳು, ಸಂಸ್ಕೃತ. ಮಳೆಯಾಳಂ, ಫ್ರೆಂಚ್ ವಿಭಾಗಗಳಿಂದ–ವಿಭಾಗಗಳನ್ನಲ್ಲಾಗದಿದ್ದರೂ, ಇಲ್ಲಿ ಅವುಗಳನ್ನು ಕಲಿಸುತ್ತಿದ್ದವರಿಂದ–ಒಂದು ರೀತಿ, ಬೇರೆ ದೇಶಕ್ಕೆ ಹೋದಾಗ ಭಾರತ ಮತ್ತು ಭಾರತೀಯತೆಗೆ ಸಂಬಂಧ ಪಟ್ಟಂತೆ ನಮ್ಮಲ್ಲಿ ಒಂದು ರೀತಿಯ ವಿರಹ ಅಥವಾ ಒಲವು ಮಾಡುತ್ತದಲ್ಲವೇ, ಹಾಗೆ–ಕನ್ನಡ ಇಲ್ಲಿ ಹೆಚ್ಚು ಪ್ರಿಯವಾಗಿತ್ತು–ಇಲ್ಲವೆ ಪ್ರಿಯವಾಗಿ ಮಾರ್ಪಾಡಾಗಿತ್ತು. ಎಲ್ಲ ಪೀರಿಯಡ್‌ಗಳಲ್ಲೂ ಹಿಂದಿನ ಬೆಂಚುಗಳಲ್ಲಿ ಕುಳಿತು ಕತೆ–ಕಾದಂಬರಿ ಓದುತ್ತಲೋ (ಇದೂ

ಕನ್ನಡ ವಿಭಾಗದ ಕೊಡುಗೆಯೋ) ಲೆಕ್ಚರರ ಮುಖಾಭಿನಯ ನೋಡುತ್ತಲೋ ಇರುತ್ತಿದ್ದ ನಾನು, ಕನ್ನಡ ಪಾಠಗಳಿಗೆ ಮಾತ್ರ ಮೊದಲೆರಡು ಬೆಂಚುಗಳ ಗುತ್ತಿಗೆ ಪಡೆದಿದ್ದ ಅದೃಷ್ಟ ಹೀನರ ಜೊತೆ ಹಾಜರಿರುತ್ತಿದ್ದೆ–ಕನ್ನಡದಲ್ಲಿ ಪೂರ್ತಿ ಅಂಕಗಳನ್ನು ತೆಗೆಯೋ ಉದ್ದೇಶದಿಂದಲ್ಲ–ಕನ್ನಡ ಪಾಠಗಳ ಮಜದಿಂದಾಗಿ; ಒಂದು ರೀತಿಯ ಬಿಸಿ ಇರುತ್ತಿತ್ತು ಈ ತರಗತಿಗಳಲ್ಲಿ ಎಂದರೂ ಒಪ್ಪಿಗೆಯೇ. ಇನ್ನೊಂದು ಹೇಳಲೇ ಬೇಕೆನಿಸುವ ವಿಷಯವೆಂದರೆ ಗುರುಗಳಿಗೂ ನಮಗೂ (ಬೇಡ, ನನಗೂ) ಏರ್ಪಟ್ಟಿದ್ದ (ಬೆಳೆದುಬಂದ) ಹಿತಕರ ಸಂಪರ್ಕ-ಎಲ್ಲರಿಗೂ ಸಮ ಅವಕಾಶವಿರುತ್ತಿತ್ತು, ಆದರೆ ಆ ರಾಗಕ್ಕೆ ಬೆಸೆದುಕೊಳ್ಳುವವರು ಕಡಿಮೆ ಇದ್ದರು, (ನನ್ನ ಜೊತೆ) ಇದಲ್ಲದೆ ಬೇರೆ ಕಾಲೇಜಿನ ನನ್ನ ಕೆಲವು ಮಿತ್ರರು ಹೇಳಿ, ತಿಳಿದ. "ಸೆಂಟ್ರಲ್ ಕಾಲೇಜ್ ಬಿಟ್ಟರೆ ನಮ್ಮ ಕಾಲೇಜೇ ಇಡೀ ದಕ್ಷಿಣ ಭಾರತದಲ್ಲೆ ಹೆಚ್ಚು ಕನ್ನಡ ಪುಸ್ತಕ ಅಥವಾ ಒಟ್ಟಾರೆ ಪುಸ್ತಕಗಳ ಬಿಡುಗಡೆ ಮಾಡಿರುವ ಕಾಲೇಜು, ಅರ್ಥಾತ್–ಕನ್ನಡ ಸಂಘ, ಅರ್ಥಾತ್ ಒನ್ ಮ್ಯಾನ್ ಶೋ," ನನ್ನನ್ನೂ, ಇನ್ನೂ ಎಷ್ಟೋ ವಿದ್ಯಾರ್ಥಿಗಳನ್ನು ಅಕ್ಕರೆಯ ಗೂಡು ಕಟ್ಟುವಂತೆ ಮಾಡಿತು–ಇನ್ನೂ ವಾಸಿಸುತ್ತಿದ್ದೇವೆ. ಇನ್ನೇನು ಹೇಳಲಿ ಪ್ರಯಾಣ ಈಗ ಶುರುವಾಗಿದೆ. ಗುರಿ ಏನೇ ಆಗಲಿ; ಪ್ರಯಾಣಕ್ಕಂತು ಇಲ್ಲಿನ ನೆನಪಗಳು ಒಂದು ರೀತಿಯ 'ಅಮೃತಾಂಜನ್' ಇದ್ದ ಹಾಗೆ.

ಎಸ್. ರವಿ

ಕನ್ನಡ ಭಾಷೆಯ ಅಭಿವೃದ್ಧಿ—ಈ ಕಾರಣವನ್ನು ಮುಂದಿಟ್ಟುಕೊಂಡು ಕೆಲಸಮಾಡುವ ಅನೇಕ ಸಂಘ–ಸಂಸ್ಥೆಗಳನ್ನು ನಾವು ಕಂಡಿದ್ದೇವೆ. ಯಾವುದೇ ಭಾಷೆ ನಿಜವಾಗಿಯೂ ತನ್ನ ಪರಂಪರೆ, ಪ್ರತಿಷ್ಠೆ, ಗೌರವಗಳನ್ನು ಉಳಿಸಿಕೊಂಡು ಮುನ್ನಡೆಯಬೇಕಾದರೆ ಇಂಥ ಸ್ಥಾಪನೆಗಳು ಅತಿಮುಖ್ಯ ಪಾತ್ರವಹಿಸುತ್ತವೆ. ಈ ದಿಶೆಯಲ್ಲಿ ನಮ್ಮ ಸಹೃದಯ ಕನ್ನಡಾಭಿಮಾನಿಗಳೇನೂ ಕಡಿಮೆ ದುಡಿಯುತ್ತಿಲ್ಲ. ಆದರೆ ಅವರ ಈ ಪ್ರಯತ್ನ ಎಷ್ಟರ ಮಟ್ಟಿಗೆ ಸಫಲವಾಗಿದೆ? ಇದು ಒಂದು ಒಳ್ಳೆಯ ಪ್ರಶ್ನೆ. ನಾವು ಮಾಡುವ ಕಾರ್ಯದ ಸಫಲತೆ ಅದನ್ನು ನಾವು ಎಷ್ಟು ಸುಗಮವಾಗಿ ನಿರ್ವಹಿಸುತ್ತೇವೆ ಎಂಬುದರ ಮೇಲೆ ಹೆಚ್ಚು ಅವಲಂಬಿಸುತ್ತಿರುತ್ತದೆ. ಕಾರ್ಯನಿರ್ವಹಣೆ ಗೋತಾ ಹೊಡೆದ ಕಾರಣ ಇಂಥ ಅನೇಕಾನೇಕ ಸಂಸ್ಥೆಗಳೂ ಈ ನಿಟ್ಟಿನಲ್ಲಿ ಯಶಸ್ಸನ್ನು ಗಳಿಸಲು ಸೋತು ಶೋಚನೀಯ ಸ್ಥಿತಿಗಿಳಿದಿವೆ.

ಕನ್ನಡ ಭಾಷೆ ಇನ್ನೂ ಹೆಚ್ಚು ಪ್ರಾಬಲ್ಯ ಪಡೆಯಲು ಬೇಕಾದ ಸರಿಯಾದ ಯೋಜನೆಗಳು, ಅವುಗಳನ್ನು ಕಾರ್ಯರೂಪಕ್ಕೆ ತರುವ ವಿಧಾನಗಳು—ಇವುಗಳನ್ನು

ಸರಿಯಾದ ರೀತಿಯಲ್ಲಿ ಆಳತೆಮಾಡಿ ತಮ್ಮ ಪ್ರಯತ್ನದಲ್ಲಿ ಯಶಸ್ಸನ್ನು ಕಂಡ ಕೆಲವೇ ಕನ್ನಡ ಸಂಘಗಳಲ್ಲಿ, ಇಡಿಯ ಕರ್ನಾಟಕದಲ್ಲಿಯೇ ಮಹತ್ತರ ಸ್ಥಾನ ಗಿಟ್ಟಿಸಿಕೊಂಡ ಸಂಘ—ಕ್ರೈಸ್ಟ್ ಕಾಲೇಜ್ ಕನ್ನಡ ಸಂಘ. ಅತಿ ಭಿನ್ನವಾಗಿ ಕೆಲಸಮಾಡುವ ಇದರ ಧಾಟಿ ನಿಜಕ್ಕೂ ಶ್ಲಾಘನೀಯವಾದುದು. ಈ ಸಂಘವು ಶೀಘ್ರದಲ್ಲಿಯೇ ಹೊರಡಿಸ ಲಿರುವ ತನ್ನ 50ನೆಯ ಪುಸ್ತಕವೇ ಇದಕ್ಕೆ ಸಾಕ್ಷಿ. ಕನ್ನಡ ಸಾಹಿತ್ಯದಲ್ಲಿ ಎಲ್ಲೋ ಅಡಗಿರುವ ಪುಸ್ತಕರತ್ನಗಳನ್ನು ಜನಸಾಮಾನ್ಯರಿಗೆ ನೇರವಾಗಿ ಪರಿಚಯಮಾಡಿ ಕೊಡುವ ಈ ಸಂಘದ ಕಾರ್ಯಪರಿ ಶ್ರೇಷ್ಠವಾದದ್ದು. ನೈಜ ಸಾಹಿತ್ಯಪ್ರಿಯನಿಗೆ ಈ ಸಂಘವು ಒಂದು ಪುಸ್ತಕದ ಗಣಿಯೇ ಸರಿ. ಇವರು ಹೊರತರುವ ಪುಸ್ತಕಗಳು ಬೆಲೆಯ ದೃಷ್ಟಿಯಿಂದ ಹಿಡಿದು ಗುಣದ ಮಟ್ಟದವರೆಗೆ ನಮ್ಮಂಥವರನ್ನು ಆಕರ್ಷಿಸುತ್ತವೆ.

ಇನ್ನು ಯುವ ಬರಹಗಾರರಿಗೆ ಮತ್ತು ಬರೆಯಲು ತೊಡಗುತ್ತಿರುವ ವಿದ್ಯಾರ್ಥಿಗಳಿಗೆ 'ಕ್ರೈಸ್ಟ್ ಕಾಲೇಜ್ ಕನ್ನಡ ಸಂಘ' ಒಂದು ಶಾಂತಿನಿಕೇತನವಿದ್ದ ಹಾಗೆ. ಇವರಿಗೆ ಸಂಘ ನೀಡುವ ಆಶ್ರಯ ಹಾಗೂ ಉತ್ತೇಜನ ಬೇರೆಡೆ ಸಿಗುವುದು ಅಪರೂಪ. ಸಂಘದ ಆಸರೆ ಬಯಸಿ ಬಂದ ಅನೇಕ ಸಸಿಗಳು ಈಗಾಗಲೇ ಹೆಮ್ಮರ ಗಳಾಗಿ ಬೆಳೆದುನಿಂತಿರುವುದು ತಿಳಿದ ಸಂಗತಿಯೇ.

ಒಟ್ಟಾರೆ, ಇಂಥದ್ದೇ ರೀತಿಯಲ್ಲಿ ಹೆಚ್ಚು ಹೆಚ್ಚು ಕನ್ನಡ ಸಂಘಗಳು ಉದ್ಭವಿಸಿ ದಾಗ ಸಿರಿಗನ್ನಡದ ಸುವಾಸನೆ ದೇಶದ ಮೂಲೆಮೂಲೆಗಳಲ್ಲಿಯೂ ಹರಡುವುದರಲ್ಲಿ ಸಂಶಯವಿಲ್ಲ. ಕ್ರೈಸ್ಟ್ ಕಾಲೇಜ್ ಕನ್ನಡ ಸಂಘದ ಮಾದರಿಯನ್ನು ಅನುಕರಿಸುವು ದರಲ್ಲಿ, ಸೋತು ಸೊರಗಿರುವ ಇತರ ಕನ್ನಡ ಸಂಘಗಳು ಯಾವ ಲಜ್ಜೆಯನ್ನೂ ತೋರಿಸದಿದ್ದಲ್ಲಿ ಈ ಕನಸು ನನಸಾಗುವುದೆ ?

ಕೀರ್ತಿಶೇಖರ್

ನಿಶ್ಶಬ್ದ. ಪ್ರಶಾಂತ ಹಾಗೂ ಸೊಗಸಾದಂತಹ ವಾತಾವರಣದಲ್ಲಿ ನಮ್ಮ ಕಾಲೇಜು ಸ್ಥಾಪಿತವಾಗಿದೆ. ಈ ಒಂದು ವಾತಾವರಣವನ್ನೇ ಉಪಯೋಗಿಸಿಕೊಂಡು ಕ್ರೈಸ್ಟ್ ಕಾಲೇಜಿನಷ್ಟೇ ಪ್ರಸಿದ್ಧಿ ಹೊಂದುತ್ತಿರುವ ಇನ್ನೊಂದು ಸಂಸ್ಥೆಯೆಂದರೆ, ಅದು ನಮ್ಮ ಕಾಲೇಜಿನ 'ಕನ್ನಡ ಸಂಘ'. ಸಂಘದ 50ನೆಯ ಪ್ರಕಟಣೆಯು ಹೊರ ಬರುತ್ತಿರುವ ಸಮಯದಲ್ಲಿ ನೆನಪಿನ ಸಂಚಿಕೆಯು ಸಹ ಹೊರಬರಲಿದೆ. ಈ ಸಂದರ್ಭ ದಲ್ಲಿ ನನ್ನ ಅಭಿಪ್ರಾಯಗಳನ್ನು ಹಂಚಿಕೊಳ್ಳಲು ಕೊಟ್ಟಿರತಕ್ಕಂತಹ ಅವಕಾಶಕ್ಕೆ ನಿಜವಾಗಲೂ ನಾನು ಧನ್ಯ.

ನಮ್ಮ ಕಾಲೇಜಿನ ಕನ್ನಡ ಸಂಘವು ಅಸ್ತಿತ್ವಕ್ಕೆ ಬಂದು ಈಗಾಗಲೇ 13 ವರ್ಷ

ಗಳು ಕಳೆದಿವೆ. ಇಲ್ಲಿಯ ತನಕವೂ ಅದರ ಕಾರ್ಯ ಅವ್ಯಾಹತವಾಗಿ ನಡೆಯುತ್ತಲೇ ಬಂದಿದೆ. ಗಾಳಿಯ ವಿರುದ್ಧವಾಗಿ ಚಲಿಸುವುದು ಎಷ್ಟು ಅಸಾಧ್ಯವೋ ಅಥವಾ ಸಮುದ್ರದ ಅಲೆಗಳ ವಿರುದ್ಧ ದೋಣಿಯಲ್ಲಿ ಸಾಗುವುದು ಎಷ್ಟು ಕಷ್ಟವೋ, ಅಂತಹ ಕಷ್ಟವಾದ ಕೆಲಸವನ್ನು ಸಂಘದ ಸ್ಥಾಪನೆಯ ದಿನದಿಂದ ಮಾಡುತ್ತಿದೆ ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಈ ಒಂದು ಸಂದರ್ಭದಲ್ಲಿ ನಮ್ಮ ಕಣ್ಣಿನ ಮುಂದೆ ಬರುವ ವ್ಯಕ್ತಿಗಳೆಂದರೆ ಶ್ರೀ ಶ್ರೀನಿವಾಸರಾಜುರವರು, ಶ್ರೀ ಹೆಚ್. ಆರ್. ರಾಮಕೃಷ್ಣರಾವ್‌ರವರು, ಶ್ರೀ ಎಚ್.ಡಿ.ಎಸ್.ಕೆ. ಶಾಸ್ತ್ರಿರವರು ಮತ್ತು ಇನ್ನೂ ಅನೇಕರು. ಕನ್ನಡಕ್ಕೆ ಯಾವುದೇ ಪ್ರಾಶಸ್ತ್ಯವು ದೊರೆಯದೇ ಇರತಕ್ಕಂತಹ ಸ್ಥಳದಲ್ಲಿ ಕನ್ನಡದ ಪ್ರಚಾರ ಮಾಡುವುದು ಈ ಸಂಘದ ಗುರಿಯಾಗಿದೆ, ಇದು ನಿಜವಾದ ಕನ್ನಡ ರಾಜ್ಯೋತ್ಸವ. ಈ ರಾಜ್ಯೋತ್ಸವವು ಪ್ರತಿನಿತ್ಯ ನಡೆಯುತ್ತಿರುತ್ತದೆ.

ನಮ್ಮ ಸಂಘವು ಇತರೇ ಸಂಘಗಳಿಗಿಂತ ಎಲ್ಲ ರೀತಿಯಲ್ಲೂ ಭಿನ್ನ. ಕಾಲೇಜಿನ ಎಲ್ಲಾ ಕನ್ನಡ ವಿದ್ಯಾರ್ಥಿಗಳು ಇದಕ್ಕೆ ಸದಸ್ಯರಾಗಿರುತ್ತಾರೆ. ಆದರೆ ಹೆಚ್ಚಿನ ಅಂಕ ಗಳನ್ನು ಪಡೆದವರು ಆ ತರಗತಿಯನ್ನು ಸಂಘದಲ್ಲಿ ಪ್ರತಿನಿಧಿಸತಕ್ಕವರಾಗಿರುತ್ತಾರೆ. ಇಂತಹ ಒಂದು ಅವಕಾಶ ನನಗೂ ಎರಡು ವರ್ಷಗಳು ಲಭಿಸಿತ್ತು. ಇನ್ನು ನಮ್ಮ 'ಸರಸ್ವತಿ ಪೂಜೆ'ಯ ಬಗ್ಗೆ ಹೇಳುವುದಾದರೆ ಈ ಸಂದರ್ಭದಲ್ಲಿ ವಿದ್ಯಾರ್ಥಿಗಳೆಲ್ಲರೂ ತಮ್ಮ ಶಕ್ತ್ಯಾನುಸಾರ ಹಣವನ್ನು ಹಾಕಿ, ಕಾಲೇಜಿನ ಗ್ರಂಥಾಲಯಕ್ಕೆ ಪುಸ್ತಕಗಳನ್ನು ಕೊಡುವುದು. ನಾವು ವಿದ್ಯಾರ್ಥಿಗಳಾಗಿದ್ದಾಗ ಇದು ಸ್ವಲ್ಪಮಟ್ಟಿಗೆ ಸೋಜಿಗವಾಗಿ ಕಂಡರೂ ಈಗ ಅದರ ಮಹತ್ವವು ಅರಿವಾಗುತ್ತಿದೆ. ಇದೊಂದು ಅತ್ಯದ್ಭುತ ವಾದಂತಹ ಯೋಜನೆಯೆಂದು !!

ಇನ್ನು ಸಂಘದ ಪ್ರಮುಖ ಚಟುವಟಿಕೆ ಎಂದರೆ ಕವನ ಮತ್ತು ಪ್ರಬಂಧಸ್ಪರ್ಧೆ ಯನ್ನು ಏರ್ಪಡಿಸುವುದು. ಈ ಎರಡೂ ಸ್ಪರ್ಧೆಗಳೂ ದ. ರಾ. ಬೇಂದ್ರೆ ಮತ್ತು ಅ.ನ. ಕೃಷ್ಣರಾಯರ ಹೆಸರಿನಲ್ಲಿ ನಡೆಸಲಾಗುತ್ತದೆ. ಅತ್ಯುತ್ತಮ ಕವನಗಳಿಗೆ ಮತ್ತು ಲೇಖನಗಳಿಗೆ ಪುರಸ್ಕಾರ ಪುಸ್ತಕ ರೂಪದಲ್ಲಿ. ಯುವಪೀಳಿಗೆಯ ಸಾಹಿತ್ಯದೃಷ್ಟಿ ಯನ್ನು ಪ್ರೋತ್ಸಾಹಿಸಿ ಬೆಳಕಿಗೆ ತರುವ ಕಾರ್ಯವನ್ನು ಕೈಗೊಂಡಿದೆ. ಇದೇ ಅಲ್ಲದೆ ಕೆಲವೇ ವರ್ಷಗಳ ಹಿಂದೆ ಬಹಳ ಯಶಸ್ವಿಯಾಗಿ ದ.ರಾ. ಬೇಂದ್ರೆ ಉಪನ್ಯಾಸ ಮಾಲೆ ಯನ್ನು ಏರ್ಪಡಿಸಿದ ಕೀರ್ತಿಯೂ ಸಹ ಈ ಸಂಘಕ್ಕೆ ಸಂದಿದೆ.

ಈ ವರ್ಷ ಪ್ರೊ. ಎ. ಎನ್. ಮೂರ್ತಿರಾಯರ ಲಲಿತಪ್ರಬಂಧಗಳು 50ನೇ ಪುಸ್ತಕವಾಗಿ ಸಂಘದಿಂದ ಪ್ರಕಟವಾಗಲಿದೆ. ಇದು ಸಂಘದ ಚರಿತ್ರೆಯಲ್ಲಿ ಮಹತ್ವದ ಘಟ್ಟ. ಸಂಘವು ಸಾಗಬೇಕಾದ ದಾರಿ ಇನ್ನೂ ಸಾಕಷ್ಟಿದೆ ಎಂದು ಹೇಳಿದರೆ ತಪ್ಪಾಗ ಲಾರದು. ಈ ಸಂದರ್ಭದಲ್ಲಿ ಆ ಹಿಂದಿನ ದಿನಗಳನ್ನು ನೆನೆದರೆ, ಸಾಗಿ ಬಂದ ದಾರಿ

ಸಾಕಷ್ಟು ತೃಪ್ತಿಯನ್ನು ಕೊಡುತ್ತದೆ. ಈ ಸಂದರ್ಭದಲ್ಲಿ ಸಂಘದ ಮುಂದಿನ ಎಲ್ಲ ಕಾರ್ಯಗಳಿಗೂ ಶುಭ ಕೋರುತ್ತೇನೆ.

ಪಿ. ಸದಾಶಿವರೆಡ್ಡಿ

ನಾನು 1969–74ರ ಅವಧಿಯಲ್ಲಿ ಕ್ರೈಸ್ಟ್ ಕಾಲೇಜಿನ ವಿದ್ಯಾರ್ಥಿಯಾಗಿದ್ದೆ. ಪ್ರಥಮ ಭಾಷೆಯಾಗಿ ಕನ್ನಡವನ್ನು ತೆಗೆದುಕೊಂಡಿದ್ದ ನನಗೆ, ಕನ್ನಡ ವಿಭಾಗ ಸ್ಫೂರ್ತಿಯ ನೆಲೆಯಾಗಿತ್ತು. 1973ರಲ್ಲಿ ಕನ್ನಡ ಸಂಘ ಪ್ರಾರಂಭವಾಯಿತು. ನನ್ನ ಗುರುಗಳಾದ ಶ್ರೀ ಟಿ. ಶ್ರೀನಿವಾಸರಾಜು ಅವರು ಕನ್ನಡ ವಿದ್ಯಾರ್ಥಿಗಳನ್ನು ಒಗ್ಗೂಡಿಸಿ 'ಕನ್ನಡ ಸಂಘ'ವನ್ನು ಕಟ್ಟಿದರು. ಆಗ ವಿದ್ಯಾರ್ಥಿಯಾಗಿದ್ದ ನನಗೆ ಇಂದಿಗೂ ಆ ಘಟನೆ ಹೆಮ್ಮೆಯ ವಿಷಯವಾಗಿದೆ. ರಾಜು ಅವರದು ONE MAN BRIGADE.

ರಾಜು ಅವರು ವಿದ್ಯಾರ್ಥಿಗಳನ್ನು ಸದಾ ಒಂದಲ್ಲ ಒಂದು ವಿಷಯದಲ್ಲಿ ತೊಡಗಿಸುತ್ತಿದ್ದರು. ತರಗತಿಗಳ ಹೊರಗೆ ಅತ್ಯಂತ ಸಲುಗೆಯಿಂದ ನಡೆದುಕೊಳ್ಳುತ್ತಿದ್ದರೂ ತರಗತಿಗಳಲ್ಲಿ ತುಂಬಾ ಗಂಭೀರವಾಗಿರುತ್ತಿದ್ದರು. ನಮ್ಮ ಬರವಣಿಗೆಗಳನ್ನು ತಿದ್ದಿ ಕತ್ತರಿಸಿ ಕಾಲೇಜು ಮ್ಯಾಗಜೀನ್‌ನಲ್ಲಿ ಅಥವಾ ಬೇರೆ ಕಾಲೇಜು ಸ್ಪರ್ಧೆಗಳಿಗೆ ಕಳಿಸುತ್ತಿದ್ದರು. ತರಗತಿಗಳಲ್ಲಿ ಶಿಸ್ತನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಿದ್ದರು. ಒಂದು ದಿನವೂ ತರಗತಿಗಳಿಗೆ ತಡವಾಗಿ ಬಂದಿದ್ದಾಗಲಿ, ಬೇಗ ಬಿಟ್ಟಿದ್ದಾಗಲಿ, ಕುಳಿತು ಪಾಠ ಮಾಡಿದ್ದಾಗಲಿ ನನಗೆ ನೆನಪಿಲ್ಲ. ತರಗತಿಯ ಒಳಗೆ, ಹೊರಗೆ ಅನುಮಾನಗಳನ್ನು ಪ್ರೀತಿಯಿಂದ ದೂರಮಾಡುತ್ತಿದ್ದರು.

'ಕನ್ನಡ ಸಂಘ'ದ ಚಟುವಟಿಕೆಗಳಿಗೆ ಹೆಚ್ಚಿನ ಪ್ರೋತ್ಸಾಹ ನೀಡುತ್ತಿದ್ದ ಪ್ರಿನ್ಸಿ ರೆ॥ ಫಾ॥ ಮಾಣಿ ಜೈಲ್ಸ್, ಭೌತಶಾಸ್ತ್ರ ವಿಭಾಗೂ ಮುಖ್ಯಸ್ಥರಾದ ಶ್ರೀ ಎಚ್.ಆರ್. ರಾಮಕೃಷ್ಣರಾವ್ ಮತ್ತು ಗಣಿತಶಾಸ್ತ್ರ ವಿಭಾಗದ ಶ್ರೀ ಎಚ್. ಡಿ. ಎಸ್. ಕೆ. ಶಾಸ್ತ್ರಿಗಳು ನಿಜವಾಗಿಯೂ ಅಭಿನಂದನಾರ್ಹರು.

ನನ್ನ ಕನ್ನಡ ಸಂಘ ಇದೀಗ ತನ್ನ 50ನೆಯ ಪುಸ್ತಕವಾಗಿ ಪ್ರೊ. ಎ.ಎನ್. ಮೂರ್ತಿರಾಯರ 'ಸಮಗ್ರ ಲಲಿತಪ್ರಬಂಧ'ಗಳನ್ನು ಪ್ರಕಟಿಸುತ್ತಿರುವುದು ಸಂತೋಷದ ಸಂಗತಿ. ನನ್ನ ಸಂಘ ಇನ್ನೂ ಇಂತಹ ಕೃತಿಗಳನ್ನು ಹೆಚ್ಚು ಹೆಚ್ಚಾಗಿ ಪ್ರಕಟಿಸಲಿ ಎಂದು ಆಶಿಸುತ್ತೇನೆ.

ಎಂ. ದೇವೇಂದ್ರಬಾಬು

ನಾನು ಹಳ್ಳಿಯಿಂದ ಬಂದು ಬೆಂಗಳೂರಿನಲ್ಲಿ ನೆಲಸಿದವನು. ನಾನು ಕ್ರೈಸ್ಟ್ ಕಾಲೇಜಿಗೆ ಅರ್ಜಿ ಹಾಕುವ ಸಂದರ್ಭದಲ್ಲಿ ನನ್ನ ಸಂಬಂಧಿಕರೊಬ್ಬರು ಆ ಕಾಲೇಜಿಗೆ ಅರ್ಜಿ ಹಾಕುವುದು ಬೇಡ. ಅಲ್ಲಿ ಜವಾನನಿಂದ ಹಿಡಿದು ಪ್ರಿನ್ಸಿಪಾಲರವರೆಗೆ ಇಂಗ್ಲಿಷ್ ನಲ್ಲಿ ಮಾತನಾಡುತ್ತಾರೆ ಎಂದು ಹೇಳಿದರು. ಆದರೆ ನಾನು ಏನನ್ನೂ ಯೋಚನೆ ಮಾಡದೆ 1973ರಲ್ಲಿ ಪ್ರಥಮ ಪಿ.ಯು.ಸಿ.ಗೆ ಸೇರಿದೆ. ಕಾಲೇಜಿಗೆ ಸೇರಿದ ಕೆಲವೇ ದಿನಗಳಲ್ಲಿ ನನ್ನ ಸಂಬಂಧಿಕರು ಹೇಳಿದ ಮಾತು ನಿಜವಾಯಿತು. ಎಲ್ಲವೂ ಇಂಗ್ಲಿಷಿ ನಲ್ಲಿ ನಡೆಯುತ್ತಿದ್ದರಿಂದ ಪಾಠಗಳು ಸರಿಯಾಗಿ ಅರ್ಥವಾಗುತ್ತಿರಲಿಲ್ಲ. ಇದರ ನಡುವೆ ಕನ್ನಡ ತರಗತಿಗಳು ಓಯಸಿಸ್‌ನಂತೆ ಹೊಸ ಚೇತನವನ್ನು ನೀಡುತ್ತಿದ್ದವು. ಕನ್ನಡ ಸಂಘದ ಚಟುವಟಿಕೆಗಳು ಪ್ರಾರಂಭಗೊಂಡವು. ಕ್ರಮೇಣ ಕನ್ನಡ ಬರುವ ಮಾತನಾಡುವ ಅಧ್ಯಾಪಕರು, ವಿದ್ಯಾರ್ಥಿಗಳು ಪರಿಚಯವಾದರು. ಕನ್ನಡ ಸಂಘ ನಾನು ಕಾಲೇಜಿನಲ್ಲಿ ಓದುವ ಧೈರ್ಯವನ್ನು ತಂದುಕೊಟ್ಟಿತು.

ಈ ನನ್ನ ಅನುಭವ ಅನೇಕರಿಗೆ ಆಗಿರಬಹುದು. ಇಂತಹ ಕಾಸ್ಮಪೊಲಿಟನ್ ಕಾಲೇಜಿನಲ್ಲಿ ಕನ್ನಡ ವಿದ್ಯಾರ್ಥಿಗಳಿಗೆ ಧೈರ್ಯ ತುಂಬಿ, ಕನ್ನಡ ಸಂಘವನ್ನು ಕಟ್ಟು ವುದು ಎಷ್ಟು ಕಷ್ಟದ ಕೆಲಸ ಎಂಬುದು ಅರ್ಥವಾಗುತ್ತದೆ. 1973ರಲ್ಲಿ ಪ್ರಾರಂಭ ವಾದ ಕನ್ನಡ ಸಂಘ ಇಂದು ದೊಡ್ಡದಾಗಿ ಬೆಳೆದು ನಾಡಿನಾದ್ಯಂತ ಹೆಸರು ಮಾಡಿರು ವುದು ಕ್ರೈಸ್ಟ್ ಕಾಲೇಜಿನ ಮಾಜಿ ಮತ್ತು ಹಾಲಿ ವಿದ್ಯಾರ್ಥಿಗಳಿಗೆ ಹೆಮ್ಮೆಯ ವಿಷಯ.

ಕಾಲೇಜಿಗೆ ಹೊಸದಾಗಿ ಬಂದ ವಿದ್ಯಾರ್ಥಿಗಳಿಗೆ ಪ್ರಾರಂಭದಲ್ಲಿ ಆಗುವ ಅನು ಭವ ಕ್ರಮೇಣ ಬೇರೊಂದು ಅನುಭವವಾಗಿ ಬದಲಾಗುವುದು ಒಂದು ವಿಶೇಷ. ಕನ್ನಡ ವಿಭಾಗದ ಪ್ರೀತಿ, ಆದರಗಳನ್ನು ಮರೆಯುವ ಹಾಗೇ ಇಲ್ಲ.

ಕಾಲೇಜಿನ ಕನ್ನಡ ಸಂಘ ಇನ್ನೂ ದೊಡ್ಡದಾಗಿ ಬೆಳೆಯಬೇಕು. ಅದರ ಬಹುಮುಖ ಚಟುವಟಿಕೆಗಳಿಗೆ ಕಾಲೇಜಿನ ಹಿರಿಯ ಕನ್ನಡ ವಿದ್ಯಾರ್ಥಿಗಳು ಹಣ ಸಂಗ್ರಹಿಸಿ ನೀಡುವ ಕಾಲ ಬಂದಿದೆ. ಕನ್ನಡ ಸಂಘದ ಚಟುವಟಿಕೆಗಳಲ್ಲಿ ಹಿರಿಯ ಕನ್ನಡ ವಿದ್ಯಾರ್ಥಿಗಳು ಭಾಗವಹಿಸಲು ಅವಕಾಶ ಮಾಡಿಕೊಡಬೇಕೆಂದು ನನ್ನ ವಿನಂತಿ.

ಕನ್ನಡ ಸಂಘದ ಬಗ್ಗೆ ವಿವಿಧ ಪತ್ರಿಕೆಗಳಲ್ಲಿ

1.	HINDU	1983
2.	ಗ್ರಂಥಲೋಕ	1983
3.	ಪ್ರಜಾಮತ	1984
4.	ಅಭಿಮಾನಿ	1986
5.	Indian Express	1988
6.	ಸಾಹಿತ್ಯ ಸಂಗಾತಿ	1989
7.	ಲಂಕೇಶ್ ಪತ್ರಿಕೆ	1991

The Hindu

Between You and Me

31 Jan 1983

On the tenth anniversary of Kannada Sangha, Christ College, let us offer a many-coloured bouquet.

What makes the Kannada Sangha, Christ College, in Bangalore, unique ? It is different: It is original: It works, quietly.

It couldn't be otherwise. Srinivasa Raju, who has tended the sapling with infinite care, believes in work.

The story should interest you. Ten years ago, the College had five Kannada students; now the number is 100.

In ten years, the Kannada Sangha has built a fine library of rare books of interest to the scholar.

Again, in ten years, the Kannada Sangha has published a veriety of books, essays, criticism, plays, stories, poetry, research; also in Tamil and English.

Together, don't they suggest a refreshingly new outlook ?

Kannada is in the air. It is loved and respectd. Non-Kannada teachers have learnt to speak Kannada.

How do you explain the miracle ? There is only on word; love.

It will interest you to know that there are no elections; students who score high marks in Kannada automatically qualify for office. It is an opportunity for service.

The library has its own story. Students voluntarily contribute, and the money is used to buy valuable books. The names of students are inscribed in the books; they are the donors.

Kannada Sangha has been conducting an essay competition for Collage students in memory of A N. Krishna Rao. The prize winning essays are published for gift. This year, Kannada Sangha has started a poetry contest in memory of D.R. Bendre. The poems selected for awards are published.

If all this has happened, it is because of the fatherly figure of the Principal. His unfailing interest has been the inspiration. Well done, you would say.

C.H.P.

ಗ್ರಂಥಲೋಕ

*ಕರ್ಣಾಟಕ ವಿವಿಧ ಕಾಲೇಜುಗಳ ಕನ್ನಡ / ಕರ್ಣಾಟಕ ಸಂಘಗಳ ಪ್ರಕಟಣೆಗಳು

1983

ಕನ್ನಡ ಗ್ರಂಥ ಪ್ರಕಾಶನದ ಇತಿಹಾಸದಲ್ಲಿ ಕಾಲೇಜುಗಳ ಕನ್ನಡ / ಕರ್ಣಾಟಕ ಸಂಘಗಳ ಪ್ರಕಟಣೆಗಳದೇ ಒಂದು ಪರಂಪರೆ ಇದೆ. ಈ ಪರಂಪರೆಯನ್ನು ಪ್ರಾರಂಭಿಸಿದವರು ಪ್ರಾತಃಸ್ಮರಣೀಯರಾದ **ಶ್ರೀ ಎ. ಆರ್. ಕೃಷ್ಣಶಾಸ್ತ್ರಿಗಳು.** 1918ರಲ್ಲಿ ಎ.ಆರ್.ಕೃ. ಸೆಂಟ್ರಲ್ ಕಾಲೇಜ್ ಕರ್ಣಾಟಕ ಸಂಘವನ್ನು ಪ್ರಾರಂಭಿಸಿದರು. 1918 ರಿಂದ 1939ರ ಕಾಲಾವಧಿಯಲ್ಲಿ ಅನೇಕ ಮುಖ್ಯ ಗ್ರಂಥಗಳನ್ನು ಕರ್ಣಾಟಕ ಸಂಘದಿಂದ ಪ್ರಕಟಿಸಿದರು. ಮೈಸೂರು ಸೀತಾರಾಮ ಶಾಸ್ತ್ರಿಗಳ ಪ್ರತಿಮಾ ನಾಟಕ, ಬಿ. ವೆಂಕೋಬರಾಯರ ಮೈಸೂರು ದೇಶದ ವಾಸ್ತುಶಿಲ್ಪ, ಡಿ. ವಿ. ಗುಂಡಪ್ಪನವರ ವಸಂತಕುಸುಮಾಂಜಲಿ, ನಿವೇದನ, ಉಮರನ ಒಸಗೆ, ಬಿ.ಎಂ.ಶ್ರೀ. ಅವರ ಗದಾಯುದ್ಧ ನಾಟಕಂ, ಇಂಗ್ಲಿಷ್ ಗೀತೆಗಳು, ಅಶ್ವತ್ಥಾಮನ್, ಎಂ.ಆರ್. ಶ್ರೀನಿವಾಸಮೂರ್ತಿ ಅವರ ಭಕ್ತಿ ಭಂಡಾರಿ ಬಸವೇಶ್ವರರು, ಎ. ಆರ್. ಕೃಷ್ಣಶಾಸ್ತ್ರಿ ಅವರ ಭಾಸಕವಿ, ಶ್ರೀನಿವಾಸರ ತಾವರೆ, ಕುವೆಂಪು ಅವರ ಮಲೆನಾಡಿನ ಚಿತ್ರಗಳು, ಜಿ.ಪಿ. ರಾಜರತ್ನಂ ಅವರ ಚೀನಾದೇಶದ ಬೌದ್ಧ ಯಾತ್ರಿಕರು—ಇವು ಆ ಕಾಲದಲ್ಲಿ ಕರ್ಣಾಟಕ ಸಂಘ ಪ್ರಕಟಿಸಿದ ಕೆಲವು ಕೃತಿಗಳು ಎಂಬುದನ್ನು ನೆನೆದರೆ ಸಂಘದ ಪ್ರಕಟಣೆಗಳ ವಸ್ತು ವೈವಿಧ್ಯ ಮತ್ತು ಗುಣಮಟ್ಟದ ಸ್ಥೂಲ ಕಲ್ಪನೆಯಾದರೂ ಬಂದೀತು.

ಮೈಸೂರಿನ ಮಹಾರಾಜ ಕಲಾ ಕಾಲೇಜಿನ ಕರ್ಣಾಟಕ ಸಂಘ 1928ರಲ್ಲಿ ಪ್ರಕಟಿಸಿದ 'ಕಿರಿಯರ ಕಾಣಿಕೆ' ಐತಿಹಾಸಿಕ ಮಹತ್ವವುಳ್ಳ ಇನ್ನೊಂದು ಮುಖ್ಯ ಪ್ರಕಟಣೆ. 1930ರಲ್ಲಿ ಇದೇ ಸಂಘ ಪ್ರಕಟಿಸಿದ 'ತಳಿರು' ಸಂಕಲನದಲ್ಲಿ ಕುವೆಂಪು, ಎಂ. ವಿ. ಸೀತಾರಾಮಯ್ಯ, ಜಿ. ಪಿ. ರಾಜರತ್ನಂ, ಪುತಿನ, ದಿನಕರ ದೇಸಾಯಿ, ತೀನಂಶ್ರೀ, ಎಲ್. ಗುಂಡಪ್ಪ ಮೊದಲಾದವರ ಕವಿತೆಗಳು ಸಂಕಲಿತವಾಗಿವೆ.

---

* 1983ರಲ್ಲಿ ಪ್ರಕಟವಾದ ಲೇಖನ

1952ರಲ್ಲಿ ಶ್ರೀ ಜಿ.ಪಿ. ರಾಜರತ್ನಂ ಅವರು ಸೆಂಟ್ರಲ್ ಕಾಲೇಜಿನ ಕರ್ಣಾಟಕ ಸಂಘದ ಪ್ರಕಟಣೋದ್ಯಮಕ್ಕೆ ಪುನಃಶ್ಚೇತನ ನೀಡಿದರೆನ್ನಬಹುದು. 1952 ರಿಂದ 1962ರ ಹತ್ತು ವರ್ಷಗಳ ಅವಧಿಯಲ್ಲಿ ಜಿ.ಪಿ. ರಾಜರತ್ನಂ ಅವರ ನೇತೃತ್ವದಲ್ಲಿ ಸುಮಾರು ಐವತ್ತೊಂದು ಪುಸ್ತಕಗಳು ಕರ್ಣಾಟಕ ಸಂಘದಿಂದ ಪ್ರಕಟಿತವಾಗಿವೆ. ಶ್ರೀ ಕೆ.ವಿ ಅಯ್ಯರ್ ಅವರ 'ಶ್ರೀ ಕೈಲಾಸಂ ಅವರ ಸ್ಮರಣೆ', ಎಸ್.ಜಿ. ಶಾಸ್ತ್ರಿಗಳ 'ಮೊನ್ನ ವನ್ನ', ಜಿ. ಪಿ. ರಾಜರತ್ನಂ ಅವರ 'ನಾಗನ ಪದಗಳು', ಆರ್. ಎಲ್. ನರಸಿಂಹಯ್ಯನವರ 'ಶಕ್ತಿ', ವಿ.ಸೀ. ಅವರ 'ಹೆಜ್ಜೆ ಪಾಡು', 'ದೀಪಗಳು', ಗೋವಿಂದ ಪೈ ಅವರ 'ಗಿಳಿವಿಂಡು', ಬಿ.ಜಿ.ಎಲ್. ಸ್ವಾಮಿ ಅವರ 'ಪಂಚ ಕಲಶ ಗೋಪುರ, ಮುಂತಾದವು ಈ ಕಾಲಾವಧಿಯಲ್ಲಿ ಪ್ರಕಟವಾದ ಮುಖ್ಯ ಗ್ರಂಥಗಳಲ್ಲಿ ಕೆಲವು. ವಿದ್ಯಾರ್ಥಿಗಳ ಬರವಣಿಗೆಗಳು ಹೆಚ್ಚಿನ ಪ್ರಮಾಣದಲ್ಲಿ ಪ್ರಕಟವಾಗಲು ತೊಡಗಿದ್ದು ರಾಜರತ್ನಂ ಅವರ ಕಾಲದಲ್ಲಿ. ಕಾಲೇಜ್ ಬರವಣಿಗೆ ಎಂಬ ಪ್ರಕಟಣ ಮಾಲೆಯನ್ನೇ ರಾಜರತ್ನಂ ಆರಂಭಿಸಿದರು. ಬಾಲಸರಸ್ವತಿ, ನಮ್ಮ ನಮ್ಮವರು, ಚಿನ್ನದ ದೋಸೆ, ಮಕ್ಕಳ ಮಾತು, ಪದ್ಯಾಂಜಲಿ, ನಮ್ಮ ಬೇಂದ್ರೆಯವರು, ಚಿತ್ರದುರ್ಗದ ಬೆಟ್ಟ ಮೊದಲಾದವು ಈ ಮಾಲೆಯಲ್ಲಿ ಪ್ರಕಟವಾದ ಗ್ರಂಥಗಳು. 'ಪದ್ಯಾಂಜಲಿ'ಯಲ್ಲಿ ಆಗ ವಿದ್ಯಾರ್ಥಿಗಳಾಗಿದ್ದ ಲಂಕೇಶ್, ನಿಸಾರ್ ಅಹಮದ್, ಸುಮತೀಂದ್ರ ನಾಡಿಗರ ಕವಿತೆಗಳನ್ನು ರಾಜರತ್ನಂ ಪ್ರಕಟಿಸಿದ್ದನ್ನು ಇಲ್ಲಿ ನೆನೆಯಬಹುದು. ಪಠ್ಯ ಪುಸ್ತಕಗಳಿಗೆ ಸಂಬಂಧಿಸಿದ 'ಜ್ಞಾಪಕ ರೂಪ'ಗಳ ಪ್ರಕಟಣಾ ಮಾಲೆ ರಾಜರತ್ನಂ ಅವರ ಇನ್ನೊಂದು ನವೀನ ಪ್ರಯತ್ನ. ಜೊತೆಗೆ ಬಾಲಸಾಹಿತ್ಯದ ಪ್ರಕಟಣ ಮಾಲಿಕೆಯೊಂದನ್ನೂ ರಾಜರತ್ನಂ ಪ್ರಾರಂಭಿಸಿದರು.

ಬೆಂಗಳೂರಿನ ಸೆಂಟ್ರಲ್ ಕಾಲೇಜಿನ ಕರ್ನಾಟಕ ಸಂಘ, ಮೈಸೂರಿನ ಮಹಾ ರಾಜರವರ ಕಲಾ ಕಾಲೇಜಿನ ಕರ್ಣಾಟಕ ಸಂಘದ ಪರಂಪರೆಯನ್ನು ನಂತರದ ದಿನ ಗಳಲ್ಲಿ ನಾಡಿನ ಅನೇಕ ಕಾಲೇಜುಗಳ ಕನ್ನಡ / ಕರ್ಣಾಟಕ ಸಂಘಗಳು ಮುಂದು ವರೆಸಿಕೊಂಡು ಬಂದಿವೆ.

ಮೈಸೂರು ವಿಶ್ವವಿದ್ಯಾನಿಲಯದ ವೈದ್ಯಕೀಯ ವಿದ್ಯಾಲಯದ ಕನ್ನಡ ಸಂಘದ 'ವಿಕಾಸ', ಕರ್ನಾಟಕದ ವಿಶ್ವವಿದ್ಯಾನಿಲಯದ ವಿದ್ಯಾರ್ಥಿ ಪ್ರಕಾಶನದ 'ದಿಗಂಬರ', ಹೊನ್ನಾವರದ ಆರ್ಟ್ಸ್ ಅಂಡ್ ಸೈನ್ಸ್ ಕಾಲೇಜಿನ 'ಪುಷ್ಪಹಾರ' – ಕೃಷ್ಣಶಾಸ್ತ್ರಿಗಳ 'ಕಿರಿಯ ಕಾಣಿಕೆ' ಪುಸ್ತಕದ ಮುಂದುವರೆದ ಪರಂಪರೆಯೆಂದೇ ಭಾವಿಸಬಹುದು. ಸೆಂಟ್ರಲ್ ಕಾಲೇಜ್ ಕರ್ಣಾಟಕ ಸಂಘದ ಸುವರ್ಣ ಮಹೋತ್ಸವದ ನೆನಪಿಗೆ 1968 ರಲ್ಲಿ 'ಚಿನ್ನದಗರಿ' ಎಂಬ ವಿದ್ಯಾರ್ಥಿ ಕವಿಗಳ ಸಂಕಲನ ಪ್ರಕಟವಾಯಿತು. ಬಿ.ಆರ್. ಲಕ್ಷ್ಮಣರಾವ್, ಜಯಸುದರ್ಶನ, ದೊಡ್ಡರಂಗೇಗೌಡ, ಭಾಗ್ಯಲಕ್ಷ್ಮಿ, ಎನ್. ವಿ., ಶ್ರೀನಿವಾಸರಾಜು ಮೊದಲಾದ ಈಗ ಹೆಸರಾಗಿರುವ ಕವಿಗಳ ಆರಂಭದ ಕೃತಿಗಳು

ಚಿನ್ನದಗೆರೆಯಲ್ಲಿ ಕಾಣಿಸಿಕೊಂಡಿದ್ದನ್ನು ಇಲ್ಲಿ ನೆನೆಯಬಹುದು. ಈ ಪ್ರಕಟಣೆಯ ಸಂಪಾದಕರು ಡಾ. ಜಿ.ಎಸ್. ಶಿವರುದ್ರಪ್ಪ, ಡಾ. ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ, ಶ್ರೀ ಕೆ.ಎನ್. ಶಿವಪ್ಪ, ಶ್ರೀ ಆರ್.ಸಿ. ಕುಲಕರ್ಣಿ, ಶ್ರೀ ಎಲ್. ಗುಂಡಪ್ಪ.

ಈಗ ಗ್ರಂಥ ಪ್ರಕಾಶನದಲ್ಲಿ ತೊಡಗಿರುವ ಕೆಲವು ಮುಖ್ಯ ಕನ್ನಡ ಸಂಘಗಳನ್ನು ಹೆಸರಿಸಬೇಕೆಂದರೆ, ಧಾರವಾಡದ ಕಿಟೆಲ್ ಕಾಲೇಜು, ಬೆಂಗಳೂರಿನ ಕ್ರೈಸ್ಟ್ ಕಾಲೇಜು, ಶೇಷಾದ್ರಿಪುರಂ ಕಾಲೇಜು, ಸೇಂಟ್ ಜೋಸೆಫ್ ಕಾಮರ್ಸ್ ಕಾಲೇಜು, ಸೇಂಟ್ ಜೋಸೆಫ್ ಕಲಾ ಮತ್ತು ವಿಜ್ಞಾನ ಕಾಲೇಜು, ಪುತ್ತೂರಿನ ಸೇಂಟ್ ಫಿಲೋಮಿನಾ ಕಾಲೇಜು, ವಿವೇಕಾನಂದ ಕಾಲೇಜು, ಮಲ್ಲಾಡಿಹಳ್ಳಿಯ ಜೂನಿಯರ್ ಕಾಲೇಜ್, ಮೈಸೂರಿನ ಜೆ.ಎಸ್.ಎಸ್. ಕಾಲೇಜಿನ ಕನ್ನಡ ವಿಭಾಗ, ಹೊನ್ನಾವರದ ಕಲಾ ಮತ್ತು ವಿಜ್ಞಾನ ಕಾಲೇಜು, ಗೌರಿಬಿದನೂರಿನ ಆಚಾರ್ಯ ಹೈಯರ್ ಸೆಕೆಂಡರಿ ಶಾಲೆಯ ಕರ್ನಾಟಕ ಸಂಘ, ಮಂಗಳೂರಿನ ಮಂಗಳ ಗಂಗೋತ್ರಿಯ ಕನ್ನಡ ಸಂಘ, ಗೋಣಿಕೊಪ್ಪಲಿನ ಕಾವೇರಿ ಕಾಲೇಜು – ಈ ಸಂಸ್ಥೆಗಳ ಕನ್ನಡ / ಕರ್ನಾಟಕ ಸಂಘಗಳು.

ಈ ಸಂಘಗಳಲ್ಲಿ ವಿಶೇಷವಾಗಿ ಉಲ್ಲೇಖಿಸಬೇಕಾದುವು ಕ್ರೈಸ್ಟ್ ಕಾಲೇಜು, ಶೇಷಾದ್ರಿಪುರಂ ಕಾಲೇಜು, ಸೇಂಟ್ ಜೋಸೆಫ್ ಕಾಮರ್ಸ್ ಕಾಲೇಜು, ಸೇಂಟ್ ಫಿಲೋಮಿನ ಕಾಲೇಜು ಮತ್ತು ವಿವೇಕಾನಂದ ಕಾಲೇಜುಗಳ ಕನ್ನಡ ಸಂಘಗಳು. ತಮ್ಮ ನಿರಂತರವಾದ ಪ್ರಕಟಣೋದ್ಯಮ ಮತ್ತು ಪ್ರಕಟಿತ ಕೃತಿಗಳ ಗುಣಮೌಲ್ಯಗಳ ದೃಷ್ಟಿಯಿಂದ ಈ ಸಂಘಗಳನ್ನು ವಿಶೇಷವಾಗಿ ಅಭಿನಂದಿಸಬೇಕಾಗಿದೆ.

ಶ್ರೀ ಚಿ. ಶ್ರೀನಿವಾಸರಾಜು ಅವರು ಕನ್ನಡ ಸಂಘ, ಕ್ರೈಸ್ಟ್ ಕಾಲೇಜು, ಬೆಂಗಳೂರು – ಈ ಸಂಸ್ಥೆಯ ಮೂಲಕ ಎ.ಆರ್.ಕೃ, ಮತ್ತು ರಾಜರತ್ನಂ ಅವರ ಪರಂಪರೆಯನ್ನು ಸಮರ್ಥವಾಗಿ ಮುಂದುವರೆಸಿಕೊಂಡು ಬರುತ್ತಿದ್ದಾರೆ. ಈ ಸಂಘ ಈಗಾಗಲೇ 15ಕ್ಕೂ ಮಿಕ್ಕು ಉತ್ತಮ ಗ್ರಂಥಗಳನ್ನು ಪ್ರಕಟಿಸಿರುವುದರ ಜೊತೆಗೆ ವಿದ್ಯಾರ್ಥಿಗಳ ಬರೆಹಗಳ ಮಾಲೆಯನ್ನೂ ನಿರಂತರವಾಗಿ ಹೊರತರುತ್ತಿದೆ. ಕ್ರಿಸ್ತನ ಅನುಕರಣೆ (ಥಾಮಸ್ ಎ. ಕೆಂಪಿಸ್), ಟುವಟಾರ (ಬಿ. ಆರ್. ಲಕ್ಷ್ಮಣರಾವ್), ಮಳೆ ಬಿದ್ದ ನೆಲದಲ್ಲಿ (ಎಚ್. ಎಸ್. ಶಿವಪ್ರಕಾಶ್), ಪ್ರೇತಗಳು (ಟಿ. ಜಿ. ರಾಘವ), ಆಸ್ಫೋಟ, (ಟಿ. ಎನ್. ಸೀತಾರಾಂ), ಈಶ್ವರ ಅಲ್ಲಾ (ಜಿ. ಕೆ. ಗೋವಿಂದರಾವ್), ಆಯ್ದ ಕತೆಗಳು (ಕ.ವೆಂ. ರಾಜಗೋಪಾಲ), ವಿಶ್ಲೇಷಣೆ (ಎಚ್.ಎಸ್. ರಾಘವೇಂದ್ರ ರಾವ್) – ಇವು ಈ ಸಂಘದ ಕೆಲವು ಪ್ರಕಟಣೆಗಳೆಂದರೆ, ಈ ಪ್ರಕಟಣ ಮಾಲೆಯ ಘನತೆಯ ಅರಿವಾದೀತು.

ಶೇಷಾದ್ರಿಪುರಂ ಕಾಲೇಜಿನ ಕನ್ನಡ ಸಂಘದ ಪ್ರಕಟಣ ಮಾಲೆಯನ್ನು ಪ್ರಾರಂಭಿಸಿದವರು ನರಹಳ್ಳಿ ಬಾಲಸುಬ್ರಹ್ಮಣ್ಯ. ಕೆಲವೇ ವರ್ಷಗಳ ಅವಧಿಯಲ್ಲಿ

೨೦ಕ್ಕೂ ಮಿಕ್ಕು ಗ್ರಂಥಗಳನ್ನು ನರಹಳ್ಳಿ ಪ್ರಕಟಿಸಿದ್ದಾರೆ. ಸಿಂದಾಬಾದನ ಆತ್ಮಕಥೆ (ಎಚ್. ಎಸ್. ವೆಂಕಟೇಶಮೂರ್ತಿ), ಒಡಪುಗಳು (ರಾಘವೇಂದ್ರ ಪಾಟೀಲ), ಸಾಂಪ್ರತ (ಎಂ.ಎನ್. ಜೈಪ್ರಕಾಶ್), ಜಿ.ಪಿ. ರಾಜರತ್ನಂ (ರಾಶಿ), ಹಗಲು ಇರುಳು (ವಿಸೀ), ಕೊಂಪೆಯಲ್ಲಿ ಕೋಗಿಲೆ (ದೇಶಕುಲಕರ್ಣಿ), ಪಟ್ಟಣಶೆಟ್ಟರ ಆಯ್ದ ಕವಿತೆಗಳು, ಅನುಸಂಧಾನ (ನರಹಳ್ಳಿ), ವಿರಹೋತ್ಸವ (ಹೇಮಾ) ಮೊದಲಾದುವು ಈ ಸಂಘದ ಮುಖ್ಯ ಪ್ರಕಟಣೆಗಳು. ಅಚ್ಚುಕಟ್ಟಾದ ಮುದ್ರಣ. ಹೊಸ ಪ್ರತಿಭೆಯ ಶೋಧ. ಜೊತೆಗೆ ಹಳೆಯ ತಲೆಮಾರಿನ ಹೆಸರಾಂತ ಲೇಖಕರ ಕೃತಿಗಳ ಪ್ರಕಟಣೆಯಲ್ಲಿ ಶೇಷಾದ್ರಿಪುರಂ ಕಾಲೇಜಿನ ಕನ್ನಡ ಸಂಘದ ಮಹತ್ವವಿದೆ.

ಸೇಂಟ್ ಜೋಸೆಫ್ ಕಾಮರ್ಸ್ ಕಾಲೇಜಿನಲ್ಲಿ ಕನ್ನಡ ಸಂಘವನ್ನು ಪ್ರಾರಂಭಿಸಿ ಅನೇಕ ಸಾಹಿತ್ಯ ಚಟುವಟಿಕೆಗಳನ್ನೂ, ಜೊತೆಗೆ ವಿದ್ಯಾರ್ಥಿಗಳ ಪ್ರತಿಭಾ ಪ್ರಕಾಶನಕ್ಕೇ ಮೀಸಲಾದ ಪ್ರಕಟಣಾ ಮಾಲಿಯನ್ನು ಪ್ರಸ್ತುತ ಲೇಖಕ ನಡೆಸಿಕೊಂಡು ಬಂದಿದ್ದಾನೆ. ಭರವಸೆ, ಆಲ್ಬರ್ಟ್‌ಕಾಮು, ಕಾದಂಬರಿ, ಅಳಿದಮೇಲೆ ಕುರಿತು, ನಿರಾಕರಣ ಕುರಿತು ಮೊದಲಾದುವು ಈ ಸಂಘದ ಪ್ರಕಟಣೆಗಳು.

ಈ ವರ್ಷ ದಶಮಾನೋತ್ಸವವನ್ನು ಆಚರಿಸುತ್ತಿರುವ ಪುತ್ತೂರಿನ ಸಂತ ಫಿಲೋಮಿನಾ ಕಾಲೇಜಿನ ಕನ್ನಡ ಸಂಘ ಹದಿನೈದಕ್ಕೂ ಮಿಕ್ಕು ಕನ್ನಡ ಗ್ರಂಥಗಳನ್ನು ಪ್ರಕಟಿಸಿದೆ. 'ವಾರ್ಷಿಕ ಚೈತನ್ಯ' ಎಂಬ ಪುಸ್ತಕ ಮಾಲಿಕೆಯಲ್ಲಿ ಕವನ ಸಂಕಲನ, ಕಥಾ ಸಂಕಲನ, ತುಣುಕು ಮಿಣುಕು, ಅಪರೂಪ, ಮದರ್ ತೆರೇಸಾ ಮೊದಲಾದ ಕೃತಿಗಳು ಪ್ರಕಟವಾಗಿವೆ. ಕೆದಂಬಾಡಿ ಜತ್ತಪ್ಪರೈ ಅವರ ಬೇಟೆಯ ನೆನಪುಗಳು, ಶೇಣಿ ಗೋಪಾಲಕೃಷ್ಣಭಟ್ಟರ ಯಕ್ಷಗಾನ ಮತ್ತು ನಾನು, ಡಾ॥ ಶ್ರೀಕೃಷ್ಣಭಟ್ ಅರ್ತಿಕಜೆ ಅವರ ಜಾನಪದ ಜೀವನ ಮುಂತಾದುವು ಈ ಸಂಘದ ವಿಶೇಷ ಪ್ರಕಟಣೆಗಳು.

ಪುತ್ತೂರಿನ ವಿವೇಕಾನಂದ ಕಾಲೇಜಿನ ಕನ್ನಡ ಸಂಘದ ಪ್ರಕಟಣೆಗಳಲ್ಲಿ ಶ್ರೀಕೃಷ್ಣ ಚೆನ್ನಂಗೋಡರ ಅ(ನ)ಪೇಕ್ಷಿತ, ತಾಳ್ತಜೆ ವಸಂತಕುಮಾರರ ಸಿಂಗಾರ (ವಿಮರ್ಶೆ) ವಿಶೇಷವಾಗಿ ಉಲ್ಲೇಖಿಸಬೇಕಾದ ಕೃತಿಗಳು.

ಒಟ್ಟಿನಲ್ಲಿ ಕನ್ನಡ ಪ್ರಕಟಣೋದ್ಯಮದಲ್ಲಿ ಕಾಲೇಜುಗಳ ಕನ್ನಡ ಸಂಘಗಳದ್ದೇ ಒಂದು ವಿಶಿಷ್ಟ ಪಾತ್ರವಿದೆ. ಅವುಗಳ ಹೆಚ್ಚಿನ ಪ್ರಕಟಣೆಗಳು ಜನಪ್ರಿಯ ವ್ಯಾಪಾರೀ ಗ್ರಂಥಮಾದರಿಗಳನ್ನು ಹೊರಗಿಟ್ಟಿವೆ. ಗಂಭೀರವಾದ, ಸಾಹಿತ್ಯಕ ಮಹತ್ವ ಉಳ್ಳ ಅನೇಕ ಕೃತಿಗಳು 1918 ರಿಂದ ಈ ವರೆವಿಗೂ ಪ್ರಕಟವಾಗುತ್ತಾ ಬಂದಿವೆ. ಕಾವ್ಯ, ವಿಮರ್ಶೆ, ಸಂಶೋಧನೆ ಈ ಬಗೆಯವೇ ಹೆಚ್ಚಿನ ಕೃತಿಗಳು. ವಿದ್ಯಾರ್ಥಿಗಳ ಪ್ರತಿಭಾ ಪ್ರಕಾಶನಕ್ಕೆ ಈ ಸಂಘಗಳು ವಿಶಿಷ್ಟ ಸಹಕಾರ ನೀಡಿವೆ. ಹೊಸ ಪ್ರತಿಭೆಯ ಶೋಧಕ್ಕೆ

ಈ ಸಂಘಗಳು ನೀಡಿರುವ ಕಾಣಿಕೆಯೂ ತುಂಬ ಮಹತ್ವದ್ದು. ಕೇವಲ ವ್ಯಾಪಾರೀ ಉದ್ದೇಶಕ್ಕೆ ಬದ್ಧವಾಗದಿರುವುದೇ ಕಾಲೇಜಿನ ಕನ್ನಡ ಸಂಘಗಳ ಪ್ರಕಟಣೋದ್ಯಮದ ಪ್ರಮುಖ ಲಕ್ಷಣ ಎನ್ನಬಹುದು.

(ವಿಷಯ ಸೂಚನೆ—ಈ ಲೇಖನದಲ್ಲಿ ಪ್ರಕಟಣೋದ್ಯಮದಲ್ಲಿ ತೊಡಗಿದ್ದ ಅಥವಾ ತೊಡಗಿರುವ ಎಲ್ಲ ಕನ್ನಡ ಸಂಘಗಳನ್ನೂ ಹೆಸರಿಸಲು ಪ್ರಯತ್ನಿಸಲಾಗಿದೆಯಾದರೂ, ನನ್ನ ಗಮನಕ್ಕೆ ಬಾರದೇ ಉಳಿದಿರುವ ಕಾಲೇಜುಗಳ ಕನ್ನಡ ಸಂಘಗಳೂ ಇದ್ದಾವು. ಬಲ್ಲವರು ಅಂಥ ಸಂಘಗಳ ಬಗ್ಗೆ ದಯಮಾಡಿ ನನಗೆ ಮಾಹಿತಿ ನೀಡಬೇಕು.)

ಎಚ್. ಎಸ್. ವೆಂಕಟೇಶಮೂರ್ತಿ

ಪ್ರಜಾವಾಣಿ

ಕನ್ನಡಕ್ಕೆ ದೀಪಗಳು

ಸಹಚಿಂತನೆ

14 ಅಕ್ಟೋಬರ್ 1984

...ಸೇಂಟ್ ಜೋಸೆಫ್ಸ್ ಕಾಮರ್ಸ್ ಕಾಲೇಜಿನ, ವಿದ್ಯಾರ್ಥಿಗಳ 'ಭರವಸೆ' ಸಂಕಲನಕ್ಕೆ ಮುನ್ನುಡಿ ಬರೆಯುತ್ತ ಸಂಪಾದಕರಾದ ಶ್ರೀ ವೆಂಕಟೇಶಮೂರ್ತಿಯವರು 'ಕನ್ನಡ ಸಂಘ ಇಂಥದೊಂದು ಸಾಹಸವನ್ನು ಕೈಗೊಳ್ಳಲು ಪ್ರಚೋದನೆ ಕ್ರೈಸ್ಟ್ ಕಾಲೇಜ್ ಮತ್ತು ಶೇಷಾದ್ರಿಪುರಂ ಕಾಲೇಜು ಕನ್ನಡ ಸಂಘಗಳ ಕ್ರಿಯಾತ್ಮಕ ಚಟುವಟಿ' ಎಂದರು. ಕ್ರೈಸ್ಟ್ ಕಾಲೇಜ್‌ನಂತಹ ಸಂಸ್ಥೆಯಲ್ಲಿ ಕನ್ನಡ ಚಟುವಟಿಕೆಗಳಿಗೆ ಹೆಚ್ಚು ಅವಕಾಶ ಇರುವುದಿಲ್ಲ ಎಂಬುದು ಸಾಮಾನ್ಯ ಭಾವನೆ. ನನಗೆ ತಿಳಿದಂತೆ ಈ ಕಾಲೇಜಿನ ಕನ್ನಡ ಸಂಘ 24 ಪುಸ್ತಕಗಳನ್ನು ಪ್ರಕಟಿಸಿದೆ. ಇದರಲ್ಲಿ ವಿದ್ಯಾರ್ಥಿಗಳ ಲೇಖನಗಳ ಸಂಕಲನಗಳಿವೆ ; ಕ. ವೆಂ. ರಾಜಗೋಪಾಲ. ಎನ್. ವಿ. ಭಾಗ್ಯಲಕ್ಷ್ಮಿ, ಎಚ್. ಎಸ್. ಶಿವಪ್ರಕಾಶ್, ವಿ, ಆರ್. ಪ್ರತಿಭಾ ಮೊದಲಾದ ಹಿರಿಯ, ತರುಣ ಬರಹಗಾರರ ಕಾವ್ಯ, ಕತೆ, ನಾಟಕ, ಕಾದಂಬರಿಗಳನ್ನು ಪ್ರಕಟಿಸಿದೆ. ಎಚ್. ಎಸ್. ರಾಘವೇಂದ್ರರಾವ್, ಕೆ. ವಿ. ನಾರಾಯಣ. ಕಿ. ರಂ. ನಾಗರಾಜ ಅವರ ವಿಮರ್ಶಾ ಕೃತಿಗಳು, ಎಚ್. ಆರ್. ಕೃಷ್ಣಮೂರ್ತಿಯವರ ವಿಜ್ಞಾನ ಪುಸ್ತಕವನ್ನು ಹೊರ ತಂದಿದೆ. ನನಗೆ ವಿಶೇಷ ಮೆಚ್ಚುಗೆಯಾದ ಸಾಹಸ ಎಂದರೆ ಥಾಮಸ್ ಎ ಕೆಂಪಿಸನ 'ದಿ ಇಮಿಟೇಷನ್ ಆಫ್ ಕ್ರೈಸ್ಟ್' ಪುಸ್ತಕದ ಕನ್ನಡ ಅನುವಾದವನ್ನು ಪ್ರಕಟಿಸಿದ್ದು. ಇದೊಂದು ಅಪೂರ್ವ ಬರಹ.

...ನಾನು ಹೆಸರಿಸಿರುವ ಸೆಂಟ್ ಜೋಸೆಫ್ ಕಾಮರ್ಸ್ ಕಾಲೇಜು, ಕ್ರೈಸ್ಟ್ ಕಾಲೇಜು, ಶೇಷಾದ್ರಿಪುರಂ ಕಾಲೇಜು, ಇವುಗಳ ಕನ್ನಡ ಸಂಘಗಳಿಗೆ ಮೂವರು ತರುಣ ಅಧ್ಯಾಪಕರು ಶ್ರೀ ಎಚ್. ಎಸ್. ವೆಂಕಟೇಶಮೂರ್ತಿ. ಶ್ರೀ ಶ್ರೀನಿವಾಸರಾಜು ಮತ್ತು ಶ್ರೀ ನರಹಳ್ಳಿ ಬಾಲಸುಬ್ರಹ್ಮಣ್ಯ ಚಾಲಕ ಶಕ್ತಿಗಳು. ಅವರೆಲ್ಲರೂ ಸಮರ್ಥ ಬರಹಗಾರರು. ಅಧ್ಯಯನ ಶೀಲರು. ಅವರ ಉದ್ಯೋಗದ ಬೇಡಿಕೆಗಳು, ಸ್ವಂತ

ಅಧ್ಯಯನ, ಬರಹ ಇವುಗಳಿಗೆ ಅಗತ್ಯವಾಗಿ ಸಮಯ ನೀಡಬೇಕು. ಬೇರೆ ಕೆಲಸಗಳಿಗೆ ಕಾಲ ಕೊಟ್ಟರೆ ಅವರ ಸ್ವಂತ ಬರಹಕ್ಕೆ ಅಡ್ಡಿಯಾಗುತ್ತದೆ. ಆದರೂ ಕನ್ನಡ ಸಂಘದ ಮೂಲಕ ವಿದ್ಯಾರ್ಥಿಗಳನ್ನು ಬೆಳೆಸುವ ಕೆಲಸಕ್ಕೆ ಕಾಲ ಮತ್ತು ಶಕ್ತಿಗಳನ್ನು ಕೊಡುತ್ತಿದ್ದಾರೆ. ನನಗೆ ತಿಳಿದಿರುವುದು ಈ ಕಾಲೇಜು ಸಂಘಗಳಲ್ಲಿ ನಡೆದಿರುವ ಉತ್ತಮ ಕೆಲಸ. ಇಂತಹ ಕೆಲಸ–ಸಂಬಳದ ಲೆಖ್ಖಾಚಾರಕ್ಕೆ ಗಮನ ಕೊಡದೆ ಸಂತೋಷದಿಂದ ಮಾಡುವ ದೀಪಾವಳಿ, ಹಲವು ವಿದ್ಯಾ ಸಂಸ್ಥೆಗಳಲ್ಲಿ ನಡೆಯುತ್ತಿರಬೇಕು. ಈ ಬೆಳಕು ಹಬ್ಬಿಸುವ ಕಾರ್ಯದಲ್ಲಿ ನೆರವಾದವರಿಗೆಲ್ಲ ನಮಸ್ಕಾರ...

ಎಲ್. ಎಸ್. ಶೇಷಗಿರಿ ರಾವ್

ಅಭಿಮಾನಿ

ಕ್ರೈಸ್ಟ್ ಕಾಲೇಜಿನಲ್ಲಿ ಎಳೆಯರ "ಬೇಂದ್ರೆ ಸ್ಮೃತಿ"

ದೃಷ್ಟಿ

1986

'ಕಾಲೇಜು' ಅಂದಾಕ್ಷಣ ಕಣ್ಣ ಮುಂದೆ ಸುಳಿವ ದೃಶ್ಯಗಳು. ಮನಸ್ಸಲ್ಲಿ ಮೂಡುವ ಆಲೋಚನೆಗಳು ಏನೆಂಬ ಬಗ್ಗೆ ವಿವರಿಸುವ ಅಗತ್ಯವಿಲ್ಲವೆಂದುಕೊಂಡಿದ್ದೇನೆ. ಇಂದು ಬಹುತೇಕ ಕಾಲೇಜುಗಳು ಪ್ರತ್ಯೇಕ ಚಟುವಟಿಕೆಗಳಾದ ಸಾಹಿತ್ಯ ಸಾಂಸ್ಕೃತಿಕ ಮತ್ತು ಕ್ರೀಡೆಗಳಿಗೆ ಮಹತ್ವ ನೀಡದೆ (ನೀಡಿದರೂ ಅದನ್ನು ಸದುಪಯೋಗಪಡಿಸಿಕೊಳ್ಳದೆ) ನಿಷ್ಕ್ರಿಯವಾಗಿವೆಯೆಂದೇ ಹೇಳಬಹುದು. ವಿದ್ಯಾಭ್ಯಾಸದ ಹಂತವಲ್ಲೇ ಚಿಗುರುವ ಪುಢಾರಿತನ, ಗೂಂಡಾಗಿರಿ ರಾಜಕೀಯ ಕಪಿಮುಷ್ಟಿಯಲ್ಲಿ ಸಿಲುಕಿ ಕನಸನ್ನು ನನಸಾಗಿಸುವ, ಸುಂದರ ದಿನಗಳಲ್ಲಿ ಬದುಕು ಬರಡಾಗಿಸುವ ನಿದರ್ಶನಗಳು ಸಾಕಷ್ಟು ಸಿಕ್ಕುತ್ತವೆ. ಬರೀ ಪದವಿ ಪಡೆವ ಶಿಕ್ಷಣ ಪದ್ಧತಿ (ವ್ಯವಸ್ಥೆ?) ಯಿಂದ ಬದುಕಿಗೆ ನೆಲೆ ಸಿಕ್ಕಲಾರದೆಂಬ ಕಟು ಸತ್ಯದಿಂದಲೂ ಈ ಕಾಲೇಜುಗಳ ಸ್ಥಿತಿಗತಿಗಳ ಬಗ್ಗೆಯೂ ಆಲೋಚಿಸಬೇಕಿದೆ.

ಇಂಥ ಇದಕ್ಕೆಲ್ಲಾ ಅಪವಾದದಂತೆ ಸಾಹಿತ್ಯಕ ಚಟುವಟಿಕೆಗಳನ್ನು ಬೆಂಗಳೂರಿನ ಕ್ರೈಸ್ಟ್ ಕಾಲೇಜು ಹಮ್ಮಿಕೊಂಡಿದೆ. ಇಲ್ಲಿನ ಕನ್ನಡ ಸಂಘ ಸಾಹಿತ್ಯ ಕ್ಷೇತ್ರದಲ್ಲಿ ಸಾಧಿಸಿರುವ ಸಾಧನೆ ಯಾರೂ ಕೂಡ ಮೆಚ್ಚಬೇಕಾದ್ದೇ. ರಾಜ್ಯದ ಯಾವುದೇ ಕಾಲೇಜು ಸಾಧಿಸಿರದ ಸಾಧನೆಯನ್ನು ಈ ಕಾಲೇಜು ಸಾಧಿಸಿದೆಯೆಂದು ಹೆಮ್ಮೆಯಿಂದ ಹೇಳಬಹುದು. ಇದರ ಕೀರ್ತಿಗೆ ಪಾತ್ರರಾದವರು ಕನ್ನಡ ಉಪನ್ಯಾಸಕ, ಕವಿ, ನಾಟಕಕಾರ ಚಿ. ಶ್ರೀನಿವಾಸರಾಜು ಅವರು. ಕಾಲೇಜಿನ ಸಹ ಉಪಾಧ್ಯಾಯರ, ಪ್ರಾಂಶುಪಾಲರ ಸಹಕಾರದಿಂದ ಇವರ ಕೆಲಸಕ್ಕೆ ಪ್ರೋತ್ಸಾಹ ಸಿಕ್ಕಂತಾಗಿದೆ. ತೀರ ಸಂಕೋಚ ಪ್ರವೃತ್ತಿಯ, ಮುಗ್ಧ ಮನಸ್ಸಿನ ಸ್ನೇಹಮಯಿ ಶ್ರೀನಿವಾಸರಾಜು ಎಲ್ಲರ ಪ್ರೀತಿಯ 'ರಾಜು'. ಹಿರಿ-ಕಿರಿ ಬರಹಗಾರರನ್ನು ಆತ್ಮೀಯತೆಯಿಂದ ಮಾತನಾಡಿಸುತ್ತ ಬರವಣಿಗೆಗೆ ಪ್ರೋತ್ಸಾಹ ನೀಡಿ, 'ಹಿನ್ನೆಲೆ ವ್ಯಕ್ತಿ'ಯಾಗಿದ್ದು ಕೈಗೆತ್ತಿಕೊಳ್ಳುತ್ತಿರುವ ಪುಸ್ತಕ ಪ್ರಕಟಣೆಗಳು ಸಾಹಸವೆಂದೇ ಹೇಳಬೇಕು.

ಕ್ರೈಸ್ಟ್ ಕಾಲೇಜ್ ಪ್ರತಿವರ್ಷ ರಾಜ್ಯಮಟ್ಟದ ದ. ರಾ. ಬೇಂದ್ರೆ ಸ್ಮೃತಿ ಅಂತರ ಕಾಲೇಜು ಕವನ ಸ್ಪರ್ಧೆ ಏರ್ಪಡಿಸುವುದರ ಜೊತೆಗೆ, ವಿದ್ಯಾರ್ಥಿಗಳಲ್ಲಿ ಉತ್ತಮ ಅಭಿರುಚಿ ಮತ್ತು ವಿಮರ್ಶಾ ಮನೋಧರ್ಮವನ್ನು ಬೆಳೆಸುವ ದೃಷ್ಟಿಯಿಂದ ಅ.ನ.ಕೃ. ಸ್ಮಾರಕ ಅಂತರ ಕಾಲೇಜು ಲೇಖನ ಸ್ಪರ್ಧೆ ಏರ್ಪಡಿಸಿ, ಉತ್ತಮ ಅನ್ನಬಹುದಾದ ಬರಹಗಳನ್ನು ಪುಸ್ತಕರೂಪದಲ್ಲಿ ಪ್ರಕಟಿಸುತ್ತಿದೆ. ಜೊತೆಗೆ ಡಾ॥ ದ. ರಾ. ಬೇಂದ್ರೆ ಸ್ಮೃತಿ ಉಪನ್ಯಾಸ ಏರ್ಪಡಿಸಿ, ಕೃತಿ ಹೊರ ತರುತ್ತಿದೆ. ಈ ವರ್ಷ ಹೈದರಾಬಾದಿನಲ್ಲಿರುವ ಕವಿ ಕೆ. ವಿ. ತಿರುಮಲೇಶ ಅವರಿಂದ ಉಪನ್ಯಾಸವೊಂದನ್ನು ಏರ್ಪಡಿಸಿತ್ತು.

ಕವಿ ಬೇಂದ್ರೆ ಹೆಸರಿನಲ್ಲಿ ಉತ್ತಮ ಕಾರ್ಯಕ್ರಮ ಹಮ್ಮಿಕೊಂಡಿರುವ ಕ್ರೈಸ್ಟ್ ಕಾಲೇಜಿನ ಕನ್ನಡ ಸಂಘ, ಬೇಂದ್ರೆಯಂಥ ಮಹತ್ವದ ಕವಿಯ ಬರಹಗಳನ್ನು ಕುರಿತು ಅರ್ಥಪೂರ್ಣ ಚರ್ಚೆಗೆ ಯೋಗ್ಯ ದಾರಿ ಮಾಡಿಕೊಡುವಂಥಾದ್ದಾಗಿದೆ. ಜನವರಿ 31ರಂದು ಬೇಂದ್ರೆ ಹುಟ್ಟುಹಬ್ಬ. ಪ್ರತೀ ವರ್ಷ ಅದೇ ದಿನ ಕಾಲೇಜಿನಲ್ಲಿ ಒಂದು ಅಪರೂಪದ ಸಮಾರಂಭ ಇರುತ್ತದೆ. ಅಂದು ಹಲವು ಕೃತಿಗಳ ಬಿಡುಗಡೆ. ರಾಜ್ಯದ ಹಲವೆಡೆಯಿಂದ ಬಹುಮಾನ ಪಡೆದ ವಿದ್ಯಾರ್ಥಿಗಳು ಅಂದಿನ ಸಮಾರಂಭದಲ್ಲಿ ಪಾಲ್ಗೊಂಡು ಹರೆಯದ ದಿನಗಳಲ್ಲಿ ಮೂಡುವ ಭಾವನೆಗಳನ್ನು ಪರಸ್ಪರ ಪರಿಚಯದಲ್ಲಿ ಹಂಚಿಕೊಂಡು, ಹಕ್ಕಿ ಹಾರುತಿದೆ ನೋಡಿದಿರಾ ಎಂಬ ಬೇಂದ್ರೆ ಕಾವ್ಯಕ್ಕೆ ಹತ್ತಿರವಾಗುತ್ತಾರೆ. ಒಂದಿಬ್ಬರು ಹಿರಿಯ ಸಾಹಿತಿಗಳು ಪಾಲ್ಗೊಳ್ಳುವ ಈ ಸಮಾರಂಭದಲ್ಲಿ ಅವರ ಮಾತು, ಅನುಭವ, ವಿಮರ್ಶಾ ದೃಷ್ಟಿ ವಿದ್ಯಾರ್ಥಿಗಳ ಸಾಹಿತ್ಯಕ ಬೆಳವಣಿಗೆಗೆ ದಾರಿಮಾಡಿಕೊಡುತ್ತದೆ. ಈ ವರ್ಷ ವಿಮರ್ಶಕ ರಂ. ಶ್ರೀ. ಮುಗಳಿ ಮತ್ತು ಕವಿ ಬಿ. ಸಿ. ರಾಮಚಂದ್ರಶರ್ಮ ಸಮಾರಂಭದಲ್ಲಿ ಭಾಗವಹಿಸಿದ್ದರು, 'ಬದುಕಿನ ಒಂದು ಘಟ್ಟದಲ್ಲಿ ಎಲ್ಲರೂ ಕವಿಗಳೇ. ಆ ಘಟ್ಟದಾಚೆಗೂ ಕಾವ್ಯ ಕರ್ಮವನ್ನು ತಪಸ್ಸಾಗಿಸಿಕೊಂಡಂತೆ ಬರೆಯುವವನೇ ನಿಜವಾದ ಕವಿ' ಎಂಬುದು ಕವಿ ಶರ್ಮ ಅವರ ಅಭಿಪ್ರಾಯ.

ಬೇಂದ್ರೆ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಕಾವ್ಯಕ್ಕೆ ಕೊಟ್ಟ ಕೊಡುಗೆ ಅಭೂತಪೂರ್ವವಾದದ್ದು. ಇಂದು ಬೇಂದ್ರೆ ಇಲ್ಲದೆ ಕಾವ್ಯ ಕುರಿತು ಚರ್ಚೆ ಮಾಡುವಂತೆಯೇ ಇಲ್ಲ. ಬೇಂದ್ರೆ ಅಜ್ಜನ ಕುರಿತು,

'ಈತ ಹೂತ ಹುಣಸೆಮರ.
ಚಿವುಟಿದಷ್ಟೂ ಚಿಗುರೊಡೆವ ಮುಗುಳು
ಕಚ್ಚಿದರೆ ಮೈ ಜುಮ್ಮೆನ್ನುವ ಹುಳಿ
ಎಲೆಗೊಂದು ಹೂ ಬಿಡುವ ಏಕ ಮಾತ್ರ ತಳಿ'

ಎಂದು ಬಸವರಾಜವಕ್ಕುಂದ ಈ ಸಾರಿ ಪ್ರಕಟವಾಗಿರುವ 'ಪ್ರತಿ ದಿನದ ಸೂರ್ಯ' ಎಂಬ ಬಹುಮಾನಿತ ಕವನ ಸಂಕಲನದಲ್ಲಿ ಹೇಳಿದ್ದಾರೆ. ಬೇಂದ್ರೆಯೇ ಆನಂದ.

ಹಾಗೆ. ಕೆದಕಿದಷ್ಟೂ ಅರ್ಥ ಸಿಗುವ ನಿಗೂಢ ಗಣಿ. ಧಾರವಾಡದ ವಿಶಿಷ್ಟ ಭಾಷೆಯಲ್ಲಿ ಕಾವ್ಯ ಕೃಷಿ ಮಾಡಿದ ಈತ ಹುಚ್ಚು ಕವಿ ! ಒಂದು ಹಂತದಲ್ಲಿ ಕವಿಗಳು, ಬರಹಗಾರರು ಹುಚ್ಚರೇ. ಇಂಥ ಹುಚ್ಚರೇ, ಇಂಥ ಹುಚ್ಚು ಮನಸ್ಸಿನವರ ಹತ್ತು ಮುಖಗಳನ್ನು ಕಾವ್ಯದಲ್ಲಿ ಸೆರೆ ಹಿಡಿಯುತ್ತ ತಾವೂ ಏನನ್ನಾದರೂ ಕೊಟ್ಟೇವು ಎಂದು ಸಾಧಿಸಿ ತೋರಿಸಿದ ಕವಿಗಳಲ್ಲಿ ಅಬ್ದುಲ್ ರಶೀದ್, ಜಿ. ಎನ್. ಮೋಹನ್, ಬಿ. ಎಸ್. ಗಾಯಿತ್ರಿ, ಬಸವರಾಜ ವಕ್ಕುಂದ ಮುಂತಾದವರು ಮುಖ್ಯರಾಗುತ್ತಾರೆ.

ಇಲ್ಲಿನ ಕೆಲವು ಯುವ ಕವಿಗಳನ್ನು ಹೊರತುಪಡಿಸಿ ಇತ್ತೀಚಿನ ಕಾವ್ಯ ಬೆಳವಣಿಗೆ ಕುರಿತು ಇಲ್ಲೊಂದು ಮಾತು ಹೇಳಬೇಕಾಗುತ್ತದೆ. ಯಾವುದೇ ಕಾವ್ಯ ಮೊದಲ ಹುಟ್ಟು ಪಡೆದಾಗ ಅದು ವಾಚ್ಯ, ಘೋಷಣೆ ಇಲ್ಲವೆ ಅನುಕರಣೆಯಾಗಿರುತ್ತದೆ ಎಂಬ ಅಭಿಪ್ರಾಯವಿದೆ. ಪ್ರೀತಿ–ಪ್ರೇಮ, ಶೋಷಣೆ ಕುರಿತು ಪ್ರಾರಂಭದಲ್ಲಿ ಬರೆಯುವುದು ಸಹಜವಾದರೂ, 'ಘೋಷಣೆ' ಅನ್ನಿಸಿಕೊಳ್ಳುವ ಕಾವ್ಯ, 'ಇದು ಕಾವ್ಯ' ಅನ್ನಿಸಿಕೊಳ್ಳುವ ಹಂತ ತಲುಪಿದಾಗ ಹೊರಗೇ ಉಳಿಯುತ್ತದೆ. ಹೀಗಾಗಿ ಕಾವ್ಯ ಲಯ, ಬಂಧಗಳನ್ನು ಒಳಗೊಂಡು, ಕಾಡುವ ವಸ್ತುವಿಗೆ ಅನುಭವದ ಲೇಪನ ಕೊಟ್ಟು ಅಂಥ ಚೌಕಟ್ಟನ್ನು ನಿರ್ಮಿಸಿಕೊಳ್ಳುವ ಕಡೆ ಗಮನ ಕೊಡಬೇಕಾಗುತ್ತದೆ. ಕ್ರೈಸ್ಟ್ ಕಾಲೇಜಿನ ಪ್ರಕಟಣೆಯಲ್ಲಿ ಕಾಣುವ ವಿದ್ಯಾರ್ಥಿ ಕವಿಗಳು ಮುಂದೊಂದು ದಿನ ಕಾವ್ಯ ಕ್ಷೇತ್ರದಲ್ಲಿ ಹೆಸರು ಮಾಡುವವರ ಪಟ್ಟಿಯಲ್ಲಿ ದಾಖಲಾಗುತ್ತಾರೆಂದು ಭಾವಿಸುತ್ತೇನೆ.

'ಪ್ರತಿಭೆಯುಳ್ಳ ಯುವ ವಿದ್ಯಾರ್ಥಿಗಳನ್ನು ಬರಹಗಾರರನ್ನು ಗುರುತಿಸುವ ಸಂಘದ ಚಟುವಟಿಕೆ ಯಾವುದೇ ಭಾಷಾ ಸಂಘಗಳಿಗೆ ಮಾರ್ಗದರ್ಶಿ, ಕನ್ನಡದ ಹಿರಿಯ ಕವಿಯ ಹೆಸರಿನಲ್ಲಿ ಕಿರಿಯ ಕವಿಗಳು ಬೆಳಕಿಗೆ ಬರುತ್ತಿರುವುದು ಒಳ್ಳೆಯದು' ಎಂಬ ಕಾಲೇಜು ಪ್ರಿನ್ಸಿಪಾಲರ ಮಾತನ್ನು ಕೃತಿ ನೋಡಿದ ಯಾರಾದರೂ ಒಪ್ಪಬೇಕಾದ್ದೆ.

ಆರ್. ಜಿ. ಹಳ್ಳಿ ನಾಗರಾಜ್

Indian Express

Bangalore Notebook

Saturday, Sept 3, 1988

Creditable Body

Tha college students' associations, by and large, end up holding only inaugural and valedictory functions, with perhaps a fun-and-games annual fete thrown in. Having a floating membership, not much can be expected from these associatlons either. But the Kannada Sangha of Christ College, which is 16 years old, has been an honourable exception.

Started in memory of C. K. Lakshmana Gowda, a college student who was a budding writer, with the help of Rs. 500 his parents contributed, the Sangha has grown into a respected publishing house. Early this year, it broughf out its 50th publication, no mean achievement in these days of soaring costs and dwindling readership.

Under the inspiring stewardship of college lecturer C. Srinivasa Raju, himself a respected playwright, it has been taking up the works of both young and veteran writers for publication. While boasting of having brought to light the two State Sahitya Akademi award winners in H. S. Shiva prakash and H. S. Raghavendra Rao it has also published works of young writers like Narahalli Balasubramanya, V. R. Pratibha and T. N. Sitaram among others.

The Sangha has published a few books in English and tranalations of Tamil works. It plans to bring out the complete

works of Shakespeare in Kannada, which will perhaps be the first of its kind in the language.

It has been conducting an essay competition for college students in memory of A. N. Krishna Rao since 1973 and a poetry contest in memory of D. R. Bendre since 1983 and publishes the prize-winning essays and poems.

Having earned such a good reputation one can only hope it flourishes further and carves a greater niche for itself.

ಸಾಹಿತ್ಯ ಸಂಗಾತಿ

ಕ್ರೈಸ್ಟ್ ಕಾಲೇಜ್ ಕನ್ನಡ ಸಂಘ

ಜನವರಿ, ಫೆಬ್ರುವರಿ, ಮಾರ್ಚ್ 1989

ನಮ್ಮ ನಡುವಿನ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಕನ್ನಡ ಸಂಘಗಳ ಪಾತ್ರ ಅರ್ಥ ವಾದದ್ದು. ನನಗೆ ತಿಳಿದ ಮಟ್ಟಿಗೆ ಸೆಂಟ್ರಲ್ ಕಾಲೇಜಿನ ಕರ್ಣಾಟಕ ಸಂಘ ಹೊಸ ಹೊಸ ಬರಹಗಾರರನ್ನು ಹೊರಗೆ ತಂದಿತು. ಇಂದು ಅವರಲ್ಲಿ ಕೆಲವರು ಪ್ರಮುಖ ಬರಹಗಾರರಾಗಿದ್ದಾರೆ. ಈ ದೃಷ್ಟಿಯಿಂದ ಜಿ. ಪಿ. ರಾಜರತ್ನಂರವರ ಪ್ರೋತ್ಸಾಹ ಬಹು ಮುಖ್ಯವಾದದ್ದು. ಆದರೆ ಯಾವುದೇ ಸಂಸ್ಥೆಯ ಸಾಂಸ್ಕೃತಿಕ ಸ್ವರೂಪ ಹಿಗ್ಗಲು ಅಲ್ಲಿರುವ ವ್ಯಕ್ತಿಗಳೇ ಕಾರಣವಾಗಿರುತ್ತಾರೆ. ತಮ್ಮ ಸೀಮಿತ ವಲಯದಲ್ಲಿ ಮಾಡುವುದನ್ನು ಅಚ್ಚುಕಟ್ಟಾಗಿ ಮಾಡುತ್ತಲೇ ಹೋಗಬೇಕಾಗುತ್ತದೆ. ಇಂಥ ಪರಂಪರೆಯಲ್ಲಿ ಬಂದ ಚಿ. ಶ್ರೀನಿವಾಸರಾಜು ಅವರು ಬೆಂಗಳೂರಿನ ಕ್ರೈಸ್ಟ್ ಕಾಲೇಜಿನ ಕನ್ನಡ ಸಂಘವನ್ನು ಸ್ಥಾಪಿಸಿ ಮಾಡಿರುವ ಕೆಲಸ ಶ್ಲಾಘನೀಯ. ಹೊಸ ಬರಹಗಾರರನ್ನು ಸೃಷ್ಟಿಸುವುದಕ್ಕೋಸ್ಕರವೇ ವಿದ್ಯಾರ್ಥಿ ಸಾಹಿತ್ಯ ಸ್ಪರ್ಧೆ ಮಹತ್ವಪೂರ್ಣ ವಾದದ್ದು.

ರಾಜು ಅವರು ಮಾಡುವ ಕೆಲಸಕ್ಕೆ ಒಂದು ಉದ್ದೇಶವಿದೆ. ಆ ಉದ್ದೇಶ ಒಂದು ಸಮಾಜದ ಸಂಸ್ಕೃತಿಯನ್ನು ಬೆಳೆಸುವಂಥದ್ದು. ನಮ್ಮ ಸಮಾಜ ಹಾಳಾಗುತ್ತಿದೆಯೆಂದು ಗೊಣಗಾಡುವವರ ನಡುವೆ ಗೊಣಗಾಡದೆ ದುಡಿಯುವ ರಾಜು ಅವರಿಗೆ ರಾಜರತ್ನಂ ಅವರ ಹೋರಾಟದ ಹಿನ್ನೆಲೆ ಇದೆ. ರಾಜರತ್ನಂ ಅವರ ರೀತಿಯಲ್ಲಿ ರಾಜು ಅವರು ಚಳಿ ಬಿಟ್ಟು ಪುಸ್ತಕ ಮಾರಾಟ ಮಾಡುವ ಚಾಕಚಕ್ಯತೆಯಿಲ್ಲದಿದ್ದರೂ ; ಹೊಸದನ್ನು ಹುಟ್ಟುಹಾಕೋಣ ಅದು ಎಂದಾದರೂ ಜನರ ಕೈಗೆ ಮತ್ತು ಮನಸ್ಸಿಗೆ ತಲುಪುತ್ತದೆ ಎಂದು ತಿಳಿದು ದುಡಿಯುತ್ತಿರುವ ವ್ಯಕ್ತಿ. ಶ್ರೀನಿವಾಸರಾಜು ಅವರು ನಮ್ಮ ನಡುವಿನ ಅತ್ಯಂತ ಸಂಯಮ ವ್ಯಕ್ತಿ. ಎಲ್ಲರನ್ನೂ ಒಳಗೊಂಡು ಬದುಕು ಬೆಳೆಸುವಂಥವರು. ನಮ್ಮ ಕಾಲದ ಮಹಾನ್ ಲೇಖಕರಾದ

ಬೇಂದ್ರೆಯವರ ವಿವಿಧ ಮುಖಗಳನ್ನು ಪರಿಚಯಿಸಲು ಈ ಕನ್ನಡ ಸಂಘ ಮಾಡಿರುವ ಕೆಲಸ ಅಮೂಲ್ಯವಾದದ್ದು. ಒಬ್ಬ ಸಾಂಸ್ಕೃತಿಕ ವ್ಯಕ್ತಿಯ ಬಗ್ಗೆ ಇದಕ್ಕಿಂತ ಮಿಗಿಲಾದ ಕೆಲಸವನ್ನು ಯಾರೂ ಮಾಡಲಾರರು ಎನ್ನುವ ಮಟ್ಟಿಗೆ ಬೇಂದ್ರೆ ಕುರಿತು ಚರ್ಚೆ ನಡೆದಿದೆ. ಇಲ್ಲಿ ಲೇಖಕರ ಪಟ್ಟಿ ಅನಗತ್ಯ.

ಕ್ರೈಸ್ಟ್ ಕಾಲೇಜು ಕನ್ನಡ ಸಂಘವು ಕೇವಲ ಸಾಹಿತ್ಯವಲ್ಲ; ಸಾಹಿತ್ಯವನ್ನು ಬಿಟ್ಟು ಇತರ ವಿಷಯಗಳ ಬಗ್ಗೆಯೂ ಕೈಚಾಚಿದೆ. ಹೀಗೆ ಕೈ ಚಾಚುವುದರ ಮುಖ್ಯ ಉದ್ದೇಶ: ನಮ್ಮ 'ಸಂಸ್ಕೃತಿ' ಎಂದರೆ ಸಾಹಿತ್ಯದಿಂದ ಮಾತ್ರ ಕೂಡಿದೆ ಯೆಂದು ತಿಳಿಯುವುದಲ್ಲ. ಶ್ರೀನಿವಾಸರಾಜು ಅವರ ಹಿಂದೆ ಕೆಲಸ ಮಾಡುವ ಕೆ. ವಿ. ನಾರಾಯಣ ಮತ್ತು ಹೆಚ್. ಎಸ್. ರಾಘವೇಂದ್ರ ರಾವ್ ಇದ್ದಾರೆಂಬುದೂ ಸಹಾ ಮುಖ್ಯ. ಇವರು ಒಬ್ಬರಿಗೊಬ್ಬರು ಆತ್ಮಗಳಿದ್ದ ಹಾಗೆ. ಇದರ ಜೊತೆಗೆ ಪ್ರಮುಖವಾಗಿ ಕಾಲೇಜಿನ ಮುಖ್ಯಸ್ಥರನ್ನು ಬೆಂಬಲವಾಗಿ ಇಟ್ಟುಕೊಳ್ಳುತ್ತಾರೆಂಬುದು ಮಾರ್ಮಿಕ ಸಂಗತಿ. ಇವೆಲ್ಲದರ ಮೊತ್ತದಿಂದ ಈ ಕನ್ನಡ ಸಂಘವನ್ನು ಮುಂದೆ ಯಾರೂ ಮರೆಯುವಂತಿಲ್ಲ.

ಶೂದ್ರ ಶ್ರೀನಿವಾಸ್

ಲಂಕೇಶ್ ಪತ್ರಿಕೆ

ಮರೆಯುವ ಮುನ್ನ

ಕ್ರೈಸ್ಟ್ ಕಾಲೇಜು ಮತ್ತು ಶ್ರೀನಿವಾಸರಾಜು

21 ಜುಲೈ 1991

ಕ್ರೈಸ್ಟ್ ಕಾಲೇಜಿನ ಇನ್ನೊಂದು ಪುಸ್ತಕ ಹೊರಬಂದಿದೆ. ಇದು ಹೆಣ್ಣು ಮಗಳೊಬ್ಬಳ ಕವನ ಸಂಕಲನ. ಕ್ರೈಸ್ಟ್ ಕಾಲೇಜ್ ಮತ್ತು ಕನ್ನಡ ಪುಸ್ತಕ... ಓದುಗರು ಹೆಮ್ಮೆಪಡಬೇಕಾದ ವಿಚಿತ್ರ ಇದು. ಕ್ರಿಶ್ಚಿಯನ್ನರ, ಬಹುಪಾಲು ಅಲ್ಪ ಸಂಖ್ಯಾತರ ಈ ಕಾಲೇಜಿನಿಂದ 25 ಕವನ ಸಂಕಲನಗಳೇ ಬಂದಿವೆ : ವಿದ್ಯಾರ್ಥಿಗಳು, ಹಿರಿಯರು, ಮಹತ್ವದ ಸಾಹಿತಿಗಳು ಬರೆದ ಅನೇಕ ಕನ್ನಡ ಪುಸ್ತಕಗಳು ಈ ಕಾಲೇಜಿನಿಂದ ಪ್ರಕಟವಾಗಿವೆ.

ಇದಕ್ಕೆಲ್ಲ ಕಾರಣ ಚಿ. ಶ್ರೀನಿವಾಸರಾಜು. ಇಲ್ಲಿ ಕನ್ನಡ ಪ್ರಾಧ್ಯಾಪಕರಾದ ಶ್ರೀನಿವಾಸರಾಜು ಎಂಥವರೆಂದು ಅವರ ಸ್ನೇಹಿತರಿಗೆ ಮಾತ್ರ ಗೊತ್ತು. ಸಂಕೋಚ ಸ್ವಭಾವದ, ಧ್ವನಿಯೆತ್ತಿ ಮಾತನಾಡಲೂ ಹಿಂಜರಿಯುವ, ಮಾಡಿದ ಕೆಲಸವನ್ನು ಅಚ್ಚುಕಟ್ಟಾಗಿ ಮಾಡುವ, ಕನ್ನಡಾಭಿಮಾನದ ಸೊಕ್ಕು ಕಿಂಚಿತ್ತೂ ಇಲ್ಲದ ಸಜ್ಜನ ಈ ಶ್ರೀನಿವಾಸರಾಜು. ಎಂದೂ ಕ್ರಾಂತಿಯ ಕಹಳೆ ಊದದ ಶ್ರೀನಿವಾಸರಾಜು ಕ್ರೈಸ್ಟ್ ಕಾಲೇಜಿನಲ್ಲಿ ನಡೆಸಿರುವುದು ನಿಜವಾದ ಕ್ರಾಂತಿ. ಉತ್ತಮ ಅಧ್ಯಾಪಕರೇ ವಿರಳವಾಗುತ್ತಿರುವ ಈ ಕಾಲದಲ್ಲಿ ಸಾಹಿತ್ಯ, ಸಂಸ್ಕೃತಿಯ ಬಗ್ಗೆ ಎಳೆಯ ಜೀವಗಳಲ್ಲಿ ಹುಮ್ಮಸ್ಸು ಹುಟ್ಟಿಸುವ ಶ್ರೀನಿವಾಸರಾಜು ತರಹದವರು ರಾಜರತ್ನಂ, ಎ. ಆರ್. ಕೃಷ್ಣಶಾಸ್ತ್ರಿ, ಶಿವರುದ್ರಪ್ಪ, ಕುವೆಂಪು ಮುಂತಾದವರ ಪರಂಪರೆಗೆ ಸೇರಿದವರು ; ಹಾಗೆಯೇ ಈಚಿನ ಕಿ. ರಂ. ನಾಗರಾಜ, ಎಚ್. ಎಸ್. ರಾಘವೇಂದ್ರರಾವ್, ಸಿದ್ದಲಿಂಗಯ್ಯ, ರಾಮದಾಸ್ ಮುಂತಾದವರು ಶ್ರೀನಿವಾಸರಾಜು ಅವರ ಅರ್ಥಪೂರ್ಣ ಸಮಕಾಲೀನರು.

ಪಿ. ಲಂಕೇಶ್

ಅನುಬಂಧಗಳು

1. ಕನ್ನಡ ಸಂಘದ ಮೊದಲ ಪುಸ್ತಕ ಬಿಡುಗಡೆ ವರದಿ
2. ಮಾಸ್ತಿಯವರೊಂದಿಗೆ ಒಂದು ಸಂಜೆ
3. 'ಉದಯರವಿ'ಯಲ್ಲೊಂದು ಅಪತ್ರಿಕಾ ವಾರ್ತೆ
4. 'ನೆನಪಿನ ಓರಿಯೊಳಗ ಮಿನುಗ್ತಾವ ಎಣ್ಣಿದೀಪ'
5. ಕನ್ನಡ ಸಂಘದ ಕಾರ್ಯಕ್ರಮಗಳಲ್ಲಿ ಭಾಗವಹಿಸಿದವರು
6. ಡಾ॥ ಅ.ನ.ಕೃ. ಸ್ಮಾರಕ ಲೇಖನ ಸ್ಪರ್ಧೆಗೆ ಕೊಟ್ಟ ವಿಷಯಗಳು
7. ಡಾ॥ ಅ.ನ.ಕೃ. ಸ್ಮಾರಕ ಲೇಖನ ಸ್ಪರ್ಧೆ ತೀರ್ಪುಗಾರರು
8. ಡಾ॥ ದ.ರಾ. ಬೇಂದ್ರೆ ಸ್ಮೃತಿ ಕವನ ಸ್ಪರ್ಧೆ ತೀರ್ಪುಗಾರರು
9. ಸ್ಪರ್ಧೆಗಳಿಗೆ ಬಂದ ಲೇಖನಗಳು ಮತ್ತು ಕವನಗಳು
10. ಕನ್ನಡ ವಿಭಾಗದಲ್ಲಿನ ಅಧ್ಯಾಪಕರು
11. 1990–91ನೇ ಸಾಲಿನ ಕನ್ನಡ ಸಂಘದ ಪದಾಧಿಕಾರಿಗಳು
12. ಕಾಲೇಜು 'ವಿದ್ಯಾರ್ಥಿ ಸಂಘ'ದ ಪದಾಧಿಕಾರಿಗಳು
13. ಇದುವರೆಗಿನ ಕಾಲೇಜು ವಿದ್ಯಾರ್ಥಿ ಸಂಘದ ಅಧ್ಯಕ್ಷರು
14. ಕನ್ನಡ ಸಂಘದ ಮುದ್ರಕರು
15. ಮುಖಪುಟ ವಿನ್ಯಾಸದ ಕಲಾವಿದರು
16. ೧೫ ಜುಲೈ ೧೯೬೯
17. ಕನ್ನಡ ಸಂಘದ ಪ್ರಕಟಣೆಗಳು
18. ಐವತ್ತನೆ ಪುಸ್ತಕದ ಬಿಡುಗಡೆ ಸಮಾರಂಭದ ವರದಿ

ಅನುಬಂಧ – ೧

....ಬೆಂಗಾಡಿನದಲ್ಲ, ಮರಳು ಗಾಡಿನದಲ್ಲ ನದಿಯ ಮೇಲಿನ ಗಾಳಿ....

(ಕಾಲೇಜಿನ ಕನ್ನಡ ರಾಜ್ಯೋತ್ಸವ ಬಹುಮಾನಿತ ವರದಿ)

೧೨ ಡಿಸೆಂಬರ್ ೧೯೭೩

ಬಿ. ಎಸ್. ರಾಜಾರಾಂ

ಎರಡನೆಯ ಪಿ.ಯು.ಸಿ.

ನಮ್ಮ ಕಾಲೇಜಿನ ಕನ್ನಡ ಸಂಘವು ೧೨ನೇ ಡಿಸೆಂಬರ್ ೧೯೭೩ ರಂದು ಕನ್ನಡ ರಾಜ್ಯೋತ್ಸವವನ್ನು ಆಚರಿಸುವುದರೊಂದಿಗೆ ಪ್ರಾರಂಭವಾಯಿತು. ಅಂದು ಕಾಲೇಜಿನ ಕನ್ನಡ ವಿದ್ಯಾರ್ಥಿಗಳಿಗೆಲ್ಲಾ ಹಬ್ಬದ ಸಂಭ್ರಮ, ಬೆಂಗಳೂರು ವಿಶ್ವವಿದ್ಯಾನಿಲಯದ ಉಪಕುಲಪತಿಗಳಾದ ಡಾ॥ ಎಚ್. ನರಸಿಂಹಯ್ಯ, ಡಾ॥ ಜಿ. ಎಸ್. ಶಿವರುದ್ರಪ್ಪ ಮತ್ತು ಪ್ರೊ॥ ಎಂ. ಪಿ. ಎಲ್. ಶಾಸ್ತ್ರಿಗಳನ್ನು ನಮ್ಮ ಪ್ರಿನ್ಸಿಪಾಲರು ಆತ್ಮೀಯವಾಗಿ ಬರಮಾಡಿಕೊಂಡರು.

ಡಾ॥ ಎಚ್. ನರಸಿಂಹಯ್ಯನವರು ನಮ್ಮ ಕಾಲೇಜಿನ ವಿದ್ಯಾರ್ಥಿಯಾದ ಶ್ರೀ ಕೆ.ಎಸ್. ಶ್ರೀನಿವಾಸಮೂರ್ತಿ ಬಿಡಿಸಿದ ಚಿತ್ರಕಲಾ ಪ್ರದರ್ಶನವನ್ನು ಉದ್ಘಾಟಿಸಿದರು. ಅನಂತರ ಪ್ರಾರ್ಥನೆ, ಸ್ವಾಗತ ಮತ್ತು ಸಂಘದ ವರದಿಯ ನಂತರ ಕ್ರೈಸ್ಟ್ ಕಾಲೇಜಿನ ಮತ್ತು ಕನ್ನಡ ಸಂಘದ ಮೊದಲ ಪ್ರಕಟನೆಯಾದ ಪ್ರೊ॥ ಕ. ವೆಂ. ರಾಜಗೋಪಾಲರ 'ನದಿಯ ಮೇಲಿನ ಗಾಳಿ' ಕವನ ಸಂಕಲನವನ್ನು ನಮ್ಮ ಪ್ರಿನ್ಸಿಪಾಲರು ಡಾ॥ ಜಿ. ಎಸ್. ಶಿವರುದ್ರಪ್ಪನವರಿಗೆ ಅರ್ಪಿಸಿದರು. ಸೆಂಟ್ರಲ್ ಕಾಲೇಜಿನ ಕರ್ಣಾಟಕ ಸಂಘದ ಪರವಾಗಿ ಅವರು ಒಪ್ಪಿಸಿಕೊಂಡು ಸ್ವೀಕಾರ ಭಾಷಣ ಮಾಡಿದರು. ಅವರು ಸೆಂಟ್ರಲ್ ಕಾಲೇಜ್‌ನ ಕರ್ಣಾಟಕ ಸಂಘದ ಹಿರಿಮೆಯನ್ನು ವಿವರಿಸಿ, ಮಿಶನರಿಗಳು ಹಿಂದೆ ಮಾಡಿದ ಸೇವೆಯನ್ನು ಸ್ಮರಿಸಿದರು, ಆದರೆ ಈಗ ಕನ್ನಡನಾಡಿನಲ್ಲಿ ಕಾನ್ ವೆಂಟುಗಳು ಕನ್ನಡ ಭಾಷೆಯನ್ನು ಕಲಿಸದೆ, ಹೆತ್ತನಾಡಿಗೂ ಸಾಕಿದನಾಡಿಗೂ ಅನ್ಯಾಯವನ್ನು ಮಾಡುತ್ತಿದ್ದಾರೆ ಎಂದು ಎಚ್ಚರಿಸಿದರು. ಇಂತಹ ವಾತಾವರಣದಲ್ಲಿ 'ಕ್ರೈಸ್ಟ್ ಕಾಲೇಜಿನಲ್ಲಿ ಒಂದು ಕನ್ನಡ ಸಂಘವಾಗಿ ಪುಸ್ತಕಗಳನ್ನು ಪ್ರಕಟಿಸುತ್ತಿರು

ವುದು ಆಶ್ಚರ್ಯವೇ ಸರಿ. ಇಲ್ಲಿನ ಆಡಳಿತವರ್ಗದವರು ಪ್ರಿನ್ಸಿಪಾಲರು ನೀಡು ತ್ತಿರುವ ಸಹಾಯ, ಸಹಕಾರ ಪ್ರಶಂಸನೀಯವಾದ ವಿಚಾರ. ನಾನು ಈಗ ನಿಮ್ಮಿಂದ ಪಡೆಯುತ್ತಿರುವುದು ಬೆಂಗಾಡಿನದಲ್ಲ, ಮರುಳುಗಾಡಿನದಲ್ಲ, ನದಿಯ ಮೇಲಿನ ಗಾಳಿ. ಇದನ್ನು ಸಂತೋಷವಾಗಿ ಸ್ವೀಕರಿಸುತ್ತೇನೆ' ಎಂದರು.

ಇದೇ ಸಂದರ್ಭದಲ್ಲಿ ಪ್ರೊ॥ ಎಂ.ಪಿ.ಎಲ್. ಶಾಸ್ತ್ರಿಗಳು ಕನ್ನಡದ ಬಗ್ಗೆ ಕನ್ನಡ ನಾಡಿನ ಬಗ್ಗೆ ಮನಮೆಚ್ಚುವಂತೆ ಮಾತನಾಡುತ್ತಿದ್ದ ರೀತಿ ಒಂದು ನುಡಿಬಿನ್ನಾಣ ವಾಗಿತ್ತು. 'ನಮ್ಮ ಕಾಲೇಜಿನ ಪ್ರೊ॥ ಕ. ವೆಂ. ರಾಜಗೋಪಾಲರ ಪುಸ್ತಕವನ್ನು ನೀವು ಪ್ರಕಟಿಸಿ ನಮ್ಮನ್ನು ಋಣಿಗಳನ್ನಾಗಿ ಮಾಡಿದ್ದೀರಿ. ಈ ಕನ್ನಡ ಸಂಘ ಬೆಂಗಳೂರಿನ ಉತ್ತರ ದಕ್ಷಿಣಗಳನ್ನು ಸೇರಿಸುವ ಸೇತುವೆ ಆಗಿದೆ'. ಎಂದು ತಿಳಿಸಿ ವಿಜಯನಗರ ಸಾಮ್ರಾಜ್ಯದ ವೈಭವವನ್ನು ಪರಿಚಯ ಮಾಡಿಕೊಟ್ಟು, ವಿದ್ಯಾರ್ಥಿಗಳ ಉತ್ಸಾಹ, ವಿವೇಕದಿಂದ ಕೂಡಿದ್ದು. ರಚನಾತ್ಮಕ ಕಾರ್ಯವಾಗಿ ಪರಿವರ್ತಿಸಿಗೊಳ್ಳ ಬೇಕೆಂದು ಆಶಿಸಿದರು. ಕೊನೆಯಲ್ಲಿ 'ಕ್ರೈಸ್ಟ್ ಕಾಲೇಜ್ ಕನ್ನಡ ಸಂಘವು ತುಂಬ ದೊಡ್ಡ ಹಳೆಯ ಸಂಘ ಸಂಸ್ಥೆಗಳು ಮಾಡದೆ ಇರುವ ಕೆಲಸವನ್ನು ಮಾಡುತ್ತಿದೆ. ಸಂಘದ ಆಸೆಗಳು ಯೋಜನೆಗಳು ನೆರವೇರಲಿ ಎಂದು ಹಾರೈಸಿದರು.

ಅಧ್ಯಕ್ಷ ಭಾಷಣವನ್ನು ಮಾಡಿದ ಡಾ॥ ಎಚ್. ನರಸಿಂಹಯ್ಯನವರು ಕನ್ನಡ ಸಂಘ ಮಾಡಿರುವ ದೊಡ್ಡ ಕೆಲಸವನ್ನು ಅಭಿನಂದಿಸಿದರು. ಕನ್ನಡ ಆಡಳಿತಭಾಷೆ ಮತ್ತು ಕನ್ನಡ ಮಾಧ್ಯಮದ ಬಗ್ಗೆ ಒತ್ತಿ ಹೇಳಿದರು. ಜ್ಞಾನಸಂಪಾದನೆಗೆ ನಾವು ಇಂಗ್ಲಿಷ್ ಭಾಷೆಯನ್ನು ಅವಲಂಬಿಸಬೇಕು. ಆದರೆ ಅದು 'ಪ್ರೆಸ್ಟೀಜ್'ಗಾಗಿ ಉಪ ಯೋಗಿಸುವ ಭಾಷೆಯಾಗಬಾರದು' ಎಂದು ತಿಳಿಸಿದರು.

ಈ ಸಂಭ್ರಮದ ಸಮಾರಂಭಕ್ಕೆ 'ನದಿಯ ಮೇಲಿನ ಗಾಳಿ'ಯ ಪ್ರೊ॥ ಕ. ವೆಂ. ರಾಜಗೋಪಾಲರು ಮತ್ತು 'ಪ್ರತಿಷ್ಠಿತ ಶಕ್ತಿ ಮತ್ತು ಕನ್ನಡ ಸಾಹಿತ್ಯ'ದ ಶ್ರೀ ಕಿ.ರಂ. ನಾಗರಾಜ ಅವರೂ ಬಂದಿದ್ದರು. ವಿವಿಧ ಕಾಲೇಜುಗಳ ವಿದ್ಯಾರ್ಥಿಗಳು ಮತ್ತು ಅಧ್ಯಾಪಕರು ಸಮಾರಂಭಕ್ಕೆ ಆಗಮಿಸಿದ್ದರು. ವಂದನಾರ್ಪಣೆಯಾದ ಮೇಲೆ ರಾಷ್ಟ್ರ ಗೀತೆಯೊಂದಿಗೆ ಸಭೆ ಮುಕ್ತಾಯಗೊಂಡಿತು. ಅಚ್ಚುಕಟ್ಟಾಗಿ ನಡೆಸಿದ ಈ ಉತ್ಸವ ದಿಂದ ಮನೆಯ ಕಡೆ ಹೊರಟಾಗ, ಅದರ ನೆನಪೇ ನಮ್ಮನ್ನು ಆವರಿಸಿತ್ತು.

ಅನುಬಂಧ-೨

ಮಾಸ್ತಿಯವರೊಂದಿಗೆ ಒಂದು ಸಂಜೆ

ಸತೀಶ್ವರರಾವ್ ಎಸ್.

ಎರಡನೆಯ ಪದವಿ

13 ಜನವರಿ 1980

'ಅನಕೃ ಅಂತರಕಾಲೇಜು ಲೇಖನ ಸ್ಪರ್ಧೆ'ಯನ್ನು ಏರ್ಪಡಿಸುವುದು ಕ್ರೈಸ್ಟ್ ಕಾಲೇಜಿನ ಅವಿರತ ಚಟುವಟಿಕೆಗಳಲ್ಲಿ ಒಂದು. ಡಾ॥ ಜಿ. ಪಿ. ರಾಜರತ್ನಂರವರ ನೆನಪಿಗೆ ಕಾಲೇಜಿನ ವಿದ್ಯಾರ್ಥಿ ವಿಕಾಸ ಮಾಲೆಯನ್ನು ಸಮರ್ಪಿಸಿದ್ದು, ಹಿರಿಯಣ್ಣ ಮಾಸ್ತಿಯವರು ತಮ್ಮ ಮನೆಯಲ್ಲೇ ಸ್ಪರ್ಧೆಯ ಬಹುಮಾನಿತ ಲೇಖನಗಳ ಬಿಡುಗಡೆ ಮಾಡಿದ್ದು ಈ ಬಾರಿಯ ವಿಶೇಶ. (13 ಫೆಬ್ರುವರಿ 1980)

ಮಧ್ಯಾಹ್ನ 3 ಗಂಟೆ ಸಮಯ. ಬಿಸಿಲು ಜೋರಾಗಿಯೇ ಇತ್ತು. ಬೆಂಗಳೂರಿನ ಹಳೆಯ, ಸುಂದರ ಬಸವನಗುಡಿ ಬಡಾವಣೆಯ ಒಂದು ಹಳೆಯ ಮನೆ, ಮಾಸ್ತಿಯವರದ್ದು. 82 ವರ್ಷಗಳ ಮಾಸ್ತಿಯವರಿಗೆ ಅಲೆದಾಟದ ಕಾಟ ಕೊಡಬಾರದೆನ್ನುವ ಉದ್ದೇಶದಿಂದ ಬಹುಮಾನಿತ ಲೇಖನಗಳ ಬಿಡುಗಡೆಯ 'ಸಮಾರಂಭ'ವನ್ನು ಮಾಸ್ತಿಯವರ ಮನೆಯಲ್ಲಿಯೇ ಏರ್ಪಡಿಸಲಾಗಿತ್ತು. ನಾವು ಸುಮಾರು ಹದಿನೈದು ಮಂದಿ (ಅಧ್ಯಾಪಕರು, ವಿಧ್ಯಾರ್ಥಿಗಳು, ಬಹುಮಾನ ವಿಜೇತರೂ ಸೇರಿ) ಮಾಸ್ತಿಯವರ ಮನೆಯ ಹತ್ತಿರ ಹೋಗುತ್ತಿದ್ದಂತೆ ದೇವಾಲಯ ಪ್ರವೇಶಕ್ಕೆ ಸಿದ್ಧವಾದಂಥ ಭಾವ ತುಂಬಿಕೊಳ್ಳತೊಡಗಿತು. ನಾವು ಹೋಗುತ್ತಿದ್ದಂತೆ ಮಾಸ್ತಿಯವರ ಹಸಿನ್ಮುಖಿ ಅಳಿಯಂದಿರಿಬ್ಬರು ಆತ್ಮೀಯವಾಗಿ ಸ್ವಾಗತಿಸಿದರು. ಮನೆಯ ಒಳಗಿನ ದೊಡ್ಡ ಹಾಲಿನಲ್ಲಿ ನಮ್ಮ ಸಮಾರಂಭ, ಪುಸ್ತಕಗಳು, ಹಲವಾರು ಭಾವ ಚಿತ್ರಗಳು, ವರ್ಣಚಿತ್ರಗಳು, ಇವುಗಳ ಪರಿಸರದಲ್ಲಿ ಮಾಸ್ತಿಯವರ ಸುತ್ತ ಕುಳಿತಿದ್ದ ನಾವು ಆ ಹಿರಿಯರೆದುರು ಅವರ ಶಿಷ್ಯರಂತೆ ಭಾಸವಾಯಿತು. ಎರಡು ದಿನಗಳಷ್ಟೇ ಹಿಂದೆ ನಡೆದ ಬೆಳಗಾವಿಯ ಸಾಹಿತ್ಯ ಸಮ್ಮೇಳನ

ದಿಂದ ಒಂದಿರುಗಿದ್ದ ಅವರ ಮುಖದಲ್ಲಿ ಆಯಾಸದ ಚಿಹ್ನೆ ಏನಾದರೂ ಕಾಣಬಹು ದೆಂದು ಹುಡುಕಿದೆ. ಏನೂ ಕಾಣಲಿಲ್ಲ. ಆ ಅವಿಶ್ರಾಂತ ಚುರುಕು ಕಣ್ಣುಗಳು, ಸ್ನೇಹಪರ ಹಸನ್ಮುಖ, ಎತ್ತರದ ನಿಲುವು, ಆತ್ಮೀಯತೆ ಇವುಗಳನ್ನು ನೋಡು ತ್ತಿದ್ದಂತೆ ಅವರ ಬಗ್ಗೆ ಇದ್ದ ಗೌರವ ಇಮ್ಮಡಿಯಾಯಿತು.

ಬಂದಿದ್ದವರನ್ನು ಔಪಚಾರಿಕವಾಗಿ 'ಸ್ವಾಗತಿಸಿ' ನಾವೆಲ್ಲಾ ಅಲ್ಲಿಗೆ ಬಂದುವರ ಕಾರಣವದ್ನು ಸಂಕ್ಷಿಪ್ತವಾಗಿ ತಿಳಿಸಿ ಶ್ರೀ ಎಚ್. ಆರ್. ರಾಮಕೃಷ್ಣರಾವ್‌ರವರು 'ತೊಂದರೆ ಕೊಡಬಾರದೆಂದು ಬಂದು ತೊಂದರೆ' ಕೊಡುತ್ತಿರುವುದಕ್ಕಾಗಿ ಮಾಸ್ತಿ ಯವರ ಕ್ಷಮಾಪಣೆಯನ್ನು ಕೋರಿದರು. (ಮಾಸ್ತಿಯವರೇ ನಮ್ಮನ್ನು ಉಪಚರಿ ಸುವ ಭಾರವನ್ನು ಹೊತ್ತುಕೊಂಡಿದ್ದರು. ಮಾಸ್ತಿಯವರ ವಿಚಾರಭರಿತ ಮಾತು ಗಳಿಗೆ ಅಧ್ಯಾಪಕರೊಬ್ಬರು ಪೀಠಿಕೆ ಹಾಕಿದರು. "ನಿಮಗೆ ನಮ್ಮ ಕಾಲೇಜಿನವರೆಗೂ ಬರುವ ತೊಂದರೆ ಕೊಡಬಾರದೆಂದು..." ಎಂಬ ಅವರ ಮಾತುಗಳು ಮುಗಿಯುತ್ತಿ ದ್ದತೆಯೇ ಪ್ರಾರಂಭವಾಯಿತು, ಮಾಸ್ತಿಯವರ ಸ್ಪಷ್ಟ, ಸರಳ, ಸರಸ, ನಿರರ್ಗಳ, ಹೃದಯಸ್ಪರ್ಶಿ ಮಾತಿನ ಧಾರೆ. ಕೇಳುತ್ತಿದ್ದವರ ಕಿವಿಗಳನ್ನು ಸೂರೆಮಾಡುತ್ತಿದ್ದ ಅವರ ಮಾತುಗಳು ಅವರ ಧೀಮಂತ ವ್ಯಕ್ತಿತ್ವವನ್ನು ನಮ್ಮ ಮುಂದೆ ಪದರ ಪದರ ವಾಗಿ ಬಿಚ್ಚುತ್ತಿದ್ದವು.

ಮಾತು ಜಾತಿ, ಮತಗಳತ್ತ ಹರಿದಾಗ ಮಾಸ್ತಿಯವರು "ನಾನೊಬ್ಬ ಕ್ರಿಶ್ಚಿ ಯನ್" ಎಂದು ಹೇಳಿ ಸುತ್ತಲಿದ್ದವರ ಮುಖಗಳನೊಮ್ಮೆ ನೋಡಿ ಮಂದಹಾಸ ಬೀರುತ್ತ "ಯಾರು ಕ್ರಿಶ್ಚಿಯನ್ ? ಯಾರು ಮುಸ್ಲಿಮ್ ? ನಾನೂ ಬೈಬಲ್ ಓದಿದ್ದೇನೆ, ಆ ಅಲ್ಲಾನ ಬಗ್ಗೆ ತಿಳಿದಿದ್ದೇನೆ, ನಾನೂ ಮುಸ್ಲಿಮ್ ಯಾಕಾಗಬಾರದು ? ಕ್ರಿಶ್ಚಿಯನ್ ಏಕಲ್ಲ ? ದಿನಾ ಪ್ರಾರ್ಥನೆ ಮಾಡುವವರೆಲ್ಲಾ ಮುಸ್ಲಿಮರಲ್ಲ, ಹಿಂದೂ ಗಳಲ್ಲ. ಯಾರು ಒಳ್ಳೆಯ ಗುಣ, ನಡತೆಯಿಂದ ಇರುತ್ತಾರೋ ಅವರೇ ನಿಜವಾದ ಕ್ರಿಶ್ಚಿಯನ್, ಮುಸ್ಲಿಮ್, ಹಿಂದೂ..."

"ನಮ್ಮಲ್ಲಿ ಹಿಂದಿನಿಂದಲೂ ಹರಿಜನರನ್ನು, ಹಿಂದುಳಿದವರನ್ನು ನಿಕೃಷ್ಟವಾಗಿ ಕಾಣುವ ಪದ್ಧತಿಯಿದೆ. ನಮ್ಮ ಹತ್ತಿರ ಅವರನ್ನು ಸೇರಿಸೊದಿಲ್ಲ. ಇದು ದೊಡ್ಡ ತಪ್ಪು. ನಮ್ಮಿಂದ ಸಿಗದ ಸುಖವನ್ನು ಅವರು ಮತಾಂತರದಿಂದ ಪಡೆದರೆ ನಮ್ಮ ದೇನು ಅಡ್ಡಿ ? ಆದರೆ ಕೆಲವರಲ್ಲಿ ಒಂದು ಕೆಟ್ಟ ಪದ್ಧತಿಯಿದೆ. ಅದೆಂದರೆ ಎಲ್ಲ ರನ್ನೂ ತಮ್ಮ ಮತಕ್ಕೆ ಸೆಳೆದುಕೊಳ್ಳುವುದು. ನಾನು ಮತಾಂತರ ವಿರೋಧಿ ಅಲ್ಲ. ಆದರೆ ಮತಾಂತರ ಬೇಕಾದವರು ಸ್ವಪ್ರೇರಣೆಯಿಂದ ಮತಾಂತರಗೊಂಡರೆ ನನ್ನ ದೇನೂ ಅಡ್ಡಿಯಿಲ್ಲ" ಮತಾಂತರದ ಬಗ್ಗೆ ಮಾಸ್ತಿಯವರು ವ್ಯಕ್ತಪಡಿಸಿದ ಅಭಿ ಪ್ರಾಯವಿದು.

ಬಂಡಾಯ ಸಾಹಿತ್ಯ, ಬಂಡಾಯ ಸಾಹಿತಿ ಇವು ಇತ್ತೀಚೆಗೆ ಬಹಳವಾಗಿ ಕೇಳಿ ಬರುತ್ತಿರುವ ಪದಗಳು, ಇದರ ಬಗ್ಗೆ ಗಮನ ಸೆಳೆದಾಗ ಮಾಸ್ತಿಯವರು "ಬಂಡಾಯ

ಸಾಹಿತ್ಯ, ಬರೀ ಸಾಹಿತ್ಯ ಎಲ್ಲಾ ಒಂದೇ. ಹಸಿದವರಿಗೆ ಅನ್ನ ಹಾಕಿ ಅಂತ ಅವರು ಹೇಳಿದರೆ, ನಾವೂ ಅದನ್ನೇ ತಾನೇ ಹೇಳುತ್ತೀವಿ ? ನಾವೇನು ಹಸಿವಿನಿಂದ ಸಾಯಲಿ ಅಂತ ಹೇಳುವುದಿಲ್ಲವಲ್ಲ ? ಭಾಷೆ ಬೇರೆ, ಭಾವ ಒಂದೇ" ಇತ್ತೀಚಿನ ಸಿನಿಮಾ ಸಂಗೀತದ ಬಗ್ಗೆ ಮಾಸ್ತಿಯವರು "ನಾನಿರುವುದೇ ನಿನಗಾಗಿ ;. ನೀನಿರುವುದೇ ನನಗಾಗಿ..." 'ನಾನಿನ್ನ ಬಿಡಲಾರೆ' ಇದೆಂಥ ಸಾಹಿತ್ಯ ?" ಎಂದಾಗ ಅವರ ಮುಖದ ಸುಕ್ಕುಗಳು ಹೆಚ್ಚಾದವು.

ಮಾಸ್ತಿಯವರ ಹದಿನಾಲ್ಕನೆ ಕಥಾ ಸಂಪುಟಕ್ಕೆ ಕೆಲವರ ಅಪೇಕ್ಷೆಯಂತೆ ಸಹಿ ಹಾಕುತ್ತಾ ಅವುಗಳ ಮೌಲ್ಯವನ್ನು ಹೆಚ್ಚಿಸುತ್ತಿದ್ದ ಮಾಸ್ತಿಯವರನ್ನು ಯಾರೋ ಕೇಳಿದರು "ನಿಮ್ಮ ಜೀವನದಲ್ಲಿ ನಡೆದ ಅಪೂರ್ವ ಘಟನೆ ಯಾವುದು" ಎಂದು. ತಲೆ ಯೆತ್ತಿ ನಗುತ್ತಾ ಮಾಸ್ತಿಯವರು" ನಾನು ಹುಟ್ಟಿದ್ದೇ ನನ್ನ ಜೀವನದ ಅಪೂರ್ವ ಘಟನೆ. life is a miracle ಎಂದರು.

ನಾವು ಹೋಗಿ ಬಹಳ ಹೊತ್ತಾಗಿತ್ತು. ಮಾತಿನ ಮಧ್ಯೆ ಹೋದವರ ಪರಿಚಯವನ್ನು ಮಾಡಿಕೊಂಡಿದ್ದರು. ಪುಸ್ತಕಗಳ ಬಿಡುಗಡೆಯನ್ನು, ಬಹುಮಾನಗಳ ವಿತರಣೆಯನ್ನು, ಬಂದವರಿಗೆ ಉಪಹಾರ, ಕಾಫಿಯ ಸಮಾರಾಧನೆಯನ್ನು ಮಾಸ್ತಿಯವರು ಚೆನ್ನಾಗಿ ನಡೆಸಿದ್ದರು. ಹೊರಡುವಾಗ ನಮಸ್ಕರಿಸಿದರೆ "ನನಗಲ್ಲ ಈ ನಮಸ್ಕಾರ, ಇಲ್ಲಿರುವ ದೇವರಿಗೆ" ಎಂದು ಎದೆ ಮುಟ್ಟಿಕೊಂಡರು, "ನಿಮ್ಮ ಕಾಲೇಜಿಗೆ ಬಂದಿದ್ದರೆ ಇಷ್ಟೆಲ್ಲಾ ಮಾತಾಡಲು ಆಗುತ್ತಿರಲಿಲ್ಲ" ಎಂದು ನಗು ನಗುತ್ತಾ ಬೀಳ್ಕೊಟ್ಟರು. ಹೊರಗೆ ಬಂದಾಗ ಅಪೂರ್ವವಾದ ಅನುಭವದಿಂದ ದೂರ ಸರಿದಂತಾಯಿತು. ಬಿಸಿಲು ತಗ್ಗಿತ್ತು.

ಅನುಬಂಧ—೩

'ಉದಯರವಿ'ಯಲ್ಲೊಂದು ಅಪತ್ರಿಕಾ ವಾರ್ತೆ

ಪ್ರೊ|| ಎಚ್. ಆರ್. ರಾಮಕೃಷ್ಣರಾವ್
ಭೌತಶಾಸ್ತ್ರ ವಿಭಾಗ

31 ಜನವರಿ 1987

ಜನವರಿ 31, ವರಕವಿ ಬೇಂದ್ರೆಯವರ ಹುಟ್ಟುಹಬ್ಬದ ದಿನ. ಬೇಂದ್ರೆ ಸ್ಮೃತಿಯಲ್ಲಿ ವಿದ್ಯಾರ್ಥಿಗಳಿಂದ ಕವನ ಬರೆಸಿ, ಉತ್ತಮವಾದವುಗಳನ್ನು ಅಚ್ಚು ಹಾಕಿಸಿ, ಕವಿಗಳಿಗೆ ಬಹುಮಾನವಿತ್ತು ಬೆನ್ನುತಟ್ಟುವ ಕೆಲಸ; 'ಕ್ರೈಸ್ಟ್ ಕಾಲೆಜ್ ಕನ್ನಡ ಸಂಘ'ಕ್ಕೆ ಹೆಮ್ಮೆಯ ಸಂಗತಿ. ಈ ವರ್ಷದ್ದು ಐದನೆಯ ವಿದ್ಯಾರ್ಥಿಕವನ ಸಂಕಲನ. ಇದೇ ಸಂದರ್ಭದಲ್ಲಿ, ಕನ್ನಡ ನಾಡಿನ ಮತ್ತೊಬ್ಬ ಹಿರಿಯ ಸಾಹಿತಿ; ಡಾ|| ಅ.ನ.ಕೃ. ಅವರ ಸ್ಮೃತಿಯಲ್ಲಿ 14 ವರ್ಷಗಳಿಂದ ನಡೆಸುತ್ತಾ ಬಂದಿರುವ ಅಂತರ ಕಾಲೇಜು ಲೇಖನ ಸ್ಪರ್ಧೆಯಲ್ಲಿ ಬಹುಮಾನಿತರಾದ ಮೂವರ ಲೇಖನಗಳ ಪುಸ್ತಕವೂ ಸಿದ್ಧವಾಗಿತ್ತು. ಇದರೊಂದಿಗೆ ಸಂಘದ ಪ್ರಕಟಣಮಾಲೆಯ ಮತ್ತೊಂದು ಕವನಸಂಕಲನ; ಶ್ರೀ ಎಸ್. ಮಂಜುನಾಥ ಅವರ 'ಹಕ್ಕಿ ಪಲ್ಟಿ'ಯೂ ಬಿಡುಗಡೆಗಾಗಿ ಹಾತೊರೆಯುತ್ತಿತ್ತು. ಈ ಎಲ್ಲ ಪುಸ್ತಕಗಳನ್ನೂ ಬಿಡುಗಡೆಮಾಡಿ, ಯುವಕವಿ–ಲೇಖಕರನ್ನು ಆಶೀರ್ವದಿಸಲು ಸಂತೋಷದಿಂದ ಒಪ್ಪಿದವರು ನಮ್ಮೆಲ್ಲರ ಪ್ರೀತಿಯ ಕವಿ, 'ಕುವೆಂಪು' ಅವರು. ಸಮಾರಂಭ ನಡೆಸಲು ಗೊತ್ತಾದ ಸ್ಥಳ: ಮೈಸೂರಿನಲ್ಲಿ 'ಕುವೆಂಪು' ಅವರ ನಿವಾಸ 'ಉದಯರವಿ'.

ಸಮಾರಂಭಕ್ಕೆ ಅತ್ಯಗತ್ಯವಾದ ಪುಸ್ತಕಗಳು, ಬಹುಮಾನಗಳು : ಕನ್ನಡ ಸಂಘದ ನಾಮಫಲಕವೇ ಮುಂತಾದ ಹಲವಾರು ಸಾಮಾನುಗಳನ್ನು ಬೆಂಗಳೂರಿನಿಂದ ಜೊತೆಯಲ್ಲಿಯೇ ಕೊಂಡೊಯ್ಯಬೇಕಾಗಿತ್ತು. ಬಸ್ಸಿಗಿಂತ ರೈಲೇವಾಸಿ ಅಂತ ತೀರ್ಮಾನವಾಯಿತು. ಜನವರಿ 30ರಂದು 12–30ರ ಕ್ಲಾಸು ಮುಗಿಸಿಕೊಂಡು, ಪ್ರಿನ್ಸಿಪಾಲರ ಅಪ್ಪಣೆ ಪಡೆದು, ತರಾತುರಿಯಲ್ಲಿ ಒಂದಿಷ್ಟು ಹೊಟ್ಟೆಗೆ ಹಾಕಿಕೊಂಡು ಆಟೋ ಹಿಡಿದು ರೈಲ್ವೆ ಸ್ಟೇಷನ್ ತಲುಪುವ ಹೊತ್ತಿಗೆ ಮೈಸೂರಿನಿಂದ ಆಗತಾನೆ

ಬಂದು ಮತ್ತೆ ಹೊರಡಲು ಸಿದ್ಧವಾಗಿದ್ದ ಕಾವೇರಿ ಎಕ್ಸ್‌ಪ್ರೆಸ್ ರೈಲು ಭರ್ತಿಯಾಗಿತ್ತು. ಅಂತೂ ಸ್ವಲ್ಪ ಚಾಕಚಕ್ಯತೆ ಉಪಯೋಗಿಸಿ ಗೆಳೆಯ ಶ್ರೀನಿವಾಸರಾಜು; ನಮ್ಮ ಪುಸ್ತಕಗಳ ಚೀಲಗಳಿಗೆ ಸೂಕ್ತ ಜಾಗ ಹೊಂದಿಸಿದರು. ಕುಳಿತಿದ್ದವರು 'ಅಡ್ಜಸ್ಟ್' ಮಾಡಿಕೊಂಡು ನಮಗಷ್ಟು ಜಾಗ ಬಿಟ್ಟರು. ಕುಳಿತು ಸ್ವಲ್ಪ ಕಾಲು ಚಾಚುವ ಹೊತ್ತಿಗೆ ರೈಲು ಹೊರಟಿತು. ಗಡಿಬಿಡಿಯ ಓಡಾಟದಿಂದ ಸ್ವಲ್ಪ ಆಯಾಸವಾಗಿದ್ದು, ತಣ್ಣನೆಯ ಗಾಳಿ ಬೀಸಿದ್ದರಿಂದ ಹಾಗೆಯೇ ಮಂಪರು, ತೂಕಡಿಕೆ. ಸುಷುಪ್ತಾವಸ್ಥೆಯಲ್ಲಿ, ಹಿಂದೆ ನಡೆಸಿದ ಇಂತಹದೇ ಕಾರ್ಯಕ್ರಮಗಳ ನೆನಪಿನ ಅಲೆಗಳು ತೇಲಿಹೋದವು. 'ರಾ.ಶಿ' ಅವರ ಮನೆಯಲ್ಲಿ ಪುಸ್ತಕ ಬಿಡುಗಡೆ ಮಾಡಿದ್ದೆವು. ಆಗಿನ ಪ್ರಿನ್ಸಿಪಲ್ ಮತ್ತು ಕನ್ನಡ ಬಾರದ 'ಮಾಣಿ ಜೈಲ್ಸ್' ನಮ್ಮೊಂದಿಗಿದ್ದರು. ಅನಾರೋಗ್ಯದಿಂದ ಮಾತಾಡಲು ಕಷ್ಟಪಡುತ್ತಿದ್ದ 'ರಾ.ಶಿ.' ತಮ್ಮ ಹಾಸ್ಯಭರಿತ ಭಾಷಣದಲ್ಲಿ ಎಲ್ಲರನ್ನೂ ನಗಿಸಿ ತಾವೂ ನಕ್ಕಿದ್ದರು. ಆಮೇಲೆ 'ಮಾಸ್ತಿ', ರುಚಿರುಚಿಯಾದ ತಿಂಡಿಕೊಟ್ಟು, ಎಲ್ಲರನ್ನೂ ಆತ್ಮೀಯವಾಗಿ ಮಾತನಾಡಿಸಿ, ಪುಸ್ತಕ ಬಿಡುಗಡೆ ಮಾಡಿದ್ದರು. ಗೆಳೆಯ ರಾಜು ಅವರಿಗೆ ನಾಳಿನ ಕಾರ್ಯಕ್ರಮ ಹೇಗಾಗುತ್ತೊ ಅನ್ನುವ ಆತಂಕ. 'ಕುವೆಂಪು' ಆರೋಗ್ಯ ಹೇಗಿದೆಯೊ ? ಮೈಸೂರಿನ ಅನೇಕ ವಿದ್ಯಾರ್ಥಿಗಳಿಗೆ ಬಹುಮಾನ ಬಂದಿದ್ದು, ಅವರೆಲ್ಲ ಅತಿ ಪ್ರಚಾರಕೊಟ್ಟು ಗೆಳೆಯರ ಹಿಂಡಿನೊಂದಿಗೆ ಕಾರ್ಯಕ್ರಮಕ್ಕೆ ಹಾಜರಾದರೆ ಗತಿ ಏನು ? ಸ್ಥಳಾವಕಾಶವಿದೆಯೆ ? ಈ ಗದ್ದಲ 'ಕುವೆಂಪು' ಅವರಿಗೆ ಹಿಡಿಸೀತೆ ? ಯೋಚನೆಗಳ ಸರಮಾಲೆ. ಮಂಡ್ಯ ದಾಡುವ ಹೊತ್ತಿಗೆ, ಬಹುಮಾನ ಪಡೆಯಲು ಬೆಂಗಳೂರಿನಿಂದ ಹೊರಟಿದ್ದ ಇಬ್ಬರು ವಿದ್ಯಾರ್ಥಿನಿಯರು ನಮ್ಮ ಪುಸ್ತಕಗಳ ಚೀಲದಿಂದ ಪ್ರಭಾವಿತರಾಗಿ ಪರಿಚಯ ಬೆಳಸಿದರು. ಅವರ ಕವನಗಳು ಬಿಡುಗಡೆಗಾಗಿ ನಮ್ಮ ಚೀಲಗಳಲ್ಲಿ ಚಡಪಡಿಸುತ್ತಿರುವುದನ್ನು ಅವರ ಒಳಮನಸ್ಸು ಗುರುತಿಸಿತ್ತು. ಅವರಿಗೆ ಪುಸ್ತಕಗಳನ್ನು ನೋಡುವ ಕಾತುರ. ಸಂಜೆ 6-30ಕ್ಕೆ ಮೈಸೂರು ತಲುಪಿದೆವು.

ಸಾಮಾನುಗಳನ್ನು ರಾಜು ಅವರ ತಂಗಿಯ ಮನೆಯಲ್ಲಿಟ್ಟು ಡಾ॥ ಪ್ರಭುಶಂಕರ ಅವರನ್ನು ಮೊದಲು ಭೇಟಿಯಾಗಬೇಕಿತ್ತು. ಪುಸ್ತಕ ಬಿಡುಗಡೆಯ ಸಮಾರಂಭವನ್ನು ಗೊತ್ತುಮಾಡಿಕೊಟ್ಟವರೇ ಅವರು. 'ಆಟೋ' ಹಿಡಿದು ಮೊದಲು ಜಯನಗರದಲ್ಲಿನ ರಾಜು ಅವರ ತಂಗಿಯ ಮನೆಗೆ ಹೋಗಿ, ಸಾಮಾನುಗಳ ಚೀಲಗಳನ್ನು ಅಲ್ಲಿಟ್ಟು: ಅದೇ ಆಟೋದಲ್ಲಿ 'ಮಾನಸಗಂಗೋತ್ರಿ'ಗೆ ಹೋಗುವಂತೆ ಚಾಲಕನಿಗೆ ಸೂಚಿಸಿದೆವು. ಆಟೋಚಾಲಕ ಒಳ್ಳೆ ವಾಚಾಳಿ; ಕನ್ನಡ ಪುಸ್ತಕ ಪ್ರೇಮಿ. ಕನ್ನಡ ಪುಸ್ತಕಗಳನ್ನು ಮಾರುವಲ್ಲಿನ ಕಷ್ಟ ಅವನಿಗೆ ಗೊತ್ತಿತ್ತು. ಸ್ವಲ್ಪವೂ ಗೊಣಗದೆ ನಮಗೆ ತುಂಬಾ ನೆರವಾದ. ನಾಳಿನ ಕಾರ್ಯಕ್ರಮಕ್ಕೆ ನಮಗೊಬ್ಬ ಸಮರ್ಥ 'ಫೋಟೋಗ್ರಾಫರ್' ಬೇಕಾಗಿತ್ತು. ಆಟೋಚಾಲಕ ಒಂದು 'ಸ್ಟುಡಿಯೋ'ಕ್ಕೆ ಕರೆದೊಯ್ದು ಎಲ್ಲಾ ಏರ್ಪಾಟು ಮಾಡಿದ. ಅಲ್ಲಿಂದ ಮಾನಸಗಂಗೋತ್ರಿಗೆ ಹೋದಾಗ

ಡಾ॥ ಪ್ರಭಾಶಂಕರ ಅವರು ಮನೆಯಲ್ಲಿರಲಿಲ್ಲ. ಸುಮಾರು 8-00ಕ್ಕೆ ಮತ್ತೆ ಬರುವುದಾಗಿ ಅವರ ಮನೆಯಲ್ಲಿ ತಿಳಿಸಿ, ದೇವರಾಜ ಮಾರ್ಕೆಟ್ಟಿಗೆ ಆಟೋ ತಿರುಗಿಸಿದೆವು. ಕವಿ ಸನ್ಮಾನಕ್ಕೆ ಬೇಕಾದ ಶಾಲು, ಹಣ್ಣು-ಹೂವು, ಎಲೆ-ಅಡಿಕೆ, ಗಂಧದ ಹಾರ ಮುಂತಾದುವುಗಳನ್ನು ಖರೀದಿಸಿ ನಾವು ಮತ್ತೆ 'ಮಾನಸಗಂಗೋತ್ರಿ' ತಲುಪಿದಾಗ ರಾತ್ರಿ 8-00 ಆಗಿತ್ತು.

ನಾವು ಅಲ್ಲಿಗೆ ಹೋಗುವ ವೇಳೆಗೆ ಮೊದಲೇ 'ಕುವೆಂಪುತಾತ' ಎರಡು ಬಾರಿ ಫೋನ್ ಮಾಡಿದ್ದರಂತೆ; ಇದನ್ನು ತಿಳಿಸಿದವಳು ಡಾ॥ ಪ್ರಭಾಶಂಕರ ಮಗಳು. ನಾವು ಮಾತನಾಡುತ್ತಿದ್ದಾಗಲೇ ಮತ್ತೊಮ್ಮೆ ಫೋನಿನ ಕರೆಗಂಟೆ. ನಾವು ಬಂದಿದ್ದೇವೆಯೆ ಹೇಗೆ; ನಮ್ಮ ಊಟ ವಸತಿ ಸೌಕರ್ಯಗಳ ಬಗ್ಗೆ ಕಳಕಳಿಯಿಂದ ವಿಚಾರಿಸುತ್ತಿದ್ದರು. 'ಕುವೆಂಪು'. ಇಲ್ಲಿ ಎಲ್ಲಾ ತಿರುಗು-ಮುರುಗು ! ಬೇರೆ ಸಂದರ್ಭಗಳಲ್ಲಿ ಮುಖ್ಯ ಅತಿಥಿಯನ್ನು ಕಾರ್ಯಕರ್ತರು ವಿಚಾರಿಸಿಕೊಂಡರೆ ಇಲ್ಲಿ ಕಾರ್ಯಕರ್ತರ ಬಗ್ಗೆ ಮುಖ್ಯ ಅತಿಥಿಗೆ ಕಾಳಜಿ. ಮುಂಜಾನೆ 9-30ಕ್ಕೆ 'ಉದಯರವಿ'ಗೆ ಬಂದರೆ ಸಾಕು ಅಂತ ತಿಳಿಯಿತು. 'ಕುವೆಂಪು' ಅವರ ಆರೋಗ್ಯ ಅಷ್ಟು ಚೆನ್ನಾಗಿರಲಿಲ್ಲ ಅಂತ ಕೇಳಿದ್ದ ನಮಗೆ ಅವರ ಲವಲವಿಕೆಯಿಂದಾಗಿ ಆತಂಕ ಕಳೆದು ಹರ್ಷವುಂಟಾಯಿತು. ಎಲ್ಲಾ ಸುಗಮ ಮಾಡಿಕೊಟ್ಟ ಪ್ರಭಾಶಂಕರ ಅವರನ್ನು ವಂದಿಸಿ, ಮಾರನೆಯ ದಿನದ ಕಾರ್ಯಕ್ರಮದ ಬಗ್ಗೆ ಚರ್ಚಿಸುತ್ತಾ ಮನೆ ಸೇರಿದಾಗ ರಾತ್ರಿ 9 ಗಂಟೆ. ಹಸಿದಿದ್ದ ನಮಗೆ ಸೊಗಸಾದ ರಸಕವಳ ಕಾದಿತ್ತು !

ಜನವರಿ 31, ಶನಿವಾರ. ನಸುಕಿನಲ್ಲೆದ್ದು ಗಾಳಿಸೇವನೆಗೆಂದು ಹೊರಟ ನನಗೆ ಕಿತ್ತಳೆಬಣ್ಣದ ಆಕಾಶ ಮೈ-ಮನವನ್ನು ಹಿಗ್ಗಿಸಿ 'ಉದಯರವಿ'ಯ ನೆನಪು ಮೂಡಿತು. ಸ್ನಾನ ಮುಗಿಸಿ. ಸೋದರಿ ಸರಳಾ ಮಾಡಿಕೊಟ್ಟ ತಿಂಡಿ, ಕಾಫಿ ಮುಗಿಸಿಕೊಂಡು, ಮತ್ತೊಮ್ಮೆ 'ಫೋಟೋಗ್ರಾಫರ'ನಿಗೆ ನೆನಪು ಮಾಡಿ, 'ಉದಯರವಿ'ಗೆ ಬಂದಾಗ ಸಮಯ 9 ಗಂಟೆ. ಆ ವೇಳೆಗಾಗಲೆ ಬಿಳಿಯ ಜುಬ್ಬ ಪೈಜಾಮ ತೊಟ್ಟು; ಕತ್ತಿಗೆ ಮಫ್ಲರ್ ಸುತ್ತಿಕೊಂಡಿದ್ದ ಹಸನ್ಮುಖಿ 'ಕುವೆಂಪು'. ಡಾ॥ ಪ್ರಭಾಶಂಕರ ಅವರ ಜೊತೆಗೆ ಕುಳಿತಿದ್ದರು. ಅವರನ್ನು ಕಂಡಾಗ ಆನಂದ, ಧನ್ಯತೆಗಳ ಅವರ್ಣನೀಯ ವಿಚಿತ್ರ ಅನುಭವವಾಯಿತು, ಕಾಲದೇಶಗಳ ಮಿತಿಯನ್ನು ಮೀರಿನಿಂತ ವಿಶ್ವಮಾನವನೊಬ್ಬ ಸಮ್ಮುಖದಲ್ಲಿ ನಿಂತಂತೆ ಭಾಸವಾಯಿತು. ಭಾವುಕತೆಯ ಗುಂಗಿನಿಂದ ಹೊರಬಂದೊಡನೆ ಪುಸ್ತಕಗಳ ಬಿಡುಗಡೆಯ ಸಮಾರಂಭದ ಏರ್ಪಾಟಿನತ್ತ ಗಮನ ಹರಿಸಿದೆವು.

'ಉದಯರವಿ'ಯಲ್ಲಿನ ಕೈದೋಟ ಸಾಕಷ್ಟು ವಿಶಾಲವಾಗಿದೆ. ಸಪೋಟಮರದಲ್ಲಿ ಕಾಯಿ ಜಗಿಯುತ್ತಿತ್ತು. ಹಸಿರುಹುಲ್ಲಿನ ಪಟ್ಟಿ; ಕ್ರೋಟನ್ ಮುಂತಾದ ಅಲಂಕಾರಿಕ ಗಿಡಗಳು-ಪುಷ್ಪಗಳು. 'ಕುವೆಂಪು' ಎಲ್ಲಿ ಕೂಡಬೇಕು. ಸುಮಾರು 11-30ರವರೆಗೆ ಬಿಸಿಲು ಬೀಳದ ಜಾಗ ಯಾವುದು, ಮುಂತಾದ ಸಾಕಷ್ಟು ಚರ್ಚೆ

ಯಾದಮೇಲೆ, ಅವರ ಮನೆಯ ಮೆಟ್ಟಿಲುಗಳ ಬದಿಯಲ್ಲಿ, ಕುಂಡಗಳಲ್ಲಿ ನಗುತ್ತಿದ್ದ ಕೆಂಪು-ನೇರಳೆ ಬಣ್ಣದ 'ಆರ್ಕಿಡ್' ಹೂವುಗಳು ನನ್ನನ್ನು ಆಕರ್ಷಿಸಿದವು. ಆ ಕುಂಡಗಳ ಮುಂದೆ ಬೆತ್ತದ ಕುರ್ಚಿಯಲ್ಲಿ 'ಕುವೆಂಪು' ಕುಳಿತು ಬಹುಮಾನ ವಿತರಣೆ ಮಾಡಿದರೆ ಸೊಗಸಾಗಿರುತ್ತದೆ ಎನ್ನುವ ಏಕಾಭಿಪ್ರಾಯಕ್ಕೆ ನಾವು ಬಂದೆವು. ವಿಶಾಲವಾದ ಹುಲ್ಲಿನ ಹಾಸಿಗೆಯ ಮೇಲೆ ಉಳಿದವರು ಕೂಡುವುದೆಂದು ತೀರ್ಮಾನವಾಯಿತು. 9–45ರ ಹೊತ್ತಿಗೆ ಒಬ್ಬೊಬ್ಬರಾಗಿ; ಬಹುಮಾನಿತ ವಿದ್ಯಾರ್ಥಿ ವಿದ್ಯಾರ್ಥಿನಿಯರು 'ಉದಯರವಿ'ಯೊಳಕ್ಕೆ ಬರಬಹುದೋ ಬೇಡವೋ ಅನ್ನುವ ಸಂಕೋಚದ ತಡೆಯನ್ನು ದಾಟಿ ಒಳಕ್ಕೆ ಬಂದರು. ಪರಿಚಯ, ಅಭಿನಂದನೆ, 'ಕುವೆಂಪು' ಅವರಿಂದ ಬಹುಮಾನ ಪಡೆಯುವುದರಲ್ಲಿನ 'ಥ್ರಿಲ್'; ಏನೋ ಖುಷಿ, ನಗು; ಎಲ್ಲೆಲ್ಲೂ ಚೈತನ್ಯ ತುಂಬಿದ ಓಡಾಟ. ಸಾಂಪ್ರದಾಯಕವಾಗಿ ನಡೆಯುವ ಸಮಾರಂಭಗಳಲ್ಲಿ ಇಂತಹ ಆತ್ಮೀಯತೆ, ಒಡನಾಟ ಬಂದೀತೆ ? ಅವರಲ್ಲೇ ಪಿಸುಮಾತು.

'ಓ ನನ್ನ ಚೇತನ, ಆಗು ನೀ ಅನಿಕೇತನ' ಹಾಡಿನೊಂದಿಗೆ ಕಾರ್ಯಕ್ರಮ ಪ್ರಾರಂಭವಾಯಿತು. ಕವಿಗೆ ಕ್ರೈಸ್ಟ್ ಕಾಲೇಜ್‌ನ ಕೃತಜ್ಞತೆಯನ್ನು ಶಾಲು ಹೊದ್ದಿಸಿ, ಗಂಧದ ಹಾರಹಾಕಿ, ಹೂವ-ಹಣ್ಣು ಅರ್ಪಿಸುವುದರ ಮೂಲಕ ವ್ಯಕ್ತಪಡಿಸಿದ ನಂತರ ಪುಸ್ತಕಗಳ ಬಿಡುಗಡೆಯಾಯಿತು. ಶ್ರೀ ಎಸ್. ಮಂಜುನಾಥ ಅವರ ಕವನಸಂಕಲನ 'ಹಕ್ಕಿಪಲ್ಟಿ' ನಮ್ಮ ಕನ್ನಡ ಸಂಘದ ಈ ವರ್ಷವಾದ ಪ್ರಕಟಣೆ. ಇದರೊಂದಿಗೆ ವಿದ್ಯಾರ್ಥಿ ಕವನಸಂಕಲನ 'ನನ್ನ ಪಾಡಿಗೆ ನಾನು' ಮತ್ತು 'ಬಹುಮಾನಿತ ಲೇಖನ ಗಳ'—ಬಿಡುಗಡೆಯಾದ ಮೂರು ಪುಸ್ತಕಗಳು. ಇವುಗಳನ್ನು ಬಿಡುಗಡೆ ಮಾಡಿದ ಕುವೆಂಪು, ಬಹುಮಾನ ವಿಜೇತರಿಗೆ ಪ್ರೀತಿಯಿಂದ ಬಹುಮಾನ ವಿತರಣೆ ಮಾಡುವಾಗ ಆತ್ಮೀಯವಾಗಿ ಮಾತನಾಡಿಸಿ ಆಶೀರ್ವದಿಸಿದರು. 'ಆರ್ಕಿಡ್' ಪುಷ್ಪಗಳ ಹಿನ್ನೆಲೆಯಲ್ಲಿ ನಡೆಯುತ್ತಿದ್ದ ಈ ಸರಳ ಸಮಾರಂಭವನ್ನು ಕ್ಯಾಮೆರಾ ಸೆರೆಹಿಡಿಯುತ್ತಿತ್ತು. ಯಾವ ಪತ್ರಿಕೆಯಲ್ಲಿಯೂ ಸುದ್ದಿಯಾಗದ ಈ ಅಪೂರ್ವ ಕಾರ್ಯಕ್ರಮವನ್ನು 'ಅಪತ್ರಿಕಾ ವಾರ್ತೆ' ಎಂದು ಕರೆದ ಕುವೆಂಪು ತಮ್ಮ 'ವಿಶ್ವಮಾನವ' ಸಂದೇಶವನ್ನು ಎಳೆಯರಿಗೆ ಮನಮುಟ್ಟುವಂತೆ ವಿವರಿಸಿದರು. ಕವಿಗಳಾದ ಎಸ್. ಮಂಜುನಾಥ, ಅಬ್ದುಲ್ ರಶೀದ್ ಕಾವ್ಯವಾಚನ ಮಾಡಿದರು. ಡಾ॥ ಪ್ರಭುಶಂಕರ ಮಾತನಾಡುತ್ತ; ಇಂತಹ ಆತ್ಮೀಯವೂ, ಅರ್ಥಪೂರ್ಣವೂ ಆದ ಕಾರ್ಯಕ್ರಮಗಳು ಹೆಚ್ಚಾಗಿ ನಡೆಯಲೆಂದು ಆಶಿಸಿದರು. ಕಾರ್ಯಕ್ರಮದ ಯಶಸ್ಸಿಗೆ ಕಾರಣರಾದ ಎಲ್ಲರನ್ನೂ ಕೃತಜ್ಞತೆಯಿಂದ ಜ್ಞಾಪಿಸಿಕೊಳ್ಳುವುದರೊಂದಿಗೆ ಸಭೆ ಮುಕ್ತಾಯವಾಯಿತು. ರಾಷ್ಟ್ರಕವಿ 'ಕುವೆಂಪು' ಅವರಿಂದ ಬಹುಮಾನ ಪಡೆಯುವುದು; ಬದುಕಿನುದ್ದಕ್ಕೂ ನೆನಪಿನಲ್ಲುಳಿಯುವ ಒಂದು ಅಪೂರ್ವ ಸಂದರ್ಭ. ಇದಕ್ಕಾಗಿ ಹೆಚ್ಚು ಹಣ ಖರ್ಚಾದರೂ ಸಾರ್ಥಕ ಅಂತ ಬೆಳಗಾಂನಷ್ಟು ದೂರದೂರಿಂದ ಕು॥ ಸುಮಂಗಲಾ ವಿ. ತಳವಡಿ ಬಂದದ್ದು ಎಲ್ಲರ ಮಾತಿನ ಗ್ರಾಸವಾಗಿತ್ತು.

ದೂರದ ಊರುಗಳಿಂದ ಬಂದಿದ್ದ ಯುವಕ-ಯುವತಿಯರಿಗೆ ಪರಸ್ಪರ ವಿಚಾರ ವಿನಿಮಯ ಮಾಡಿಕೊಳ್ಳುವ ಆಸೆ. ಮಾನಸಗಂಗೋತ್ರಿಯಲ್ಲಿ ಎಲ್ಲರೂ ಕಲೆತು ಕವಿಗೋಷ್ಠಿ ಏಕೆ ನಡೆಸಬಾರದು ? ಎಲ್ಲರೂ ಒಪ್ಪಿದರು. ಅಬ್ದುಲ್ ರಶೀದ್ ಮುಂದಾಳತ್ವ ವಹಿಸಿದರು. ಬೆಂಗಳೂರಿನಿಂದ ಹೊತ್ತು ತಂದಿದ್ದ ಭಾರ ಕಡಿಮೆಯಾದ್ದರಿಂದ ಮೈಮನಗಳು ಹಗುರಾಗಿ; ಮಧ್ಯಾಹ್ನದ ರಣಬಿಸಿಲಿನಲ್ಲಿ ನಡೆದೆವು. ಮಾನಸ ಗಂಗೋತ್ರಿಯಲ್ಲಿ ತೆರವಾಗಿದ್ದ ಗಾಂಧಿಭವನದ ಬಯಲು ಸಭಾಂಗಣದಲ್ಲಿ ವಿದ್ಯಾರ್ಥಿ ಕವಿಗೋಷ್ಠಿ ನಡೆಯಿತು. ಹಿಂದೊಮ್ಮೆ ಬಹುಮಾನ ಪಡೆದಿದ್ದು, ಈ ಬಾರಿ ತೀರ್ಪುಗಾರರಲ್ಲೊಬ್ಬರಾಗಿದ್ದ, ಕವಿ ಶ್ರೀ ಚಿಂತಾಮಣಿ ಕೊಡ್ಲೆಕೆರೆ ಅವರ ಅಧ್ಯಕ್ಷತೆಯಲ್ಲಿ ಸುಮಾರು ಒಂದು ಗಂಟೆಕಾಲ ಕಾವ್ಯವಾಚನವಾಯಿತು. ಯುವ ಚೇತನದೊಂದಿಗೆ ಕಳೆದ ಸ್ನೇಹಮಯ ಕ್ಷಣಗಳನ್ನು ಸ್ಮರಿಸುತ್ತಾ, ಆಟೋರಿಕ್ಷಾ ಹತ್ತಿ ಎಲ್ಲರಿಗೂ ವಿದಾಯ ಹೇಳುವಾಗ ಕಣ್ಣು ಮಂಜಾಗಿತ್ತು.

ಅನುಬಂಧ – ೪

‘ನೆನಪಿನ ಓರಿಯೊಳಗ ಮಿನುಗ್ತಾವ ಎಣ್ಣಿ ದೀಪ’

ರಾಮಲಿಂಗಪ್ಪ ಟಿ. ಬೇಗೂರು
ಅಂತಿಮ ಬಿ.ಎ.,
ನ್ಯಾಷನಲ್ ಕಾಲೇಜ್, ಬಸವನಗುಡಿ, ಬೆಂಗಳೂರು

ಹೊಸ ಹೊಸ ಯುವಪ್ರತಿಭೆಗಳನ್ನು ಬೆಳಕಿಗೆ ತರಲು, ಪ್ರೋತ್ಸಾಹ ನೀಡಲು ಪ್ರತಿ ವರ್ಷವೂ ಕ್ರೈಸ್ಟ್ ಕಾಲೇಜ್ ಕನ್ನಡ ಸಂಘ ಅಂತರ ಕಾಲೇಜು ಕವನಸ್ಪರ್ಧೆಯನ್ನು ನಡೆಸುತ್ತಿರುವುದು ನಮಗೆ ಹೆಮ್ಮೆಯ ವಿಷಯ. ಕುವೆಂಪು, ಮಾಸ್ತಿ ಸಮ್ಮುಖದಲ್ಲಿ ಯುವ ಪ್ರತಿಭೆಗಳಿಗೆ ಬಹುಮಾನ ಸಮಾರಂಭಗಳನ್ನು ಇಟ್ಟುಕೊಳ್ಳುವುದೂ ಸಾಗತಾರ್ಹ ಚಟುವಟಿಕೆ. ಅದರಂತೆ ಈ ಬಾರಿ ಬೇಂದ್ರೆಯವರ ೧೩ ‘ಶ್ರೀಮಾತಾ’ದಲ್ಲಿ ಲೇಖನ ಹಾಗೂ ಕವನಸ್ಪರ್ಧೆಯ ವಿಜೇತರಿಗೆ ಬಹುಮಾನ ನೀಡುವ ಕಾರ್ಯಕ್ರಮ.

ಸಾಧನಕೇರಿಯಲ್ಲಿ ಬೇಂದ್ರೆಯವರ ‘ಶ್ರೀಮಾತಾ’ದಲ್ಲಿ ನಮಗೆ ಬಹುಮಾನ ವಿತರಣೆ ಅಂತ ಅಂದಾಗ ಸಾಕಷ್ಟು ಖುಷಿಯಾಯ್ತು. ನಾನು ಮತ್ತು ನನ್ನ ಗೆಳೆಯ ನಾರಾಯಣಸ್ವಾಮಿ ಇಬ್ಬರೂ ‘ಏಯ್ ಏನೇ ಆಗ್ಲಿ ಹೋಗ್ಬೇಕು ಕಣೋ’ ಅಂತ ಮಾತಾಡ್ಕೊಂಡ್ವಿ. ಆಮೇಲೆ ಬೆಂಗಳೂರಿಂದ ಧಾರವಾಡಕ್ಕೆ ಹೋಗಿ ಬರಬೇಕಾದ ಖರ್ಚಿಗೆ ಏನು ಮಾಡೋದು ಅಂತ ಚಿಂತೆ ಮಾಡ್ತಿದ್ದಾಗ ನಾವು ಓದುತ್ತಿದ್ದ ನ್ಯಾಷನಲ್ ಕಾಲೇಜಿನ ಪ್ರಿನ್ಸಿಪಾಲ್ ಒಂದು ಬದಿಯ ಪ್ರಯಾಣ ಭತ್ಯ ನೀಡಿದರು. ಜನವರಿ 31ರಂದು ಬಹುಮಾನ ವಿತರಣೆ ಇದ್ದದ್ದರಿಂದ 30ರಂದೇ ರಾತ್ರಿ ಪ್ರಯಾಣ ಒಳ್ಳೆಯದು ಅಂತ ಹೊರಟೆವು. ಈ ಬಹುಮಾನ ವಿಜೇತರಿಗೆಲ್ಲಾ ಶ್ರೀನಿವಾಸರಾಜು ಅವರೇ ಏಕೆ, ಕನ್ನಡ ಸಂಘದಿಂದ ಪ್ರಯಾಣಭತ್ಯೆ ಕೊಡಬಾರದಿತ್ತು ಅಂತ ಕೂಡ ಬಯ್ದುಕೊಂಡೆವು. ದೂರ ಅನ್ನುವ ಕಾರಣದ ಜೊತೆಗೆ ಸಾಕಷ್ಟು ಬಡಕವಿಗಳು ಕಾರ್ಯಕ್ರಮಕ್ಕೆ ಹಾಜರಿರಲಿಲ್ಲ.

ಪ್ರಯಾಣದ ನಡುವೆ ರಸ್ತೆಯಲ್ಲಿ ಒಂದು ಭಯಂಕರ ಅಪಘಾತ ನೋಡಿದೆವು ಅಪಘಾತಕ್ಕೆ ಒಳಗಾಗಿದ್ದ ವ್ಯಕ್ತಿ ಚಟ್ನಿಯಾಗಿಬಿಟ್ಟಿದ್ದ, ಅದನ್ನು ಇವತ್ತು ಜ್ಞಾಪಿಸಿ

ಕೊಂಡರೂ ಮೈ ಜುಂ ಎನ್ನುತ್ತದೆ. ಅಂತೂ ಬೆಳಿಗ್ಗೆ 6 ಗಂಟೆಗೇ ಸುರಕ್ಷಿತವಾಗಿ ಧಾರವಾಡ ತಲುಪಿದೆವು. ಅಲ್ಲಿ, ಇಲ್ಲಿ ಅಡ್ಡಾಡಿಕೊಂತ ಯಾವುದೋ ಹೋಟಲಲ್ಲಿ ಒಂದಿಷ್ಟು ಕೆಟ್ಟ ಉಪ್ಪಿಟ್ಟು ತಿಂದು ಸುಮಾರು 9–00 ಗಂಟೆಗೆಲ್ಲಾ ಸಾಧನಕೇರಿಗೆ ಹೋದೆವು.

ಬೇಂದ್ರೆ ಮನೆಗೆ ಕಾಲಿರಿಸುತ್ತಿದ್ದಂತೆಯೇ ಡಾ. ವಾಮನಬೇಂದ್ರೆಯವರು ನಗು ಮುಖದಿಂದ ಸ್ವಾಗತಿಸಿದರು. ಆಗಮಿಸಿದ್ದ ಬಹುಮಾನಿತರಿಗೆ ವಾಮನರು ಔಪಚಾರಿಕ ವಾಗಿ ಆಗಾಗಲೇ 'ದಯವಿಟ್ಟು ಅಲ್ಪೋಪಹಾರಕ್ಕೆ ಬನ್ನಿ' ಅಂತ ಆಮಂತ್ರಿಸಿದ್ದರು. ಬೇಂದ್ರೆಯವರ ಮನೆಯನ್ನು ಯಾವುದೋ ಒಂದು ಪುಳಕಿತ ಭಾವದಿಂದ ವೀಕ್ಷಿಸಿದೆವು. ಅವರು ಓದುತ್ತಿದ್ದ ಜಾಗ, ಪುಸ್ತಕಗಳು, ಕೈತೋಟ ಎಲ್ಲವನ್ನೂ ಏನೋ ಒಂದು ಅಮೂಲ್ಯವಾದದ್ದನ್ನು ನೋಡುವ ಹಾಗೆ ನೋಡಿದೆವು. ಬೇಂದ್ರೆಯವರ ಮನೆಯಲ್ಲಿ ಅಲ್ಪೋಪಹಾರವೇನು ಪುಷ್ಕಳವಾದ ಊಟವನ್ನೇ ಮಾಡಿದೆವು. "ಬಾರೋ ಸಾಧನ ಕೇರಿಗೆ ಇಂದು ನಮ್ಮೀ ಊರಿಗೆ..." ಅಂತ ಗುನುಗಿಕೊಂತ ಬೇಂದ್ರೆಯವರ ಮನೆ, ಮನೆ ಮುಂದಣ ಕೆರೆ, ಸುತ್ತಮುತ್ತಿನ ಪರಿಸರ ಎಲ್ಲವನ್ನೂ ಬೇಂದ್ರೆಯವರ ಗುಂಗಿ ನಲ್ಲೇ ನೋಡಿದೆವು.

ನಮಗೆ ಒಂದೇ ಒಂದು ಎದ್ದುಕಂಡ ಕೊರತೆ ಎಂದರೆ ಬೇಂದ್ರೆಯವರನ್ನು ಮುಖತಃ ಮಾತನಾಡಿಸುವ, ಅವರೊಂದಿಗೆ ಒಂದಿಷ್ಟು ಕಾಲವಾದರೂ ಒಡನಾಡುವ ಭಾಗ್ಯ ಸಿಗದೇ ಹೋಯಿತಲ್ಲ ಎನ್ನುವುದು. ಏನಾದರಾಗಲಿ ಬೇಂದ್ರೆಯವರ ನಿವಾಸ ದಲ್ಲಿ, ನಾವು ಒಮ್ಮೆ ಬೇಂದ್ರೆಯವರ ಹುಟ್ಟುಹಬ್ಬದ ನೆನಪಿನಲ್ಲಿ ಕವನ ಓದುವ, ಬೇಂದ್ರೆಯವರನ್ನು ಆ ಮೂಲಕ ಸ್ಮರಿಸುವ ಅವಕಾಶ ಸಿಕ್ಕಿತಲ್ಲಾ ಎಂಬುದೊಂದು ಹೆಮ್ಮೆ. ಇದಕ್ಕಾಗಿ ರಾಜು ಮೇಷ್ಟ್ರಿಗೆ ವಂದನೆಗಳನ್ನು ಅರ್ಪಿಸಬೇಕು.

ಊಟೋಪಚಾರವೆಲ್ಲಾ ಮುಗಿದ ಮೇಲೆ ಮಧ್ಯಾಹ್ನ ಆರಾಮವಾಗಿ ಮನೆಯ ವರಾಂಡದಲ್ಲೇ ಒಂದು ಪುಟ್ಟ ಸಭೆ ಸೇರಿ ಕವಿಗೋಷ್ಠಿಯನ್ನು ಏರ್ಪಡಿಸಲಾಯ್ತು. ಆ ಕವಿಗೋಷ್ಠಿಯಲ್ಲಿ ಹಾಜರಿದ್ದ ಎಲ್ಲ ಕವಿಗಳೂ ತಂತಮ್ಮ ಕವಿತೆಗಳನ್ನು ಓದಿದರು. ಕವಿಗೋಷ್ಠಿ ತುಂಬ ಗಂಬೀರ ಮತ್ತು ರಂಜನೀಯವಾಗಿತ್ತು. ಎಲ್ಲ ಕವಿಗಳೂ ಬಹಳ ಉತ್ಸಾಹದಿಂದ ಇದ್ದರು. ಲವಲವಿಕೆಯಿಂದ ಇದ್ದರು. ಕವಿಗೋಷ್ಠಿ ಮುಗಿದಮೇಲೆ ಕವಿಗಳೆಲ್ಲಾ ಪರಸ್ಪರ ತಂತಮ್ಮ ಕಾವ್ಯಕೋಟಲೆಯ ಬಗ್ಗೆ, ನಾವು ಇಲ್ಲಿ ಸಂಧಿಸಿದ್ದು/ ಮರೆಯಲಾಗದ್ದು ಹಾಗೆ–ಹೀಗೆ ಅದು–ಇದು ಮಾತನಾಡಿಕೊಳ್ಳುತ್ತಾ ಕುಳಿತೆವು. ಆಗ ಹಲವಾರು ಯುವಕವಿಗಳು ನನಗೆ ಸ್ನೇಹಿತರಾದರು. ಕ್ರೈಸ್ಟ್ ಕಾಲೇಜಿನ ಸ್ಪರ್ಧೆಯಲ್ಲಿ ವಿಜೇತರಾದವರೆಲ್ಲರ ಪರಸ್ಪರ ಪರಿಚಯಗಳೂ ನಡೆದಿತ್ತು. ಅಂದು ಸಮಾನವಯಸ್ಕರೂ, ಸಮಾನಮನಸ್ಕರೂ ಆದ ಹಲವು ಸ್ನೇಹಿತರು ದೊರೆತದ್ದು ಆತ್ಮೀಯರಾದದ್ದು ನಿಜಕ್ಕೂ ಸಂತೋಷವನ್ನುಂಟುಮಾಡಿತು. ಶ್ರೀ ಎಂ. ಡಿ. ವಕ್ಕುಂದ ಗೆಳೆಯ ಜಿ. ಜಿ. ಹೆಗಡೆ ಕೊಠಡಿಯಲ್ಲಿ ಆತ್ಮೀಯತೆಯಿಂದ ಒಂದು ದಿವಸ

ಉಳಿಸಿಕೊಂಡಿದ್ದು, ಕಳಪೆ ಕವಿಗಳನ್ನು ಗೇಲಿ ಮಾಡಿದ್ದು ; ರಾತ್ರಿಯೆಲ್ಲಾ ಧಾರವಾಡ ಸುತ್ತಿದ್ದು ; ಆದರದಿಂದ ಕಂಡು ಒಡನಾಡಿದ್ದು ಇಂದಿಗೂ ಕೂಡ ಮರೆಯಲಾಗದ ನೆನಪು.

ಅಂದು ಸಂಜೆ (31 ಜನವರಿ) ಸಾಹಿತ್ಯ ಅಕಾಡೆಮಿಯ 'ಯುವಕಾವ್ಯ'ದ ಯುವಕವಿಗಳಿಗೂ ಕೂಡ ಧಾರವಾಡದಲ್ಲಿ ಬಹುಮಾನ ವಿತರಣೆ ಮತ್ತು ಕವಿಗೋಷ್ಠಿ ಇತ್ತು. ಆ ಕವಿಗೋಷ್ಠಿಗೆ ನಾವೂ ಹಾಜರಾದೆವು. ನಮ್ಮ ವಿದ್ಯಾರ್ಥಿ ಕವನಸಂಕಲದ ಪ್ರತಿಗಳನ್ನು ಡಾ॥ ಜಿ. ಎಸ್. ಶಿವರುದ್ರಪ್ಪ ಅವರಿಂದ ಯುವ ಕವಿಗೋಷ್ಠಿಯಲ್ಲೇ ಸ್ವೀಕರಿಸಿದೆವು. ನಮಗಿಂತಲೂ ಕೆಟ್ಟ ಕವನಗಳನ್ನು ಓದಿದಾಗಲೂ ಸಹಿಸಿಕೊಂಡಿದ್ದೆವು. ಅಕಾಡೆಮಿಯ ಯುವ ಕವಿಗೋಷ್ಠಿಗೆ ಮುಂದಿನ ವರ್ಷವೂ ಬರಬೇಕು ಅಂದು ಕೊಂಡೆವು. ನಮ್ಮ ನಿರೀಕ್ಷೆಯಂತೆ ಅಕಾಡೆಮಿಯು ಯುವಕಾವ್ಯ ಸ್ಪರ್ಧೆಗೆ ಯುವ ಕವಿಗಳಿಂದ ಕವನ ತರಿಸಿಕೊಂಡೂ ವರ್ಷದಂತೆ ಸ್ಪರ್ಧೆ ನಡೆಯದೇ ಹೋದದ್ದು ಅಕಾಡೆಮಿಯವರ ಸೋಮಾರಿತನವೋ, ರಾಜಕೀಯವೋ, ಆಲಸ್ಯವೋ, ಕವಿಗಳ ಕೆಟ್ಟ ಕವನಗಳೋ ಯಾವುದೊ ಇಂದಿಗೂ ನಿಗೂಢ.

ಮಾರನೇ ದಿನ ಧಾರವಾಡವನ್ನೆಲ್ಲಾ ಸುತ್ತಾಡಿಕೊಂಡು ವಿಶ್ವವಿದ್ಯಾಲಯವನ್ನು ನೋಡಿಕೊಂಡು ಅಲ್ಲಿನ ಕನ್ನಡ ಅಧ್ಯಯನ ಪೀಠವನ್ನು ಸಂದರ್ಶಿಸಿ ಅಲ್ಲಿ ಒಂದು ಗಂಟೆ ಎಂ.ಎ. ವಿದ್ಯಾರ್ಥಿಗಳ ಕನ್ನಡ ಪಾಠವನ್ನೂ ಕೇಳಿದೆವು. ಸಂಜೆಯಾಗುವ ಹೊತ್ತಿಗೆ ವಕ್ಕುಂದನ ಗೆಳೆಯನೊಬ್ಬನನ್ನು ಭೇಟಿ ಮಾಡಿ ಹರಟೆ ಹೊಡೆದು, ನಮ್ಮ ನಮ್ಮ ಕವನಗಳ ಬಗ್ಗೆ ಮಾತನಾಡಿಕೊಳ್ಳುತ್ತಾ ಬೆಂಗಳೂರಿಗೆ ವಾಪಸಾಗಲು ಸಿದ್ಧತೆಗೆ ತೊಡಗಿದೆವು.

ರೈಲಿನಲ್ಲಿ ಶ್ರೀನಿವಾಸರಾಜು, ಬಸವರಾಜ ವಕ್ಕುಂದ ಹಾಗೂ ಅಕಾಡೆಮಿಯ ಸಿಬ್ಬಂದಿಯ ಜೊತೆಯಲ್ಲೇ ಬೆಂಗಳೂರಿಗೆ ಬರುವುದೆಂದು ತೀರ್ಮಾನವಾಯ್ತು. ಇನ್ನೊಂದು ಮುಖ್ಯ ವಿಷಯವನ್ನೇ ಹೇಳುವುದನ್ನು ಮರೆತಿದ್ದೆ. ಅದೆಂದರೆ ಶ್ರೀನಿವಾಸರಾಜುರವರು ಧಾರವಾಡಕ್ಕೆ ಬರುವಾಗಲೇ ರೈಲಿನಲ್ಲಿ ಕನ್ನಡ ಸಂಘದ ಪುಸ್ತಕಗಳನ್ನೂ, ತಮ್ಮ ಬಟ್ಟೆಬರೆಗಳನ್ನೂ ಕಳಕೊಂಡಿದ್ದು. ಒಂದು ರೀತಿಯಿಂದ ಅದು ಕಳವೇ ಎನ್ನಬಹುದು. ತಮ್ಮ ಮೈಮೇಲಿದ್ದ ಒಂದು ಜೊತೆ ಬಟ್ಟೆಗಳನ್ನಷ್ಟು ಬಿಟ್ಟು ಮಿಕ್ಕಿದ್ದೆಲ್ಲವೂ ರೈಲಿನಲ್ಲಿ ಕಳವಾಗಲ್ಪಟ್ಟಿತು. ಓಡುತ್ತಿದ್ದ ರೈಲಿನಿಂದಲೇ ಕಳ್ಳ ವಸ್ತುಗಳನ್ನು ಎತ್ತಿಕೊಂಡು ಧುಮುಕಿಬಿಟ್ಟಿದ್ದರಿಂದ ಶ್ರೀನಿವಾಸರಾಜುರವರು ಕಂಡೂಕಂಡೂ ಅವನನ್ನು ಹಿಡಿಯಲು ಸಾಧ್ಯವಾಗದೇ ಹೋದದ್ದು. ಸರಪಳಿ ಎಳೆದು ನಿಲ್ಲಿಸಿದಾಗಲೂ ಆತ ಸಿಕ್ಕದೇ ಹೋದದ್ದು ದುಃಖದ ಸಂಗತಿ. ಶ್ರೀನಿವಾಸರಾಜು ರವರು ಬಟ್ಟೆಬರೆಗಳನ್ನೂ ಕಳಕೊಂಡದ್ದರಿಂದ ಎರಡು ಮೂರು ದಿವಸದ ಮಟ್ಟಿಗೆ ಸಾಕಷ್ಟು ಪಜೀತಿಬಿದ್ದದ್ದೂ ಆಯ್ತು.

ಒಂದೇ ಒಂದು ಬಿಡುಗಡೆಯ ಉಸಿರು ಬಿಡಬಲ್ಲ ವಿಷಯ ಎಂದರೆ ಬಹುಮಾನಿತ ಯುವಕವಿಗಳಿಗೆ ನೀಡಬೇಕಾಗಿದ್ದ ಹೊಸ ಕವನ ಸಂಕಲನಗಳು (ಸುಮಾರು ಅರ್ಧ ಭಾಗ ಮಾತ್ರ ಬೇರೊಂದು ಕಟ್ಟಿನಲ್ಲಿದ್ದರಿಂದ) ಕಳವಾಗದೇ ಉಳಿದದ್ದು. ಇಲ್ಲದಿದ್ದರೆ ಬಹುಮಾನ ಸ್ವೀಕರಿಸಲು ಹಲವಾರು ಕಡೆಗಳಿಂದ ಬೇಂದ್ರೆಯವರ ಮನೆಗೆ ಬಂದವರಿಗೆ ಒಂಚೂರು ನಿರಾಸೆಯಾಗುತ್ತಿತ್ತೋ ಏನೋ. ಅಂತೂ ಪ್ರಯತ್ನವಶಾತ್ ಅಂದು ಎಲ್ಲರಿಗೂ ಬಹುಮಾನ ಹಂಚಲ್ಪಟ್ಟಿತು. ಈ ಕಳುವಾದ ವಿಷಯ ಬಹುಮಾನಿತ ಕವಿಗಳಿಗೆ ಮತ್ತು ಧಾರವಾಡದ ಗೆಳೆಯರಿಗೆ ರಾಜು ಮೇಷ್ಟ್ರು ತಿಳಿಸಿರಲಿಲ್ಲ. ಏನೂ ನಡೆದಿಲ್ಲವೇನೋ ಎಂಬಂತೆ ಇದ್ದುಬಿಟ್ಟರು. ಸುಮ್ಮನೆ ಯಾಕೆ ಕೆಟ್ಟ ವಾತಾವರಣ ಸೃಜಿಸಬೇಕು ಅಂತ. ಆಮೇಲೆ ನಾವು ರಾಜು ಮೇಷ್ಟ್ರು ಜೊತೆಗೆ ಒಡನಾಡುತ್ತಿದ್ದಾಗ ಈ ವಿಚಾರ ನಮಗೆ ತಿಳಿಯಿತು.

ಅಂದು ರಾತ್ರಿ ರೈಲಿನಲ್ಲಿ ವಾಪಸಾಗುತ್ತಿದ್ದಾಗ ಶ್ರೀಮತಿ ಮತ್ತು ಶ್ರೀ ಬಸವರಾಜ ವಕ್ಕುಂದ ಅವರು ತಂದಿದ್ದ ಧಾರವಾಡದ ಜೋಳದ ರೊಟ್ಟಿಗಳನ್ನು ಹಂಚಿಕೊಂಡು ತಿಂದೆವು. ರಾತ್ರಿಯೆಲ್ಲಾ ಅದೂ ಇದೂ ಮಾತನಾಡಿಕೊಳ್ಳುತ್ತಾ ಬೆಂಗಳೂರಿಗೆ ಬಂದೆವು.

ಅಂತೂ ಧಾರವಾಡದ ಬಹುಮಾನ ಸಮಾರಂಭ/ಬೇಂದ್ರೆಯವರ ಮನೆಯಲ್ಲಿನ ಕವಿಗೋಷ್ಠಿ ಒಂದು ಅಪೂರ್ವ ಅನುಭವವಾಯ್ತು. ಅದು ಇಂದಿಗೂ ಸವಿನೆನಪಾಗಿ ಉಳಿದಿದೆ.

ಅನುಬಂಧ - ೫

ಕನ್ನಡ ಸಂಘದ ಕಾರ್ಯಕ್ರಮಗಳಲ್ಲಿ ಭಾಗವಹಿಸಿದವರು

ಡಾ॥ ಮಾಸ್ತಿ ವೆಂಕಟೇಶ ಅಯ್ಯಂಗಾರ್

ಡಾ॥ ಪು. ತಿ, ನರಸಿಂಹಾಚಾರ್

ಡಾ॥ ಜಿ. ಪಿ. ರಾಜರತ್ನಂ

ಪ್ರೊ॥ ಎ. ಎನ್. ಮೂರ್ತಿರಾವ್

ಪ್ರೊ. ಎಂ. ಗೋಪಾಲಕೃಷ್ಣ ಅಡಿಗ

ಡಾ॥ ಬಿ. ಜಿ. ಎಲ್. ಸ್ವಾಮಿ

ಪ್ರೊ॥ ವಿ. ಸೀತಾರಾಮಯ್ಯ

ಪ್ರೊ॥ ಎಂ. ವಿ. ಸೀತಾರಾಮಯ್ಯ

ಡಾ॥ ರಂ. ಶ್ರೀ ಮುಗಳಿ

ಡಾ॥ ವಿ. ಕೃ. ಗೋಕಾಕ್

ಪ್ರೊ॥ ಜಿ. ವೆಂಕಟಸುಬ್ಬಯ್ಯ

ಕುವೆಂಪು

ಶ್ರೀರಂಗ

ಭೀchi

ಪ್ರೊ॥ ಎಸ್. ಕೆ. ರಾಮಚಂದ್ರರಾವ್

ಡಾ॥ ಎಂ. ಚಿದಾನಂದಮೂರ್ತಿ

ಡಾ॥ ಎಂ. ಶಿವರಾಂ (ರಾಶಿ)

ಪ್ರೊ॥ ಎಂ. ಪಿ. ಎಲ್. ಶಾಸ್ತ್ರಿ

ಸು. ರಂ. ಎಕ್ಕುಂಡಿ

ಪ್ರೊ॥ ಕ. ವೆಂ. ರಾಜಗೋಪಾಲ

ಪ್ರೊ॥ ಬಿ. ಚಂದ್ರಶೇಖರ್ (ಬಿ.ಸಿ.)

ಡಾ॥ ಜಿ. ಎಸ್. ಶಿವರುದ್ರಪ್ಪ

ಪ್ರೊ॥ ಜಿ. ಎಸ್. ಸಿದ್ಧಲಿಂಗಯ್ಯ

ಶಾರದಾ ಆಧ್ಯ

ಪ್ರೊ॥ ಕೆ. ಎಸ್. ನಿಸಾರ್‌ಅಹಮದ್
ಡಾ॥ ಬಿ. ಸಿ. ರಾಮಚಂದ್ರಶರ್ಮ
ಡಾ॥ ಕೆ. ಎಸ್. ನರಸಿಂಹಸ್ವಾಮಿ
ಪ್ರೊ॥ ಎಲ್. ಎಸ್. ಶೇಷಗಿರಿರಾವ್
ಪ್ರೊ॥ ಜಿ. ಎಸ್. ಆಮೂರ್
ಡಾ॥ ಎಚ್. ನರಸಿಂಹಯ್ಯ
ಜಿ. ಬಿ. ಜೋಷಿ (ಜಡಭರತ)
ಪರ್ವತವಾಣಿ
ಡಾ॥ ಗೋರೂರು ರಾಮಸ್ವಾಮಿ ಅಯ್ಯಂಗಾರ್
ಡಾ॥ ವಾಮನ ಬೇಂದ್ರೆ
ಡಾ॥ ಪ್ರಭುಶಂಕರ
ರೆ॥ ಫಾ॥ ಮೆನಿಜಿಸ್
ಡಾ॥ ಕೆ. ವಿ. ನಾರಾಯಣ
ಡಾ॥ ಕೆ. ವಿ. ತಿರುಮಲೇಶ್
ಡಾ॥ ಬಸವರಾಜ ಕಲ್ಗುಡಿ
ಡಾ॥ ಎಚ್. ಎಸ್. ವೆಂಕಟೇಶಮೂರ್ತಿ
ಡಾ॥ ವಿಜಯಾ ದಬ್ಬೆ
ಇಳಾ ಡಾ॥ ವಿಜಯಾ
ಪ್ರೊ॥ ಎಂ. ಎಸ್. ವೆಂಕಟರಾವ್
ಕಿ. ರಂ. ನಾಗರಾಜ
ಪ್ರೊ॥ ಅ. ರಾ. ಮಿತ್ರಾ
ರೆ॥ ಫಾ॥ ಆರೋಗ್ಯಸ್ವಾಮಿ
ಪ್ರೊ॥ ಎಲ್. ಗುಂಡಪ್ಪ
ಪ್ರೊ॥ ನಾ. ಕಸ್ತೂರಿ
ಡಾ॥ ಶಂಕರ ಮೊಕಾಶಿ ಪುಣೇಕರ್
ಡಾ॥ ರಾಜೇಂದ್ರ ಚೆನ್ನಿ
ನಿಟ್ಟೂರು ಶ್ರೀನಿವಾಸರಾವ್
ಎಂ. ಎಸ್. ಕೆ. ಪ್ರಭು
ಸಿ. ಆರ್. ಸಿಂಹ

ಅನುಬಂಧ - ೬

ಡಾ|| ಅ.ನ.ಕೃ. ಲೇಖನ ಸ್ಪರ್ಧೆಗೆ ಕೊಟ್ಟ ವಿಷಯಗಳು

1974 ಸಮಕಾಲೀನ ಭಾರತೀಯ ಸಮಾಜಕ್ಕೆ ಬೇಕಾದ ಸಾಹಿತ್ಯ
ಅ.ನ.ಕೃ. 'ಸಂಧ್ಯಾರಾಗ' - ಒಂದು ಪ್ರಾಯೋಗಿಕ ವಿಮರ್ಶೆ
ಬೇಂದ್ರೆಯವರ 'ಕುರುಡು ಕಾಂಚಾಣ' - ಒಂದು ಪ್ರಾಯೋಗಿಕ ವಿಮರ್ಶೆ

1975 ಗೋಪಾಲಕೃಷ್ಣ ಅಡಿಗರ ಕವನಗಳಲ್ಲಿ ಸಾಮಾಜಿಕ ಪ್ರಜ್ಞೆ
ವಿಜ್ಞಾನ ಮತ್ತು ಸಾಮಾಜಿಕ ಬದಲಾವಣೆ
ಪ್ರಸ್ತುತ ಭಾರತದ ಆರ್ಥಿಕ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಇಂದಿನ ಶಿಕ್ಷಣ

1976 ಲಂಕೇಶ್ ಅವರ 'ಸಂಕ್ರಾಂತಿ' - ಒಂದು ಪ್ರಾಯೋಗಿಕ ವಿಮರ್ಶೆ
ಭಾರತದ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸುವುದು ಹೇಗೆ
ಅನುಪಮಾ ನಿರಂಜನ ಅಥವಾ ವೀಣಾ ಎಲಬುರ್ಗಿ ಅವರ ಕಥಾಸಂಕಲನ ಸಮೀಕ್ಷೆ

1977 ಎಸ್. ಎಲ್. ಭೈರಪ್ಪನವರ 'ದಾಟು' ಅಥವಾ ಶರತ್‌ಚಂದ್ರರ 'ಅಧಿಕಾರ - ಒಂದು ಪ್ರಾಯೋಗಿಕ ವಿಮರ್ಶೆ
ಸಮಕಾಲೀನ ಯುವಜನರ ಸಮಸ್ಯೆಗಳು
ಸಂವಿಧಾನ – ಲೋಕಸಭೆ – ಪ್ರಜಾಪ್ರಭುತ್ವ

1978 'ಉಳ್ಳವರು ಶಿವಾಲಯವ ಮಾಡುವರು' - ವಚನದ ಒಂದು ಪ್ರಾಯೋಗಿಕ ವಿಮರ್ಶೆ
ನರಸಿಂಹಸ್ವಾಮಿಯವರ 'ತೆರದ ಬಾಗಿಲು' ಕವನ ಸಂಕಲನದ ಸಮಗ್ರವಿಮರ್ಶೆ
'ಮದುವೆ' - ಒಂದು ಮನಃಶಾಸ್ತ್ರೀಯ ಅಧ್ಯಯನ
'ಜನತಾ ಪಕ್ಷದ ವಿಜಯ' - ಒಂದು ವಿಶ್ಲೇಷಣೆ

1879 ಶಿವರಾಮ ಕಾರಂತರ 'ಮೂಕಜ್ಜಿಯ ಕನಸುಗಳು' ಒಂದು ಪ್ರಾಯೋಗಿಕ ವಿಮರ್ಶೆ
ಹಾವನೂರ್ ವರದಿ - ಒಂದು ಪ್ರತಿಕ್ರಿಯೆ
ಸಾಹಿತ್ಯ ಮತ್ತು ಮನಃಶಾಸ್ತ್ರ
'ಗಡಿಯಾರಗಳು' - ಒಂದು ಲಲಿತ ಪ್ರಬಂಧ

1980 'ಶ್ರೀನಿವಾಸ'ರ ಶೇಷಮ್ಮ ಕಾದಂಬರಿ ಅಥವಾ ಡಾ॥ ಬಿ.ಜಿ.ಎಲ್. ಸ್ವಾಮಿ
ಯವರ 'ಹಸಿರುಹೊನ್ನು' - ಒಂದು ಪ್ರಾಯೋಗಿಕ ವಿಮರ್ಶೆ
ಗಿರೀಶ್ ಕಾರ್ನಾಡರ ನಾಟಕಗಳು - ಒಂದು ಅಧ್ಯಯನ
ಶಿಕ್ಷಣದಲ್ಲಿ ಭಾಷೆಗಳ ಸ್ಥಾನ
ಜಿ. ಪಿ. ರಾಜರತ್ನಂ ಅವರ ಶಿಶುಸಾಹಿತ್ಯ

1981 ಕುವೆಂಪು ಕಾದಂಬರಿಗಳು - ಒಂದು ಪ್ರಾಯೋಗಿಕ ವಿಮರ್ಶೆ
'ಅಸ್ಸಾಂ ಚಳವಳಿ' ಅಥವಾ 'ಕರ್ನಾಟಕದಲ್ಲಿ ರೈತಬಂಡಾಯ 1980'
ಒಂದು ವಿಶ್ಲೇಷಣೆ
ಭಾರತೀಯ ಮಹಿಳೆ - ಐತಿಹಾಸಿಕ ಸಮೀಕ್ಷೆ
ಡಿ.ವಿ.ಜಿ.ಯವರ 'ಮಂಕುತಿಮ್ಮನ ಕಗ್ಗ' ಅಥವಾ ಸಿದ್ಧಯ್ಯ ಪುರಾಣಿಕರ
'ವಚನೋದ್ಯಾನ' - ಒಂದು ಪ್ರಾಯೋಗಿಕ ವಿಮರ್ಶೆ

1982 ಮತಾಂತರ - ಒಂದು ವಿಶ್ಲೇಷಣೆ
ಕೈಲಾಸಂ ಅವರ 'ಟೊಳ್ಳುಗಟ್ಟಿ' - ಒಂದು ಪ್ರಾಯೋಗಿಕ ವಿಮರ್ಶೆ
ನಮ್ಮ ಶಾಲಾ ಕಾಲೇಜುಗಳಲ್ಲಿ ವಿಜ್ಞಾನ ಶಿಕ್ಷಣದ ಸ್ವರೂಪ - ಒಂದು
ಸಮೀಕ್ಷೆ
'ಕರ್ನಾಟಕ ಏಕೀಕರಣ' ಸಫಲವೆ ? ವಿಫಲವೆ ?

1983 ಚದುರಂಗರ 'ವೈಶಾಖ' ಅಥವಾ ತೇಜಸ್ವಿಯವರ 'ಕರ್ವಾಲೋ' -
ಒಂದು ಪ್ರಾಯೋಗಿಕ ವಿಮರ್ಶೆ
ಡಾರ್ವಿನ್ ವಿಕಾಸವಾದದ ಹಿನ್ನೆಲೆಯಲ್ಲಿ ವೈಚಾರಿಕ ಪ್ರಜ್ಞೆಯ ಬೆಳವಣಿಗೆ
ಹರಿಜನ ಸಮಸ್ಯೆಗಳು, ಪರಿಹಾರಗಳು - ಒಂದು ಅಧ್ಯಯನ
ಕನ್ನಡ ಸಂಘಗಳು ಮತ್ತು ಸಾಹಿತ್ಯ ಪ್ರಚಾರ - ಒಂದು ಪರಿಶೀಲನೆ

1984 ಗೋಕಾಕ್ ವರದಿ - ಒಂದು ವಿಶ್ಲೇಷಣೆ
ಪ್ರಾಂತೀಯವಾದ - ಪ್ರಯೋಜನಗಳು ? ಅಪಾಯಗಳು ?
ತ.ರಾ.ಸು. ಅವರ 'ದುರ್ಗಾಸ್ತಮಾನ' ಅಥವಾ ಶ್ರೀಕೃಷ್ಣ ಆಲನಹಳ್ಳಿ
ಯವರ 'ಭುಜಂಗಯ್ಯನ ದಶಾವತಾರಗಳು' - ಒಂದು ಪ್ರಾಯೋಗಿಕ
ವಿಮರ್ಶೆ
ಬಿ.ಎಂ.ಶ್ರೀಯವರ 'ಇಂಗ್ಲಿಷ್ ಗೀತೆಗಳು' ಅಥವಾ 'ಅಶ್ವತ್ಥಾಮನ್'
- ಒಂದು ಪರಿಶೀಲನೆ

1985 ಜಾತ್ಯಾತೀತ ರಾಷ್ಟ್ರದಲ್ಲಿ ಧರ್ಮದ ಸ್ಥಾನಮಾನ
'ಚಿಕವೀರ ರಾಜೇಂದ್ರ' - ಒಂದು ಪ್ರಾಯೋಗಿಕ ವಿಮರ್ಶೆ
ಟಿ. ಪಿ. ಕೈಲಾಸಂ ನಾಟಕಗಳ ವೈಶಿಷ್ಟ್ಯ
ವಿಶ್ವಕನ್ನಡ ಸಮ್ಮೇಳನ ಬೇಕೆ ? ಬೇಡವೆ ?

1986 ನಮಗೆ ಕಾವ್ಯ ಏಕೆ ಬೇಕು ?
ಸಾರ್ವಜನಿಕ ಜೀವನ ಮತ್ತು ಹಿಂಸಾ ಪ್ರವೃತ್ತಿ
ದೇವನೂರು ಮಹಾದೇವ ಅವರ ಕೃತಿಗಳು - ಒಂದು ಸಮೀಕ್ಷೆ
ಶ್ರೀರಂಗರ ಯಾವುದಾದರೊಂದು ನಾಟಕದ ಪ್ರಾಯೋಗಿಕ ವಿಮರ್ಶೆ

1987 ಪು.ತಿ.ನ. 'ಅಹಲ್ಯೆ' - ಒಂದು ಪ್ರಾಯೋಗಿಕ ವಿಮರ್ಶೆ
ನೂತನ ಶಿಕ್ಷಣ ನೀತಿ - ಸಾಧಕ ಬಾಧಕಗಳು
ಕೇಂದ್ರ-ರಾಜ್ಯ ಸಂಬಂಧಗಳು

1988 ಶ್ರೀರಂಗರ 'ಶೋಕಚಕ್ರ' ಅಥವಾ ನರಸಿಂಹಸ್ವಾಮಿಯವರ 'ಮೈಸೂರು ಮಲ್ಲಿಗೆ' - ಒಂದು ಪ್ರಾಯೋಗಿಕ ವಿಮರ್ಶೆ
ಸಾಹಿತ್ಯವನ್ನು ಜನಸಾಮಾನ್ಯರಿಗೆ ತಲುಪಿಸುವುದು ಹೇಗೆ ?
ಸಾರ್ವಜನಿಕ ಜೀವನ ಮತ್ತು ನೀತಿಭ್ರಷ್ಟತೆ
'ಭೂಮಿ' ಒಂದು ಪರಿಚಯ
'ಪರಮಾಣು' ಅಥವಾ 'ಹೂವುಗಳು' - ಒಂದು ವೈಜ್ಞಾನಿಕ ಲೇಖನ

1989 ತೇಜಸ್ವಿಯವರ 'ಚಿದಂಬರ ರಹಸ್ಯ' ಅಥವಾ ದೇವನೂರು ಮಹಾದೇವ ಅವರ 'ಕುಸುಮಬಾಲೆ' ಅಥವಾ ಪು.ತಿ.ನ. ಅವರ 'ಶ್ರೀಹರಿಚರಿತೆ' - ಒಂದು ಪ್ರಾಯೋಗಿಕ ವಿಮರ್ಶೆ
ಸೌಂದರ್ಯ ಎಂದರೇನು ? - ನನ್ನ ಕಲ್ಪನೆಯಲ್ಲಿ
ಕರ್ನಾಟಕದಲ್ಲಿ ಜನತಾ ಪಕ್ಷ - ಒಂದು ಮೌಲ್ಯಮಾಪನ
ಡಾ|| ರಾಜ್‌ಕುಮಾರ್ ಮತ್ತು ಕನ್ನಡ ಚಿತ್ರರಂಗದ ಬೆಳವಣಿಗೆ

1990 ಭಾರತೀಯತೆ ಅರ್ಥ
ಮಾಸ್ತಿಯವರ ಒಂದು ಕಥೆ ಅಥವಾ ಚಂದ್ರಶೇಖರ ಕಂಬಾರರ ಒಂದು ಕವನ - ಪ್ರಾಯೋಗಿಕ ವಿಮರ್ಶೆ
ಕನ್ನಡದಲ್ಲಿ ದಲಿತ ಸಾಹಿತ್ಯ - ಒಂದು ಪರಿಶೀಲನೆ
ಬಾಲ್ಯದ ನೆನಪುಗಳು - ಲಲಿತ ಪ್ರಬಂಧ

1991 ಕನ್ನಡದಲ್ಲಿ ಏಕಲವ್ಯನನ್ನು ಕುರಿತ ನಾಟಕಗಳು - ಒಂದು ತೌಲನಿಕ ವಿಮರ್ಶೆ
ಲಂಕೇಶರ 'ಕಲ್ಲು ಕರಗುವ ಸಮಯ ಮತ್ತು ಇತರ ಕಥೆಗಳು' - ಒಂದು ಪರಿಶೀಲನೆ
ಕಾಲೇಜು 'ಕನ್ನಡ ಸಂಘ'ಗಳ ಕರ್ತವ್ಯಗಳು
ಫುಟ್‌ಬಾಲ್ - ಒಂದು ಲಲಿತ ಪ್ರಬಂಧ

ಅನುಬಂಧ – ೭

ಡಾ|| ಅ.ನ.ಕೃ. ಸ್ಮಾರಕ ಲೇಖನ ಸ್ಪರ್ಧೆ ತೀರ್ಪುಗಾರರಾಗಿ ಸಹಕರಿಸಿದವರು

1973–74	ಡಾ|| ಕೆ. ವಿ. ನಾರಾಯಣ ಬರಗೂರು ರಾಮಚಂದ್ರಪ್ಪ
1974–75	ಎಸ್. ಬಿ. ಚಂದ್ರಮೋಹನ್ ಆರ್. ಸಿ. ಕುಲಕರ್ಣಿ
1975–76	ಕ. ನಂ. ನಾಗರಾಜು ವಸಂತಕುಮಾರಿ
1976–77	ಡಾ|| ಎನ್. ವಿ. ವಿಮಲ ಕೆ. ಆರ್. ಗಣೇಶ್
1977–78	ಎಚ್. ಎಸ್. ರಾಘವೇಂದ್ರರಾವ್ ಎಚ್. ಸತ್ಯನಾರಾಯಣ
1978–79	ಡಾ|| ಕೆ. ಎಲ್. ಗೋಪಾಲಕೃಷ್ಣಯ್ಯ ಡಾ|| ಎಚ್. ಎಸ್. ವೆಂಕಟೇಶಮೂರ್ತಿ
1979–80	ಬಿ. ಎಸ್. ರಾಮಪ್ರಸಾದ್ ಎಚ್. ಎಸ್. ಮಾಧವರಾವ್
1980–81	ಡಾ|| ಬಸವರಾಜ ಕಲ್ಗುಡಿ ಪ್ರೊ|| ಎಂ. ವಿ. ಸತ್ಯನಾರಾಯಣ
1981–82	ನರಹಳ್ಳಿ ಬಾಲಸುಬ್ರಮಣ್ಯ ಡಾ|| ವಿಜಯಾ ಸುಬ್ಬರಾಜ್

1982–83	ಡಾ॥ ಬಿ. ಎಸ್. ಸುಬ್ಬರಾವ್ ಬಿ. ಎಸ್. ರಾಮಪ್ರಸಾದ್
1983–84	ಪ್ರೊ॥ ಎಂ. ಎಚ್. ಕೃಷ್ಣಯ್ಯ ಕೆ. ಸತ್ಯನಾರಾಯಣ
1984–85	ಡಾ॥ ಹನೂರು ಕೃಷ್ಣಮೂರ್ತಿ ಶ್ರೀ ಟಿ. ಎಸ್. ರಘುನಾಥ್
1985–86	ಚಂದ್ರಶೇಖರ ನಂಗಲಿ ಎಚ್. ದಂಡಪ್ಪ
1986–87	ನೀಲತ್ತಳ್ಳಿ ಕಸ್ತೂರಿ ಎಚ್. ಎನ್. ಮುರಳೀಧರ್
1987–88	ಸಿ. ವಿ. ವತ್ಸಲಾದೇವಿ ಎಚ್. ಆರ್. ಕೃಷ್ಣಮೂರ್ತಿ
1988–89	ಕೆ. ಎಮ್. ಕೋದಂಡರಾಮ್ 'ಶೂದ್ರ' ಎಂ. ಶ್ರೀನಿವಾಸ್
1989–90	ವೇಣುಗೋಪಾಲ ಸೊರಬ ಎಂ. ಎಸ್. ಶ್ರೀರಾಮ್
1990–91	ಮಲ್ಲೇಪುರಂ ಜಿ. ವೆಂಕಟೇಶ್ ಎಸ್. ಪ್ರಭಾವತಿ

ಅನುಬಂಧ – ೮

ಡಾ|| ದ. ರಾ. ಬೇಂದ್ರೆ ಸ್ಮೃತಿ ಕವನ ಸ್ಪರ್ಧೆ ತೀರ್ಪುಗಾರರಾಗಿ ಸಹಕರಿಸಿದವರು

1982–83	ಡಾ|| ಎಚ್. ಎಸ್. ವೆಂಕಟೇಶಮೂರ್ತಿ ಎಚ್. ಎಸ್. ರಾಘವೇಂದ್ರರಾವ್
1983–84	ಡಾ|| ಕೆ. ವಿ. ನಾರಾಯಣ ಎಚ್. ಎಸ್. ಶಿವಪ್ರಕಾಶ್
1984–85	ಕಿ. ರಂ. ನಾಗರಾಜ ಡಾ|| ಸುಮತೀಂದ್ರ ನಾಡಿಗ
1985–86	ಡಾ|| ಬಿ. ಸಿ. ರಾಮಚಂದ್ರಶರ್ಮ ಎಸ್. ಜಿ. ಸಿದ್ಧರಾಮಯ್ಯ
1986–87	ಪ್ರೊ|| ಕ. ವೆಂ. ರಾಜಗೋಪಾಲ ಚಿಂತಾಮಣಿ ಕೊಡ್ಲೆಕೆರೆ
1987–88	ಪ್ರೊ|| ಜಿ. ಎಸ್. ಸಿದ್ಧಲಿಂಗಯ್ಯ ಮಾಲತಿ ಪಟ್ಟಣಶೆಟ್ಟಿ
1988–89	ಎಂ. ಎನ್. ವ್ಯಾಸರಾವ್ ಪ್ರತಿಭಾ ನಂದಕುಮಾರ್
1989–90	ಡಾ|| ಸಂಧ್ಯಾರೆಡ್ಡಿ ನಲ್ಲೂರ ಪ್ರಸಾದ್
1990–91	ಎಂ. ಆರ್. ಕಮಲ ನಟರಾಜ್ ಹುಳಿಯಾರ್

ಅನುಬಂಧ-೯

ಸ್ಪರ್ಧೆಗಳಿಗೆ ಬಂದ ಲೇಖನಗಳು ಮತ್ತು ಕವನಗಳು

ಡಾ॥ ಅ. ನ. ಕೃ. ಸ್ಮಾರಕ
ಅಂತರ ಕಾಲೇಜು
ಕವನ ಸ್ಪರ್ಧೆ

ವರ್ಷ	ಲೇಖನಗಳ ಸಂಖ್ಯೆ
1973–74	37
1974–75	35
1975–76	40
1976–77	35
1977–78	52
1978–79	52
1979–80	27
1980–81	26
1981–82	38
1982–83	68
1983–84	53
1984–85	74
1985–86	80
1986–87	61
1987–88	97
1988–89	54
1989–90	30
1990–91	34

ಡಾ॥ ದ. ರಾ. ಬೇಂದ್ರೆ ಸ್ಮೃತಿ
ಅಂತರ ಕಾಲೇಜು
ಕವನ ಸ್ಪರ್ಧೆ

ವರ್ಷ	ಲೇಖನಗಳ ಸಂಖ್ಯೆ
1982–83	169
1983–84	214
1984–85	215
1985–86	300
1986–87	216
1987–88	261
1988–89	252
1989–90	156
1990–91	229

ಅನುಬಂಧ–೧೦

ಕನ್ನಡ ವಿಭಾಗದಲ್ಲಿ ಹಿಂದೆ ಅಧ್ಯಾಪಕರಾಗಿದ್ದವರು

ಎಚ್. ಸತ್ಯನಾರಾಯಣ
ಡಾ॥ ಪಿ. ವಿ. ಕುಲಕರ್ಣಿ
ಡಿ. ವಿ. ರಾಜಶೇಖರ್

ಎಚ್. ಎಸ್. ಮಾಧವರಾವ್
ಡಾ॥ ಹ. ನಂ. ವಿಜಯಕುಮಾರ್
ಟಿ. ಎಸ್. ರಘುನಾಥ್
ಎಂ. ನಾಗರಾಜಯ್ಯ
ಎಚ್. ಪುಂಡಲೀಕ
ಎಚ್. ಎನ್. ಮುರಳೀಧರ
ಎ. ಜಿ. ವಿಜಯರಾಘವನ್

ಈಗ ಕನ್ನಡ ವಿಭಾಗದಲ್ಲಿ

ಚಿ. ಶ್ರೀನಿವಾಸರಾಜು
ಬಸವರಾಜ ವಕ್ಕುಂದ
ಕೆ. ಸಿ. ಶಿವಾರೆಡ್ಡಿ

*   *   *   *

ಕನ್ನಡ ಸಂಘ ಪ್ರಕಟಿಸಿದ ಪುಸ್ತಕಗಳಿಗೆ ಬಂದ ಬಹುಮಾನಗಳು

ಕರ್ನಾಟಕ ಸಾಹಿತ್ಯ ಅಕಾಡೆಮಿ ಬಹುಮಾನ

1981 ವಿಶ್ಲೇಷಣೆ (ವಿಮರ್ಶೆ) – ಎಚ್. ಎಸ್. ರಾಘವೇಂದ್ರರಾವ್
1983 ಮಳೆ ಬಿದ್ದ ನೆಲದಲ್ಲಿ (ಕವನಗಳು) – ಎಚ್. ಎಸ್. ಶಿವಪ್ರಕಾಶ್
1988 ನಮ್ಮ ಪ್ರೀತಿಯ ಕ್ರಿಕೆಟ್ (ಲಲಿತ ಪ್ರಬಂಧಗಳು) ಕೆ. ಸತ್ಯನಾರಾಯಣ
ಪ್ರೊ॥ ವಿ. ಎಂ. ಇನಾಂದರ್ ಪ್ರಶಸ್ತಿ
1989 ನಿಲುವು (ವಿಮರ್ಶೆ) – ಎಚ್. ಎಸ್. ರಾಘವೇಂದ್ರರಾವ್

*   *   *

ಕ್ರೈಸ್ಟ್ ಕಾಲೇಜು ಪ್ರಾರಂಭವಾದ ದಿನಾಂಕ : 15 ಜುಲೈ 1969
ಕನ್ನಡ ಸಂಘ ಪ್ರಾರಂಭವಾದ ದಿನಾಂಕ ; 12 ಡಿಸೆಂಬರ್ 1973

ಅನುಬಂಧ – ೧೧

'ಕನ್ನಡ ಸಂಘ'ದ ಪದಾಧಿಕಾರಿಗಳು

(1990–91)

ಅಧ್ಯಕ್ಷರು	ರೆ. ಫಾ. ಡಾ|| ಅಂತೋಣಿ ಕರಿಯಲ್ ಪ್ರಾಂಶುಪಾಲರು
ಉಪಾಧ್ಯಕ್ಷರು	ಪ್ರೊ|| ಎಚ್. ಆರ್. ರಾಮಕೃಷ್ಣರಾವ್ ಭೌತಶಾಸ್ತ್ರ ವಿಭಾಗ
	ಪ್ರೊ|| ಎಚ್. ಡಿ. ಎಸ್. ಕೆ. ಶಾಸ್ತ್ರಿ ಗಣಿತಶಾಸ್ತ್ರ ವಿಭಾಗ
	ಶ್ರೀ ಬಿ. ಎಸ್. ನಂಜುಂಡಯ್ಯ ಇತಿಹಾಸ ವಿಭಾಗ
	ಶ್ರೀ ಎನ್. ಸೂರ್ಯನಾರಾಯಣ ವಾಣಿಜ್ಯ ವಿಭಾಗ
ಸಂಚಾಲಕರು	ಶ್ರೀ ಚಿ. ಶ್ರೀನಿವಾಸರಾಜು ಕನ್ನಡ ವಿಭಾಗ
	ಶ್ರೀ ಬಸವರಾಜ ವಕ್ಕುಂದ ಕನ್ನಡ ವಿಭಾಗ
	ಶ್ರೀ ಕೆ. ಸಿ. ಶಿವಾರೆಡ್ಡಿ ಕನ್ನಡ ವಿಭಾಗ
	ಶ್ರೀ ಬೇಬಿ ಮ್ಯಾಥ್ಯೂ ವಿದ್ಯಾರ್ಥಿ ಕ್ಷೇಮಾಧಿಕಾರಿ
ಸದಸ್ಯರು	ಶ್ರೀ ಎಂ. ಸಿ. ಜಾನಕಿರಾಮ್ ಮೊದಲನೆಯ ಪಿ.ಯು.ಸಿ.
	ಶ್ರೀ ಕೆ. ಎಸ್, ಪ್ರದೀಪ್ ಮೊದಲನೆಯ ಪಿ.ಯು.ಸಿ.

ಕು. ಆರೋಗ್ಯ ಮೇರಿ
ಮೊವಲನೆಯ ಪಿ.ಯು.ಸಿ.

ಕು. ಎನ್. ಕವಿತಾ
ಮೊದಲನೆಯ ಪಿ.ಯು.ಸಿ.

ಶ್ರೀ ಜಯಪ್ರಕಾಶ್ ಡಿ. ಕನ್ನೂರ್
ಎರಡನೆಯ ಪಿ.ಯು.ಸಿ.

ಶ್ರೀ ಎಂ. ನಾಗರಾಜ್
ಎರಡನೆಯ ಪಿ.ಯು.ಸಿ.

ಶ್ರೀ ಎನ್. ಜಿ. ಪ್ರಕಾಶ್‌ಕುಮಾರ್
ಮೊದಲನೆಯ ಪದವಿ

ಶ್ರೀ ಸಿ. ಎ. ಜೋಸೆಫ್
ಮೊದಲನೆಯ ಪದವಿ

ಶ್ರೀ ಬಿ. ಎನ್. ಸತೀಶ
ಮೊದಲನೆಯ ಪದವಿ

ಶ್ರೀ ಕೃಷ್ಣಯ್ಯ
ಮೊದಲನೆಯ ಪದವಿ

ಶ್ರೀ ಕೆ. ಶ್ರೀಧರ್
ಎರಡನೆಯ ಪದವಿ

ಶ್ರೀ ಗುರುಮೂರ್ತಿ
ಎರಡನೆಯ ಪದವಿ

ಶ್ರೀ ವಿ. ವಿ. ಜೋಸೆಫ್
ಎರಡನೆಯ ಪದವಿ

ಶ್ರೀ ಎನ್. ಈಶ್ವರಪ್ಪ
ಅಂತಿಮ ಪದವಿ

ಶ್ರೀ ಎಸ್. ಚಂದ್ರಶೇಖರ್
ಅಂತಿಮ ಪದವಿ

ಶ್ರೀವಿ. ಪ್ರಸನ್ನಕುಮಾರ್
ಅಂತಿಮ ಪದವಿ

ಅನುಬಂಧ – ೧೨

ಸಿ.ಎಂ.ಐ.ನ ಕ್ರೈಸ್ಟ್ ಕಾಲೇಜು ಆಡಳಿತವರ್ಗದ ಅಧ್ಯಕ್ಷರುಗಳು

೧. ಡಾ. ರೆ. ಫಾ. ಥಿಯೋಪಿನ್
೨. ಡಾ. ರೆ. ಫಾ. ಜಾನ್ ಬಿ. ಚೆಟ್ಟಿಮಟ್ಟಮ್
೩. ಡಾ. ರೆ. ಫಾ. ಮಥಾಯಸ್ ಮುಂಡಾಡನ್
೪. ಡಾ. ರೆ. ಫಾ. ಯುಸ್ಟೆಸ್ ಥೊಟ್ಟನ್
೫. ಡಾ. ರೆ. ಫಾ. ಜಸ್ಟಿನ್ ಕೊಯಿಪುರವ್
೬. ಡಾ. ರೆ. ಫಾ. ಥಾಮಸ್ ಮಾಂಪ್ರ
೭. ಪ್ರೊ. ರೆ. ಫಾ. ಮಾಣಿ ಜೈಲ್ಸ್

ಕಾಲೇಜ್ ವಿದ್ಯಾರ್ಥಿ ಸಂಘದ ಪದಾಧಿಕಾರಿಗಳು

(1990–91)

ವಿದ್ಯಾರ್ಥಿಗಳ ಕ್ಷೇಮಾಧಿಕಾರಿ	ಶ್ರೀ ಬೇಬಿ ಮ್ಯಾಥ್ಯೂ ರಸಾಯನಶಾಸ್ತ್ರ ವಿಭಾಗ
ಅಧ್ಯಕ್ಷ	ಶ್ರೀ ಡೀನ್ ಐಸಾಕ್ ಜಾರ್ಜ್
ಉಪಾಧ್ಯಕ್ಷ	ಶ್ರೀ ಜೋಸ್ ಎಂ. ಪ್ರಾನ್ಸಿಸ್
ಜಂಟಿ ಉಪಾಧ್ಯಕ್ಷೆ	ಶ್ರೀ ಬಾಬು ಥಾಮಸ್
ಕಾರ್ಯದರ್ಶಿ	ಶ್ರೀ ಡೇನಿಯಲ್ ಕೆ. ಥಾಮಸ್
ಸಹ ಕಾರ್ಯದರ್ಶಿ	ಶ್ರೀ ಡಿ. ವಿ. ರಾಜನ್
ಖಜಾಂಚಿ	ಶ್ರೀ ಶರವಣ ಕುಮಾರ್
ಮಹಿಳಾ ಪ್ರತಿನಿಧಿ	ಕು॥ ಶೈನಿ ಚೆರಿಯನ್
ಸಾಂಸ್ಕೃತಿಕ ಕಾರ್ಯದರ್ಶಿ	ಶ್ರೀ ರಿಶಿ ಬ್ರೂನೊ

ಅನುಬಂಧ – ೧೩

ಕ್ರೈಸ್ಟ್ ಕಾಲೇಜು ವಿದ್ಯಾರ್ಥಿ ಸಂಘದ ಅಧ್ಯಕ್ಷರುಗಳು

1969–70	ಶಾಂತಿ ರಿಕಾಸು
1970–71	ಎ. ಎಮ್. ವಿ. ಲೋಭೊ
1971–72	ಕೆ. ವಿ. ಆಂಡ್ರೂಸ್
1972–73	ಶೆರ್ರಿ ಲ್ಯೂಕೋಸ್
197 –74	ಎಸ್. ವಿ. ಭಾಸ್ಕರರೆಡ್ಡಿ
1974–7	ರಮೇಶ್‌ರೆಡ್ಡಿ
1975–76	
1976–77	ಚುನಾವಣೆ ನಡೆಯಲಿಲ್ಲ
1977–78	ಡೇವಿಡ್ ಬ್ರೇವ್
1978–79	ಫೆಲಿಕ್ಸ್ ಆನಂದ್ ಅಬ್ರಹಾಂ
1979–80	ಎಂ. ಜೆ. ಗ್ರೇಸಿಯಸ್
1980–81	ಎ. ಕೆ. ರತನ್‌ಕುಮಾರ್
1981–82	ಜೇಕಬ್ ಜಾರ್ಜ್
198 –83	ಅಪ್ಪಯ್ಯ
1983–84	ಸಂತೋಷ್ ಕೋಷಿ
1984–85	ಬಿ. ಎಲ್. ಅಮರನಾಥ್
1985–86	ಬಿ. ಯು. ಪೂಣಚ್ಚ
1986–87	ಅಜಯ್ ತೋಷ್ನಿವಾಲ್
1987–88	ಚೊಕ್ಕಲಿಂಗಂ
1988–89	ಅಲಾಷಿಯಸ್ ಸಲ್ಡಾನ
1989–90	ಪಿ. ಜೆ. ಪ್ರಾನ್ಸಿಸ್
1990–91	ಡೀನ್ ಐಸಾಕ್ ಜಾರ್ಜ್

ಅನುಬಂಧ – ೧೪

ಕನ್ನಡ ಸಂಘದ ಮುದ್ರಕರು

ಶ್ರೀ ಶೇಷನಾರಾಯಣ
ವಿಕಾಸ ಮುದ್ರಣ, ಸೌತ್ ಎಂಡ್ ರಸ್ತೆ
ಬೆಂಗಳೂರು-560 004

ಶ್ರೀ ಬಿ. ಗುರುಮೂರ್ತಿ
ಇಳಾ ಮುದ್ರಣ, ಚಾಮರಾಜಪೇಟೆ
ಬೆಂಗಳೂರು–560 018

ಶ್ರೀ ಮುನಿಧರ್ಮಯ್ಯ
ನೇತ್ರಾ ಪ್ರಿಂಟರ್ಸ್, ಚಾಮರಾಜಪೇಟೆ
ಬೆಂಗಳೂರು-560 018

ಶ್ರೀ ಚಿಂತಾಮಣಿ
ಈಸ್ಟರ್ನ್ ಪ್ರೆಸ್, ಬನ್ನೇರಘಟ್ಟ ರಸ್ತೆ
ಬೆಂಗಳೂರು-560 029

ಶ್ರೀ ಹೆಚ್. ವಿ.ಸುಬ್ಬರಾವ್
ವರ್ತಮಾನ ಪ್ರಿಂಟರ್ಸ್
ನಾಗರಬಾವಿ ರಸ್ತೆ
ಬೆಂಗಳೂರು–560 040

ನುಡಿ ಮುದ್ರಣ
ಬಸವನಗುಡಿ, ಮುಸ್ಲಿಂ ಬ್ಲಾಕ್
ಬೆಂಗಳೂರು–560 004

ನ್ಯಾಷನಲ್ ಕಾಲೇಜ್ ಪ್ರೆಸ್
ಬಸವನಗುಡಿ
ಬೆಂಗಳೂರು–560 004

ಓರಿಯಂಟ್ ಪವರ್ ಪ್ರೆಸ್
ಲಾಲ್‌ಬಾಗ್ ರಸ್ತೆ
ಬೆಂಗಳೂರು–560 027

ಸುಧೀಂದ್ರ ಮುದ್ರಣಾಲಯ
ಎಂಟನೇ ಕ್ರಾಸ್, ಮಲ್ಲೇಶ್ವರಂ
ಬೆಂಗಳೂರು–560 003

ಸಾಧನಾ ಪ್ರಿಂಟರ್ಸ್
ಆರ್. ವಿ. ರಸ್ತೆ ಕ್ರಾಸ್
ವಿಶ್ವೇಶ್ವರಪುರಂ
ಬೆಂಗಳೂರು-560 004

ಸಾಗರೀಕ ಎಂಟರ್‌ಪ್ರೈಸಸ್
25ನೇ ಮುಖ್ಯ ರಸ್ತೆ
2ನೇ ಬ್ಲಾಕ್, ಬನಶಂಕರಿ 1ನೇ ಘಟ್ಟ
ಬೆಂಗಳೂರು-560 0:0

ಸತ್ಯಶ್ರೀ ಪ್ರಿಂಟರ್ಸ್
ಚಾಮರಾಜಪೇಟೆ
ಬೆಂಗಳೂರು-560 018

ರಶ್ಮಿ ಮುದ್ರಣ
ಸುಧಾಮನಗರ
ಬೆಂಗಳೂರು-560 027

ಭವರ್ಲಾಲ್‌ರಾಂ ಕಾಲೇಜ್ ಮುದ್ರಣಾಲಯ
ಹೊಸೂರು ರಸ್ತೆ
ಬೆಂಗಳೂರು-560 029

ಸನ್‌ರೈಸ್ ಪ್ರಿಂಟರ್ಸ್
ಶ್ರೀರಾಮಪುರಂ
ಬೆಂಗಳೂರು-560 021

ಅನುಬಂಧ–೧೫

ಕನ್ನಡ ಸಂಘದ ಪ್ರಕಟಣೆಗಳಿಗೆ ಮುಖಪುಟ ವಿನ್ಯಾಸ ನೀಡಿದ

ಕಲಾವಿದರು

ಶಿವರಾಮ ಕಾರಂತ

ಆರ್.ಎಸ್. ನಾಯ್ಡು

ಆರ್.ಎಂ. ಹಡಪದ್

ರಮೇಶ್

ಆರ್. ರಾಮಮೂರ್ತಿ

ಚಂದ್ರನಾಥ್

ಕೆ. ಆನಂದ್

ಬ್ರಾನಿಸ್ಲಾಸ್ ಪೊಡ್ಸಿಡ್ಲಿಯೆ. ಸ. (ಪೋಲೆಂಡ್)

ಕಮಲೇಶ್

ಎಂ. ಎಸ್. ಮೂರ್ತಿ

ಜಿ. ಶ್ರೀನಿವಾಸಮೂರ್ತಿ

ಜಿ. ಕೆ. ಸತ್ಯ

ಎಚ್. ಎನ್. ಸುರೇಶ್

ಸುರೇಶ್ (ಧಾರವಾಡ)

ಕೆ. ಎಸ್. ಅಪ್ಪಾಜಯ್ಯ

ಕೆ. ಎಸ್. ಶ್ರೀನಿವಾಸಮೂರ್ತಿ

ಗುಜ್ಜಾರಪ್ಪ

ಮೋಹನ್ ವರ್ಣೇಕರ್

ರವಿಕುಮಾರ್ ಕಾಶಿ

ಅಮರನಾಥ್

ಎಚ್. ಎ. ಅನಿಲ್‌ಕುಮಾರ್

ಬಾಬು ಈಶ್ವರ ಪ್ರಸಾದ್

ಎಂ. ಎಲ್. ಅಂಚನ್

ಎಚ್. ಎನ್. ನಾಗೇಶ್

ಬಿ. ಎಸ್. ರಾಜಾರಾಂ

ಗಿರಿಧರ ಖಾಸನೀಸ

ಪ್ರತಿಭಾ ನಂದಕುಮಾರ್

ಅನಾಮಿಕ

ಅನುಬಂಧ – ೧೬

೧೫ ಜುಲೈ ೧೯೬೯

ಕ್ರೈಸ್ಟ್ ಕಾಲೇಜು ಪ್ರಾರಂಭವಾದ ದಿನ ಕೆಲಸ ನಿರ್ವಹಿಸಿದ ಸಿಬ್ಬಂದಿ

ಬೋಧನಾ ಸಿಬ್ಬಂದಿ

ರೆ॥ ಫಾ॥ ಮಾಣಿ ಜೈಲ್ಸ್
ರೆ॥ ಫಾ॥ ಪುತ್ತೆನ್ ಕಂಡಮ್
ಡಿ. ಬಾಲಸುಬ್ರಮಣ್ಯಂ
ಕೆ. ಎಸ್. ನಾಗರಾಜನ್
ಎಚ್. ಆರ್. ರಾಮಕೃಷ್ಣರಾವ್
ಎಚ್. ಡಿ. ಸನತ್ಕುಮಾರ ಶಾಸ್ತ್ರಿ
ಧನಸಿಂಗ್ ಫ್ರಾನ್ಸಿಸ್
ಟಿ. ಎಂ. ಸನ್ನಿ
ಕೆ. ಜೆ. ಈಶ್ವರಯ್ಯ
ಸಾಂಬಯ್ಯ
ಸಿ. ಶ್ರೀನಿವಾಸರಾಜು
ಸಿ. ಸಿ. ಜೆಕಾರಿಯಸ್

ಬೋಧಕೇತರ ಸಿಬ್ಬಂದಿ

ಎಫ್. ರಾಬರ್ಟ್ಸ್
ಪಿ. ಬಿ. ಜೇಕಬ್
ಸಿ. ವಿ. ಅಂಥೋಣಿ
ಮಾರ್ಷಲ್ ಡಿಕೂನ
ಗಾಡ್‌ಫ್ರೆ ವೆಸ್ಲಿ
ಟಿ. ಅಬ್ರಹಾಂ ಜೋಸೆಫ್
ಪಿ. ಓ. ವರ್ಗೀಸ್

ಆಧಾರ : ಹಾಜರಾತಿ ದಾಖಲೆ ಕಡತ

ಅನುಬಂಧ-೧೨

ಕನ್ನಡ ಸಂಘದ ಪ್ರಕಟನೆಗಳು

ಕಾವ್ಯ, ಕಥೆ, ನಾಟಕ, ಕಾದಂಬರಿ, ಪ್ರಬಂಧ

ನದಿಯ ಮೇಲಿನ ಗಾಳಿ	1973	ಕ. ವೆಂ. ರಾಜಗೋಪಾಲ	6–00
ಕ್ರಿಸ್ತಾಂಜಲಿ	1973	ಸಂ॥ ನರಹಳ್ಳಿ ಬಾಲಸುಬ್ರಹ್ಮಣ್ಯ ಲಕ್ಷಣ ಕೊಡಸೆ	4–00
ಮಿಲರೇಪ	1977	ಎಚ್. ಎಸ್. ಶಿವಪ್ರಕಾಶ್	4–00
ಟುವಟಾರ	1977	ಬಿ. ಆರ್. ಲಕ್ಷ್ಮಣರಾವ್	9–00
ಬೆರಳಸಂದಿಯ ಬದುಕು	1978	ಎನ್. ವಿ. ಭಾಗ್ಯಲಕ್ಷ್ಮಿ	6–00
ಶಬ್ದದೊಳಗಣ ನಿಶ್ಶಬ್ದ	1981	ಡಿ. ವಿ. ರಾಜಶೇಖರ್	10–00
ನಾವು ಹುಡುಗಿಯರೇ ಹೀಗೆ	1983	ಪ್ರತಿಭಾ ನಂದಕುಮಾರ್	10–00
ಮಳೆ ಬಿದ್ದ ನೆಲದಲ್ಲಿ	1983	ಎಚ್. ಎಸ್. ಶಿವಪ್ರಕಾಶ್	10–00
ಮೊದಲು ಗೊತ್ತಿರಲಿಲ್ಲ	1984	ಕೆ. ಎಂ. ಮುನಿಕೃಷ್ಣಪ್ಪ	12–00
ಕೃಷ್ಣ ಸಂದೇಶ	1984	ಕಾ. ಸು. ರಾಮಚಂದ್ರ	2–00
ಹಕ್ಕಿ ಪಲ್ಟಿ	1987	ಎಸ್. ಮಂಜುನಾಥ್	12–00
ಈ ತನಕ	1988	ಪ್ರತಿಭಾ ನಂದಕುಮಾರ್	12–00
ದೆಹಲಿಗೆ ಬಂದ ಹೊಸವರ್ಷ	1988	ಬಿ. ಸಿ. ರಾಮಚಂದ್ರಶರ್ಮ	20–00
ಅಣುಕ್ಷಣ ಚರಿತೆ	1990	ಎಚ್. ಎಸ್. ಶಿವಪ್ರಕಾಶ್	40–00
ರಸ್ತೆಯಂಚಿನ ಗಾಡಿ	1991	ಪ್ರತಿಭಾ ನಂದಕುಮಾರ್	25–00
ಪಾರ್ಥೇನಿಯಂ (ಕಥೆಗಳು)	1978	ಕ. ನಂ. ನಾಗರಾಜು	2–00
ಆಯ್ದ ಕಥೆಗಳು	1980	ಕ. ವೆಂ. ರಾಜಗೋಪಾಲ	8–00
ಮಾಯಾದರ್ಪಣ	1991	ಎಂ. ಎಸ್. ಶ್ರೀರಾಮ್	26–00
ಪ್ರೇತಗಳು (ನಾಟಕ)	1974	ಟಿ. ಜಿ. ರಾಘವ	4–00
ಆಸ್ಫೋಟ (ನಾಟಕ)	1981	ಟಿ. ಎನ್. ಸೀತಾರಾಮ್	10–00
ಅಗ್ನಿಸಾಕ್ಷಿ (ನಾಟಕ)	1985	ಶ್ರೀರಂಗ	10–00

ಈಶ್ವರ ಅಲ್ಲಾ (ಕಾದಂಬರಿ)	1979	ಜಿ. ಕೆ. ಗೋವಿಂದರಾವ್	6-00
ಕ್ರಿಸ್ತನ ಅನುಕರಣೆ	1979	ಥಾಮಸ್ ಎ. ಕೆಂಪಿಸ್ ; ಅನು, ಪ್ರಶಾಂತ್ ವಲೇರಿಯನ್ ಮೂಡ್ತ	14-00
ಸಮಗ್ರ ಲಲಿತ ಪ್ರಬಂಧಗಳು	1988	ಎ. ಎನ್. ಮೂರ್ತಿರಾವ್	75-00
ನಮ್ಮ ಪ್ರೀತಿಯ ಕ್ರಿಕೆಟ್ (ಲಲಿತ ಪ್ರಬಂಧಗಳು)	1988	ಕೆ. ಸತ್ಯನಾರಾಯಣ	15-00
ವಿಜ್ಞಾನ-ವಿಮರ್ಶೆ (ಪೈ)	1976	ಎಚ್. ಆರ್. ಕೃಷ್ಣಮೂರ್ತಿ	5-00
ಪ್ರತಿಷ್ಠಿತ ಶಕ್ತಿ ಮತ್ತು ಕನ್ನಡ ಸಾಹಿತ್ಯ	1973	ಕಿ. ರಂ. ನಾಗರಾಜ	1-00
'ರತ್ನನ ಪದಗಳು' ಕುರಿತು	1978	ವಿವಿಧ ಲೇಖಕರು	3-00
ವಿಶ್ಲೇಷಣೆ	1981	ಎಚ್. ಎಸ್. ರಾಘವೇಂದ್ರರಾವ್	15-00
ನಿಲುವು	1‘89	ಎಚ್.ಎಸ್. ರಾಘವೇಂದ್ರರಾವ್	60-00
ನಾಲ್ಕು ದಲಿತೀಯ ಕಾದಂಬರಿಗಳು	1991	ಸಂ॥ ಡಾ. ಅರವಿಂದ ಮಾಲಗತ್ತಿ	10-00
ಬೇಂದ್ರೆ ಕಾವ್ಯ	1986	ಡಾ॥ ರಂ. ಶ್ರೀ. ಮುಗಳಿ	18-00
ಸಾಹಿತ್ಯ ತತ್ವ ; ಬೇಂದ್ರೆ ದೃಷ್ಟಿ	1984	ಡಾ॥ ಕೆ. ವಿ. ನಾರಾಯಣ	5-00
ಬೇಂದ್ರೆ ಕಾವ್ಯದಲ್ಲಿ ಪ್ರೇಮದ ಆವಿಷ್ಕಾರ : ಸ್ವರೂಪಗಳು	1989	ಡಾ॥ ಬಸವರಾಜ ಕಲ್ಗುಡಿ	6-00
ಬೇಂದ್ರೆ ಕಾವ್ಯದಲ್ಲಿ ಅನುಭವದ ಒಂದು ನಿಚ್ಚಣಿಕೆ	1986	ಡಾ॥ ವಿಜಯಾದಬ್ಬೆ	5-00
ಬೇಂದ್ರೆಯವರ ಕಾವ್ಯ ಶೈಲಿ	1987	ಡಾ॥ ಕೆ. ವಿ. ತಿರುಮಲೇಶ್	6-00
ಬೇಂದ್ರೆ ಕಾವ್ಯ : ಸಂಪ್ರದಾಯ ಮತ್ತು ಸ್ವಂತಿಕೆ	1988	ಡಾ॥ ರಾಜೇಂದ್ರ ಚೆನ್ನಿ	8-00
ಮೇಘದೂತ : ಕಾಳಿದಾಸ ಮತ್ತು ಬೇಂದ್ರೆ	1988	ಡಾ॥ ಎಚ್. ಎಸ್. ವೆಂಕಟೇಶ ಮೂರ್ತಿ	6-00
ಬೇಂದ್ರೆಯವರ ಕಾವ್ಯ	1991	ಗೋಪಾಲಕೃಷ್ಣ ಅಡಿಗ	8-00
ಅನ್ಯಭಾಷಾ ಕೃತಿಗಳು			
ನಾಟ್ಟುಪುರ ನಂಬಿಕೆಗಳ್ (ತಮಿಳು ಜಾನಪದ)	1976	ಡಾ॥ ಎಸ್. ಕಾರ್ಲೋಸ್	5-00

Burnt smoke and wood ash (poems)	1978	Tejaswini Niranjana	8-00
Liquid Sapphire (poems)	1978	Tejaswini Niranjana	6-00
Subramanya Bharati	1985	Eminent Scholars Ed. P. Krishnaswami	6-00

ವಿದ್ಯಾರ್ಥಿ ವಿಕಾಸ ಮಾಲೆಗಳು

ಡಾ॥ ಅ. ನ. ಕೃ. ಸ್ಮಾರಕ ಅಂತರ ಕಾಲೇಜು ಲೇಖನ ಸ್ಪರ್ಧೆ :
ಡಾ॥ ಜಿ. ಪಿ. ರಾಜರತ್ನಂ ವಿದ್ಯಾರ್ಥಿ ವಿಕಾಸ ಮಾಲೆ ಗ್ರಂಥದಾನ
'ಬಹುಮಾನಿತ ಲೇಖನಗಳು' (18 ಸಂಪುಟಗಳು)

ಡಾ॥ ದ. ರಾ. ಬೇಂದ್ರೆ ಸ್ಮೃತಿ ಅಂತರ ಕಾಲೇಜು ಕವನ ಸ್ಪರ್ಧೆ :
'ಗೆಳೆಯರ ಗುಂಪು' ವಿದ್ಯಾರ್ಥಿ ವಿಕಾಸ ಮಾಲೆ

ಅವರು ಬೆಳೆಸಿದ ಗಿಡಗಳು	1983	ವಿದ್ಯಾರ್ಥಿಗಳು
ಮಿಣಿ ಮಿಣಿ ಬೆಳಕು	1984	ವಿದ್ಯಾರ್ಥಿಗಳು
ಹಲವು ರೆಕ್ಕೆಯ ಹಕ್ಕಿ	1985	ವಿದ್ಯಾರ್ಥಿಗಳು
ಪ್ರತಿದಿನದ ಸೂರ್ಯ	1986	ವಿದ್ಯಾರ್ಥಿಗಳು
ನನ್ನ ಪಾಡಿಗೆ ನಾನು	1987	ವಿದ್ಯಾರ್ಥಿಗಳು
ಕಾಡ ನವಿಲಿನ ಹೆಜ್ಜೆ	1988	ವಿದ್ಯಾರ್ಥಿಗಳು
ಬೆಳಗಿನ ಬೆರಗು	1989	ವಿದ್ಯಾರ್ಥಿಗಳು
ದಾರಿಗೆ ಹಚ್ಚಿದ ದೀಪ	1990	ವಿದ್ಯಾರ್ಥಿಗಳು
ಮಿಂಚು ಹುಳುಗಳು	1991	ವಿದ್ಯಾರ್ಥಿಗಳು

ಅನುಬಂಧ – ೧೮

ಈ ಸಾಧನೆ ಸಣ್ಣ ವಿಷಯವಲ್ಲ....

ಐವತ್ತನೆಯ ಪುಸ್ತಕದ ಬಿಡುಗಡೆ ಸಂದರ್ಭದ ವರದಿ

ಎನ್. ಎಸ್. ಉಮೇಶ್
ಪ್ರಥಮ ಬಿ.ಎಸ್ಸಿ.,

31 ಜನವರಿ 1988

ಕ್ರೈಸ್ಟ್ ಕಾಲೇಜು ಕನ್ನಡ ಸಂಘದ ಐವತ್ತನೇ ಪುಸ್ತಕದ ಬಿಡುಗಡೆ ಮಾಡಿದ ಡಾ॥ ಜಿ.ಎಸ್. ಶಿವರುದ್ರಪ್ಪನವರ ಭಾಷಣದ ಸಂಕ್ಷಿಪ್ತ ರೂಪ ಮತ್ತು ವರದಿ.

"ಕ್ರೈಸ್ಟ್ ಕಾಲೇಜು ಕನ್ನಡ ಸಂಘ ಪ್ರಕಟಿಸಿರುವ ಹಿರಿಯರಾದ ಪ್ರೊ॥ ಎ. ಎನ್. ಮೂರ್ತಿರಾಯರ 'ಸಮಗ್ರ ಪ್ರಬಂಧಗಳ' ಬಿಡುಗಡೆ ಸಮಾರಂಭದಲ್ಲಿ ಒಂದೆರಡು ಮಾತುಗಳನ್ನಾಡುವ ಅವಕಾಶ ಸಿಕ್ಕಿದ್ದಕ್ಕಾಗಿ ನನಗೆ ತುಂಬಾ ಸಂತೋಷ ವಾಗುತ್ತಿದೆ."

"ಕ್ರೈಸ್ಟ್ ಕಾಲೇಜು ಕನ್ನಡ ಸಂಘದ ಈ ಐವತ್ತನೇ ಪುಸ್ತಕ, ನನ್ನಲ್ಲಿ ಆಶ್ಚರ್ಯ ಹಾಗೂ ಸಂತೋಷವನ್ನು ಉಂಟುಮಾಡಿದೆ. ಮೊದಲನೇ ಪುಸ್ತಕ ಬಿಡುಗಡೆ ಮಾಡುವ ಅವಕಾಶವೂ ನನಗೇ ಸಿಕ್ಕಿತ್ತು. ಆಗ ನನಗೆ ಈ ಸಂಘ ಇಷ್ಟೊಂದು ಫಲಪ್ರದವಾಗುತ್ತದೆ ಎನಿಸಿರಲಿಲ್ಲ. ಮೊದಲನೇ ಹಾಗೂ ಐವತ್ತನೇ ಪುಸ್ತಕಗಳನ್ನು ಬಿಡುಗಡೆ ಮಾಡುವ ಅವಕಾಶ ಕಲ್ಪಿಸಿಕೊಟ್ಟಿದ್ದಕ್ಕಾಗಿ ನನಗೆ ಸಹಜವಾಗಿ ಸಂತೋಷ ವಾಗಿದೆ. ಕ್ರೈಸ್ಟ್ ಕಾಲೇಜು ಮಾಡಿರುವ ಈ ಸಾಧನೆ ಸಣ್ಣ ವಿಷಯವಲ್ಲ. ಕನ್ನಡ ಸಂಘ ಎಷ್ಟೊಂದು ಶಕ್ತಿ ಸಾಮರ್ಥ್ಯಗಳಿಂದ ಕೂಡಿದೆ ಎಂಬುದನ್ನು ಎತ್ತಿ ತೋರಿಸು ತ್ತದೆ."

"ನವೋದಯದ ಹಿನ್ನೆಲೆಯ ಕಾಲದಲ್ಲಿ ಒಂದು ಹೊಸ ಚಳವಳಿ ಪ್ರಾರಂಭಿಸಿ ದವರು, ಕ್ರೈಸ್ತ ಬಾಂಧವರು. ಕನ್ನಡ ಸಾಹಿತ್ಯಕ್ಕೆ ಕ್ರೈಸ್ತರ ಕೊಡುಗೆ ಅಮೋಘ

ಷಾಮುದು. ಅಂಥ ಕ್ರೈಸ್ತ ಧರ್ಮದವರು ನಡೆಸುತ್ತಿರುವ ಕ್ರೈಸ್ಟ್ ಕಾಲೇಜಿನಲ್ಲಿ ಕನ್ನಡ ಪ್ರಬುದ್ಧ ಮಟ್ಟಕ್ಕೆ ಬರುತ್ತಿದೆ. ಇಂಥ ಕೆಲಸ ಕರ್ನಾಟಕದ ಬೇರೆ ಯಾವ ಕನ್ನಡ ಸಂಘವೂ ಈ ಪ್ರಮಾಣದಲ್ಲಿ ನಡೆಸುತ್ತಿಲ್ಲ ಎಂದರೆ ತಪ್ಪಾಗಲಾರದು."

"ಪ್ರಾತಃಸ್ಮರಣೀಯರಾದ ಡಾ॥ ಎ. ಆರ್. ಕೃಷ್ಣಶಾಸ್ತ್ರಿಗಳ ಹಾಗೂ ಡಾ॥ ಜಿ. ಪಿ. ರಾಜರತ್ನಂ ಅವರ ಕೆಲಸವೇನೆಂದರೆ ವಿದ್ಯಾರ್ಥಿಗಳಲ್ಲಿ ಅಡಗಿರುವ ಪ್ರತಿಭೆಯನ್ನು ಗುರುತಿಸಿ, ಅದು ಅರಳುವುದಕ್ಕೆ ಪ್ರೋತ್ಸಾಹ ನೀಡುವುದು. ಕ್ರೈಸ್ಟ್ ಕಾಲೇಜ್ ಕನ್ನಡ ಸಂಘವೂ ಇದೇ ಕಾರ್ಯವನ್ನು ಮುಂದುವರಿಸುತ್ತಿದೆ. ಸಾಹಿತ್ಯದ ಸೃಜನಾತ್ಮಕ ಶಕ್ತಿಯ ಜೊತೆಗೆ, ಸಂಘಟನಾ ಶಕ್ತಿಯೂ ಕೂಡಿಕೊಂಡಾಗ ದೊಡ್ಡ ಕೆಲಸ ಸಾಧ್ಯವಾಗುತ್ತದೆ."

"ಈ ಕನ್ನಡ ಸಂಘ ಹದಿನೈದು ವರ್ಷಗಳ ಹಿಂದೆ ಪ್ರಾರಂಭವಾಗಿ ಈ ಆಕಾರವನ್ನು ಪಡೆಯಲು ಶ್ರಮಿಸಿದವರು ಶ್ರೀನಿವಾಸರಾಜು. ಕಣ್ಣಿಗೆ ಕಾಣದ ಹಾಗೆ ನಿಂತು ಕೆಲಸ ಮಾಡುವ ಅವರನ್ನು ಈ ಸಂದರ್ಭದಲ್ಲಿ ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ."

"ಐವತ್ತನೆಯ ಪುಸ್ತಕವಾಗಿ ಮೂರ್ತಿರಾಯರ ಸಮಗ್ರ ಲಲಿತ ಪ್ರಬಂಧಗಳನ್ನು ಪ್ರಕಟಿಸುತ್ತಿರುವುದು ಮೆಚ್ಚುಗೆಯ ಕೆಲಸ. ಅವರು ಕಥಾ ಸಾಹಿತ್ಯವನ್ನಾಗಲಿ ಅಥವಾ ನಮ್ಮಂತೆ ಕವಿತೆಗಳ ರಚನೆಗೆ ಕೈಹಾಕಿಲ್ಲ. ಅಪರೂಪದ ಸಾಹಿತ್ಯ ಪ್ರಕಾರವಾದ ಪ್ರಬಂಧ ಸಾಹಿತ್ಯವನ್ನು ಮೊತ್ತಮೊದಲು ಕನ್ನಡದಲ್ಲಿ ನೆಟ್ಟು, ಅದಕ್ಕೆ ವಿಶಿಷ್ಟವಾದ ಸ್ಥಾನವನ್ನು ತಂದುಕೊಟ್ಟಿದ್ದಾರೆ. ಕನ್ನಡದಲ್ಲಿ ಬೇರೆ ಯಾರೂ ಅವರು ಏರಿದ ಮಟ್ಟಕ್ಕೆ ಏರಲಿಲ್ಲ. ಹೀಗಾಗಿ ಈ ರೀತಿಯಲ್ಲಿ ಸಾಧನೆಗೈದ ಏಕೈಕ ಸಾಹಿತಿ ಇವರು. ಮೂರ್ತಿರಾಯರು ಕನ್ನಡ ಸಾಹಿತ್ಯದಲ್ಲಿ ಅತ್ಯಂತ ಎತ್ತರದ ಸಾಧನೆ ಮಾಡಿದ್ದಾರೆ. ಅವರ ಪ್ರಬಂಧಗಳಲ್ಲಿ ಪ್ರಸನ್ನತೆ, ಉಲ್ಲಾಸ, ಮಾನವೀಯತೆ, ಸಾವಧಾನದ ಗತಿ ಕಂಡುಬರುತ್ತದೆ."

"ಹೀಗಾಗಿ ಕ್ರೈಸ್ಟ್ ಕಾಲೇಜು ಕನ್ನಡ ಸಂಘದ ಐವತ್ತನೆಯ ಪುಸ್ತಕವಾದ ಮೂರ್ತಿರಾಯರ ಸಮಗ್ರ ಲಲಿತ ಪ್ರಬಂಧಗಳನ್ನು ಬಿಡುಗಡೆ ಮಾಡುವ ಗೌರವವನ್ನು ದೊರಕಿಸಿಕೊಟ್ಟ ನಿಮಗೆಲ್ಲರಿಗೂ ನನ್ನ ಕೃತಜ್ಞತೆಗಳು."

ಸಮಾರಂಭಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಪ್ರೊ॥ ಎಲ್. ಎಸ್. ಶೇಷಗಿರಿರಾಯರು ಕನ್ನಡ ಸಂಘದ ಸಾಧನೆಯ ಬಗ್ಗೆ, ಮೂರ್ತಿರಾಯರ ಪ್ರಬಂಧಗಳ ಬಗ್ಗೆ ಅಚ್ಚುಕಟ್ಟಾಗಿ ಮಾತನಾಡಿದರು. ಪ್ರೊ॥ ಎ.ಎನ್. ಮೂರ್ತಿರಾಯರು

ವಿದ್ಯಾರ್ಥಿಗಳಿಗೆ ತಮ್ಮ ಸಹಜ ತಿಳಿಹಾಸ್ಯದಿಂದ ಬದುಕಿನಲ್ಲಿ ರೂಢಿಸಿಕೊಳ್ಳಬೇಕಾದ ಅಂಶಗಳ ಕಡೆಗೆ ವಿದ್ಯಾರ್ಥಿಗಳ ಗಮನ ಸೆಳೆದರು. ಈ ಸಮಾರಂಭದ ನಿರೂಪಣೆಯ ಕಾರ್ಯವನ್ನು ಪ್ರೊ॥ ಎಚ್. ಆರ್. ರಾಮಕೃಷ್ಣರಾವ್ ಅವರು ವಹಿಸಿದ್ದರು· ಸಭೆಯ ಅಧ್ಯಕ್ಷತೆಯನ್ನು ಎಲ್ಲರಿಗೂ ಪ್ರೀತಿಪಾತ್ರರಾದ ಪ್ರಿನ್ಸಿಪಾಲ್ ರೆ॥ ಫಾ॥ ಅಗಸ್ಟಿನ್ ಜೋಸೆಪ್ ವಹಿಸಿದ್ದರು. ಪ್ರೊ॥ ಎಚ್.ಡಿ.ಎಸ್.ಕೆ. ಶಾಸ್ತ್ರಿಗಳು ವಂದನಾರ್ಪಣೆ ಮಾಡುತ್ತಾ, ಅನಿರೀಕ್ಷಿತವಾಗಿ ಎಲ್ಲೊ ಹಿಂದೆ ಕುಳಿತಿದ್ದ ಶ್ರೀನಿವಾಸರಾಜು ಅವರನ್ನು ಎಳೆತಂದು ಮಾಲಾರ್ಪಣೆ ಮಾಡಿಯೇ ಬಿಟ್ಟರು.

....ಈಗ ವಾಮನನಾಗಿರುವ
ಕ್ರೈಸ್ಟ್ ಕಾಲೆಜ್ ಕನ್ನಡ ಸಂಘವು
ಕಾಲಕ್ರಮದಲ್ಲಿ
ತ್ರಿವಿಕ್ರಮನಾಗುವ ಬಗ್ಗೆ
ಸಂದೇಹವಿಲ್ಲ....

ಜಿ. ಪಿ. ರಾಜರತ್ನಂ

ವಿದ್ಯಾರ್ಥಿ ಸಂಘ
ಕ್ರೈಸ್ಟ್ ಕಾಲೇಜ್, ಬೆಂಗಳೂರು